ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 23 ಮಂಗಳವಾರ 2026

ಸಂಪುಟ: 47 | ಸಂಚಿಕೆ: 68 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮಂತ್ರಿಮಂಡಲ ವಿಸ್ತರಣೆಗೆ ಸದ್ಯ ವರಿಷ್ಠರ ಬ್ರೇಕ್

ಖಾತೆ ಹಂಚಿಕೆ ಅಸಮಾಧಾನ ನಿವಾರಣೆ ಆಗುವವರೆಗೆ ಕಾಯಲು ಸಂದೇಶ


ಬೆಂಗಳೂರು, ಜೂ. 22 (ಕೆಎಂಶಿ)– ಮಂತ್ರಿಮಂಡಲ ವಿಸ್ತರಿಸಲು ಮುಂದಾಗಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ದೆಹಲಿ ವರಿಷ್ಠರು ಬ್ರೇಕ್ ಹಾಕಿದ್ದಾರೆ.

ಸಂಪುಟ ವಿಸ್ತರಿಸಿ, 18 ಮಂದಿಯನ್ನು ಸೇರ್ಪಡೆ ಮಾಡಿಕೊಳ್ಳಲು ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಮಂಗಳವಾರ ದೆಹಲಿ ಪ್ರವಾಸ ಕೈಗೊಳ್ಳಬೇಕಿತ್ತು.

ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ವರಿಷ್ಠರೇ 23 ರಂದು ದೆಹಲಿಗೆ ಬರುವಂತೆ ಈ ಮೊದಲು ಸೂಚಿಸಿದ್ದರು. ಆದರೆ, ಏಕಾಏಕಿ ನಾವು ಹೇಳುವವರೆಗೂ ನೀವು ದೆಹಲಿಗೆ ಬರುವುದು ಬೇಡ ಎಂದು ಶಿವಕುಮಾರ್ ಹಾಗೂ ಹರಿಪ್ರಸಾದ್ ಅವರಿಗೆ ಸಂದೇಶ ರವಾನಿಸಿದ್ದಾರೆ. ಇದರ ಹಿನ್ನೆಲೆಯಲ್ಲಿ ಹರಿಪ್ರಸಾದ್ ತಿಂಗಳ ಅಂತ್ಯದವರೆಗೂ ರಾಜ್ಯ ಪ್ರವಾಸ ಕೈಗೊಂಡು ಪಕ್ಷ ಸಂಘಟನೆಗೆ ಮುಂದಾಗಿದ್ದಾರೆ.

ಕಳೆದ ಜೂನ್ 3 ರಂದು ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ತಮ್ಮ ಸಂಪುಟಕ್ಕೆ 13 ಮಂದಿಯನ್ನು ಸೇರ್ಪಡೆ ಮಾಡಿಕೊಂಡು ಖಾತೆಗಳ ಹಂಚಿಕೆ ಮಾಡಿದ್ದರು.

ಖಾತೆ ಹಂಚಿಕೆ ಬಗ್ಗೆ ನಿಷ್ಠಾವಂತ ಕಾಂಗ್ರೆಸ್ಸಿಗರಾಗಿರುವ ಸಚಿವ ಕೃಷ್ಣಬೈರೇಗೌಡ, ಮುನಿಯಪ್ಪ, ರಾಮಲಿಂಗಾರೆಡ್ಡಿ, ಅಲ್ಲದೆ, ಸತೀಶ್ ಜಾರಕಿ ಹೊಳಿ ಸೇರಿದಂತೆ ಕೆಲವು ಮಂತ್ರಿಗಳು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು. ಸರ್ಕಾರ ರಚನೆ ಸಂದರ್ಭದಲ್ಲಿ ಸಚಿವರಿಂದ ಉಂಟಾದ ಅಸಮಾಧಾನ ಹೋಗಲಾಡಿಸಲು ರಾಜ್ಯ ಉಸ್ತುವಾರಿ ಹೊಣೆಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ಸುರ್ಜೇವಾಲ, ಬೆಂಗಳೂರಿನಲ್ಲೇ ಬಿಡಾರ ಹೂಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು.



ತಿಂಗಳಾಂತ್ಯಕ್ಕೆ ಮಂತ್ರಿಮಂಡಲ ವಿಸ್ತರಣೆಯಾಗುತ್ತದೆ ಎಂಬ ಮಾಹಿತಿ ದೊರೆಯುತ್ತಿದ್ದಂತೆ ಕಾಂಗ್ರೆಸ್‌ನ 50–60 ಶಾಸಕರು ದೆಹಲಿಯಲ್ಲೇ ಬಿಡಾರ ಹೂಡಿ, ವರಿಷ್ಠರ ಮನವೊಲಿಸುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ ಆಕಾಂಕ್ಷಿಗಳಿದ್ದಾರೆ ಆದರೆ ಮಂತ್ರಿಮಂಡಲಕ್ಕೆ ಕೇವಲ 18 ಮಂದಿಯನ್ನು ತೆಗೆದುಕೊಳ್ಳುವುದರಿಂದ ನಂತರ ಸರ್ಕಾರ ಮತ್ತು ಪಕ್ಷದಲ್ಲಿ ಭಿನ್ನಾಭಿಪ್ರಾಯ ಮತ್ತು ಬಂಡಾಯಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ.

ಮಂತ್ರಿಮಂಡಲದ ವಿಸ್ತರಣೆ ತಿಳಿಯಾಗುವವರೆಗೂ ಯಾವುದೇ ತೀರ್ಮಾನ ಕೈಗೊಳ್ಳುವುದು ಬೇಡ ಎಂದು ವರಿಷ್ಠರು ನಿರ್ಧರಿಸಿ, ಅದರ ಸಂದೇಶವನ್ನು ರಾಜ್ಯ ನಾಯಕರುಗಳಿಗೆ ನೀಡಿದ್ದಾರೆ.

ವರಿಷ್ಠರ ಸೂಚನೆ ಹಿನ್ನೆಲೆಯಲ್ಲಿ ಸೋಮವಾರವೇ ದೆಹಲಿಗೆ ತೆರಳಬೇಕಿದ್ದ ಸಿದ್ದರಾಮಯ್ಯ ತಮ್ಮ ನಿರ್ಧಾರ ಬದಲಿಸಿ, ನಗರದಲ್ಲೇ ಉಳಿದುಕೊಂಡಿದ್ದಾರೆ.

ಹರಿಪ್ರಸಾದ್ ರಾಜ್ಯ ಪ್ರವಾಸ ಕೈಗೊಂಡರೇ, ಪರಮೇಶ್ವರ್ ಅನಾರೋಗ್ಯದಿಂದ ಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಮುಖ್ಯಮಂತ್ರಿಯವರು ಮಾತ್ರ ಅಭಿವೃದ್ಧಿ ಸಭೆಗಳನ್ನು ನಡೆಸಲು ಮುಂದಾಗಿದ್ದಾರೆ.

ಸಂಪುಟ ಸೇರ್ಪಡೆಗೆ ಮ್ಯಾನೇಜ್ಮೆಂಟ್, ಪೇಮೆಂಟ್ ಕೋಟಾ!!

ಸಚಿವ ಸ್ಥಾನ ಆಕಾಂಕ್ಷಿಗಳಿಂದ ಬಾರೀ ಪ್ರಮಾಣದಲ್ಲಿ ಹಣ ವಸೂಲಿ



ಬೆಂಗಳೂರು: ಸಂಪುಟ ಸೇರ್ಪಡೆ ವಿಷಯದಲ್ಲಿ ಮ್ಯಾನೇಜ್‌ಮೆಂಟ್ ಕೋಟಾ ನಡೆಯುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು. ಬೆಂಗಳೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಕೇಂದ್ರ ಸಚಿವರು, ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಮಂತ್ರಿಯಾಗಲು ಮ್ಯಾನೇಜ್‌ಮೆಂಟ್ ಇಲ್ಲವೇ ಪೇಮೆಂಟ್ ಕೋಟಾದಲ್ಲಿ ಸಚಿವರಾಗಲು ದೊಡ್ಡ ಪ್ರಮಾಣದಲ್ಲಿ ಲಾಬಿ ನಡೆಯುತ್ತಿದೆ ಎಂದು ಆರೋಪಿಸಿದರು. ಸಂಪುಟ ಆಕಾಂಕ್ಷಿಗಳಿಂದ ■6ನೇ ಪುಟಕ್ಕೆ

ಗೃಹ ಕಚೇರಿ 'ಕೃಷ್ಣಾ'ದಲ್ಲಿ ಮುಖ್ಯಮಂತ್ರಿ ಭೇಟಿ

ಬೆಂಗಳೂರು, ಜೂ. 22 (ಕೆಎಂಶಿ)–ಇನ್ನು ಮುಂದೆ ಸಾರ್ವಜನಿಕರು, ಶಾಸಕರು, ಪಕ್ಷದ ಮುಖಂಡರು, ಕಾರ್ಯಕರ್ತರು ಸೇರಿದಂತೆ ಎಲ್ಲರನ್ನೂ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಭೇಟಿ ಮಾಡುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಅನಿವಾರ್ಯ ಕಾರಣಗಳಿಂದ ಇನ್ನು ಮುಂದೆ ಸದಾಶಿವನಗರ ನಿವಾಸದಲ್ಲಿ ಯಾರನ್ನೂ ಭೇಟಿ ಮಾಡುವುದಿಲ್ಲ, ಯಾರೂ ಇಲ್ಲಿಗೆ ಬರುವ ತೊಂದರೆ ತೆಗೆದುಕೊಳ್ಳಬೇಡಿ ಹಾಗೂ ಅನ್ಯಥಾ ಭಾವಿಸಬೇಡಿ ಎಂದು ಅವರು ಮಾಧ್ಯಮ ಹೇಳಿಕೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಡೀಸೆಲ್ ದರ ಏರಿಕೆ ಹಿನ್ನೆಲೆ

ಬಸ್ ಪ್ರಯಾಣ ದರ ಶೇ.44ರಷ್ಟು ಹೆಚ್ಚಿಸಲು ಸರ್ಕಾರಕ್ಕೆ ಬೇಡಿಕೆ

ಬೆಂಗಳೂರು, ಜೂ. 22 (ಕೆಎಂಶಿ)– ಪೆಟ್ರೋಲ್, ಡಿಸೇಲ್ ದರ ಹೆಚ್ಚಳ ಹಿನ್ನೆಲೆಯಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮಗಳು ಪ್ರಯಾಣಿಕರ ಮೇಲೆ ಭಾರೀ ಹೊರೆ ಹೇರಲು ಮುಂದಾಗಿವೆ.

ರಸ್ತೆ ಸಾರಿಗೆ ನಿಗಮಗಳಿಂದ ಬಸ್ ಟಿಕೆಟ್ ದರವನ್ನು ಶೇಕಡ 44 ರಷ್ಟು ಹೆಚ್ಚಿಸಲು ಅವಕಾಶ ಮಾಡಿಕೊಡಬೇಕೆಂದು ಸಾರಿಗೆ ಸಚಿವ ಬೈರತಿ ಸುರೇಶ್, ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದಾರೆ. ನಗರ ಸಾರಿಗೆ ದರವನ್ನು ಶೇಕಡ 44 ರಷ್ಟು, ಗ್ರಾಮೀಣ ಸಾರಿಗೆ ಶೇಕಡ 33 ರಷ್ಟು ಟಿಕೆಟ್ ದರ ಹೆಚ್ಚಿಸಲು ಅವಕಾಶ ಮಾಡಿಕೊಡಬೇಕು.

ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡಿಸೇಲ್ ದರವನ್ನು ಕಾಲಾನುಕಾಲಕ್ಕೆ ಹೆಚ್ಚಳ ಮಾಡಿ, ಸಾರಿಗೆ ಸಂಸ್ಥೆ ಮೇಲೆ ಬಾರಿ ಹೊರೆ ಬಿದ್ದಿದೆ. ಶಕ್ತಿ ಯೋಜನೆಯಡಿ, ಮಹಿಳೆಯರಿಗೆ ರಾಜ್ಯಾದ್ಯಂತ ಉಚಿತ ಪ್ರಯಾಣ ಮಾಡಲು ಅವಕಾಶ ಮಾಡುವುದರ ಜೊತೆಗೆ ವಿದ್ಯಾರ್ಥಿಗಳಿಗೂ ಇದೇ ಯೋಜನೆಯನ್ನು ಮುಂದುವರೆಸಲಾಗಿದೆ.

ತೈಲ ಬೆಲೆ ಹೆಚ್ಚಳದಿಂದ ಪ್ರತಿ ತಿಂಗಳು ಬರೋಬ್ಬರಿ 40 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ನಷ್ಟವಾಗುತ್ತಿದೆ. ವಾರ್ಷಿಕವಾಗಿ ನಿಗಮಗಳ ನಷ್ಟದ ಪ್ರಮಾಣ 480 ಕೋಟಿ ರೂ. ದಾಟುವ ಆತಂಕ ಎದುರಾಗಿದೆ. ನಿಗಮಗಳಿಗೆ ಕೇವಲ ಡೀಸೆಲ್ ದರ ಮಾತ್ರವಲ್ಲದೆ ಇತರೆ ಆರ್ಥಿಕ ಹೊರೆಗಳೂ ಬೆನ್ನುಬಿದ್ದಿವೆ. ಬರುವ ಜುಲೈ ತಿಂಗಳಿನಿಂದ ಸಾರಿಗೆ ನೌಕರರಿಗೆ ಶೇ. 12.5 ರಷ್ಟು ಹೊಸ ವೇತನವನ್ನು ನೀಡಬೇಕಾಗಿದೆ.

ಪರಿಚಯಸ್ಥನ ನಿರಂತರ ಕಿರುಕುಳ, ಬೆದರಿಕೆ, ಬ್ಲಾಕ್‌ಮೇಲ್ ಹಿನ್ನೆಲೆ

2 ದಿನದಲ್ಲಿ ಹಸೆಮಣೆ ಏರಬೇಕಿದ್ದ ಯುವತಿ ತಂದೆ–ತಾಯಿಯೊಂದಿಗೆ ವಿಷ ಸೇವಿಸಿ ಆತ್ಮಹತ್ಯೆ

- ಟಿ.ನರಸೀಪುರ ತಾಲೂಕು ಹಳೆ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಘೋರ ದುರಂತ
- ಗ್ರಾಮದ ಪರಿಚಯಸ್ಥ ಉಲ್ಲಾಸ್‌ಗೌಡನ ಅಟ್ಟಹಾಸಕ್ಕೆ ನಲುಗಿದ ಕುಟುಂಬ

ಮೈಸೂರು, ಜೂ.22(ಎಂಟಿವೈ)– ಯುವಕನ ಬ್ಲಾಕ್‌ಮೇಲ್‌ಗೆ ಹಸಮಣೆ ಏರಬೇಕಿದ್ದ ಯುವತಿ ಸೇರಿದಂತೆ ಒಂದೇ ಕುಟುಂಬದ ಮೂವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಮನ ಮಿಡಿಯುವ ಘಟನೆ ತಿ.ನರಸೀಪುರ ತಾಲೂಕಿನ ಹಳೆ ಕೆಂಪಯ್ಯನಹುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶಿವಣ್ಣ(54), ನಾಗರತ್ನ(44) ಹಾಗೂ ರಕ್ಷಿತಾ (22) ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡವರು. ರಕ್ಷಿತಾ ಮದುವೆಗೆ ಕೇವಲ ಎರಡು ದಿನವಿತ್ತು. ಅಷ್ಟರಲ್ಲಿ ಇಡೀ ಕುಟುಂಬವೇ ದುರಂತ ಅಂತ್ಯ ಕಂಡಿರುವುದಕ್ಕೆ ಗ್ರಾಮಸ್ಥರು ಮುಮ್ಮಲ ಮರುಗುತ್ತಿದ್ದಾರೆ. ಅಲ್ಲದೆ ಈ ದುರಂತಕ್ಕೆ ಕಾರಣನಾದ ಯುವಕನ ಮೇಲೆ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಸಾಯುವ ಮುನ್ನ ಡೆತ್‌ನೋಟ್‌ನಲ್ಲಿ ರಕ್ಷಿತಾ, ಅದೇ ಗ್ರಾಮದ ಅಂದಾನಿ ಗೌಡನ ಮಗ ಉಲ್ಲಾಸ್‌ಗೌಡನ ಕಿರುಕುಳ ಹಾಗೂ ಬ್ಲಾಕ್‌ಮೇಲ್ ಪುಂಡಾಟವನ್ನು ಸವಿಸ್ತಾರವಾಗಿ ಬರೆದಿಟ್ಟು, ನಮ್ಮ ಸಾವಿಗೆ ಆತನೇ ಕಾರಣ ಎಂದು ಬರೆದಿದ್ದಾಳೆ.


ರಾಜೀ ಪಂಚಾಯ್ತಿ: ಹಳೆ ಕೆಂಪಯ್ಯನಹುಂಡಿ ಗ್ರಾಮದ ರಕ್ಷಿತಾ ಹಾಗೂ ಅದೇ ಗ್ರಾಮದ ಉಲ್ಲಾಸ್‌ಗೌಡ ಸ್ನೇಹಿತರಾಗಿದ್ದು, ಕೆಲ ಕಾರಣಗಳಿಂದ ಬಳಿಕ ಇಬ್ಬರೂ ಅಂತರ ಕಾಯ್ದು ಕೊಂಡಿದ್ದರು. ರಕ್ಷಿತಾ ಪೋಷಕರು ಶ್ರೀರಂಗಪಟ್ಟಣ ತಾಲೂಕಿನ ಗ್ರಾಮವೊಂದರ ಯುವಕನೊಂದಿಗೆ ಮಗಳ ವಿವಾಹ ನಿಶ್ಚಯ ಮಾಡಿದ್ದರು. ■6ನೇ ಪುಟಕ್ಕೆ



ಆತ್ಮಹತ್ಯೆ ಮಾಡಿಕೊಂಡ ಕುಟುಂಬ.

ಆರೋಪಿ ಉಲ್ಲಾಸ್‌ಗೌಡನ ಬಂಧನ

ಮೈಸೂರು, ಜೂ.22– ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯಾಗಿದ್ದ ಉಲ್ಲಾಸ್ ಗೌಡನನ್ನು ಮೈಸೂರು ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ. ಮೈಸೂರು ಜಿಲ್ಲೆಯ ನರಸೀಪುರ ತಾಲೂಕಿನ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಗ್ರಾಮದ ರಕ್ಷಿತಾ, ನಾಗರತ್ನ ಹಾಗೂ ಶಿವಣ್ಣ ಆತ್ಮಹತ್ಯೆಗೆ ಶರಣಾದವರು. ಕಿರುಕುಳಕ್ಕೆ ಬೇಸತ್ತು ಡೆತ್ ನೋಟ್ ಬರೆದಿಟ್ಟು ರಕ್ಷಿತಾ ಕುಟುಂಬ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದೆ ಎನ್ನಲಾಗಿದೆ.



ರಕ್ಷಿತಾಗೆ ನಾಳೆ ಹಾಗೂ ನಾಡಿದ್ದು ಮದುವೆ ನಡೆಯಬೇಕಿತ್ತು. ಆದರೆ ಮದುವೆ ಸಂಭ್ರಮದ ಮನೆಯಲ್ಲೇ ದುರಂತ ಸಂಭವಿಸಿದ್ದು, ಗ್ರಾಮದಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಘಟನೆ ಬಳಿಕ ಆರೋಪಿ ಉಲ್ಲಾಸ್ ಗೌಡನ ಬಂಧನವಾಗುವವರೆಗೂ ಮೃತ ದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕೊಂಡೊಯ್ಯಲು ಬಿಡುವುದಿಲ್ಲ ಎಂದು ಗ್ರಾಮಸ್ಥರು ಪಟ್ಟು ಹಿಡಿದು ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ಈ ವೇಳೆ ಡಿವೈಎಸ್ಪಿ ಧರ್ಮೇಂದ್ರ ಅವರು ಆರೋಪಿ ಬಂಧಿಸುವ ಭರವಸೆ ನೀಡಿ ಪರಿಸ್ಥಿತಿ ತಿಳಿಗೊಳಿಸಿದರು.

ಬಳಿಕ ಬೆಂಗಳೂರಿಗೆ ಪರಾರಿಯಾಗಲು ಯತ್ನಿಸುತ್ತಿದ್ದ ಉಲ್ಲಾಸ್ ಗೌಡನನ್ನು ದಾರಿ ಮಧ್ಯದಲ್ಲೇ ಮೈಸೂರು ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ.

ಮೈಸೂರು ಜಿಲ್ಲೆಯಲ್ಲಿ ಜೀತಪದ್ಧತಿ ಜೀವಂತ; ಬಾಲ ಕಾರ್ಮಿಕರು ಸೇರಿ 18 ಮಂದಿ ರಕ್ಷಣೆ

ಇಟ್ಟಿಗೆ ತಯಾರಿಕಾ ಕಾರ್ಖಾನೆಗಳ ಮೂವರು ಮಾಲೀಕರ ಬಂಧನ

ಮೈಸೂರು, ಜೂ.22(ಪಿಎಂ)– ಜಿಲ್ಲೆಯಲ್ಲಿ ಜೀತಪದ್ಧತಿ ಮತ್ತೊಮ್ಮೆ ಬೆಳಕಿಗೆ ಬಂದಿದೆ. ಇಬ್ಬರು ಬಾಲ ಕಾರ್ಮಿಕರು ಸೇರಿ ಒಟ್ಟು 18 ಮಂದಿಯನ್ನು ಜೀತದಿಂದ ಮುಕ್ತಗೊಳಿಸಿ ರಕ್ಷಣೆ ಮಾಡಲಾಗಿದೆ. ಅಲ್ಲದೆ, ಬಲವಂತದಿಂದ ದುಡಿಸಿಕೊಳ್ಳುತ್ತಿದ್ದ ಇಟ್ಟಿಗೆ ತಯಾರಿಕಾ ಕಾರ್ಖಾನೆಗಳ ಮೂವರು ಮಾಲೀಕರನ್ನು ಬಂಧಿಸಲಾಗಿದೆ.

ತಿ.ನರಸೀಪುರ ತಾಲೂಕು ಸೋಸಲೆ ಹೋಬಳಿಯ ಬೇವಿನಹಳ್ಳಿ ಗ್ರಾಮದ ಹೊರವಲಯದ ಇಟ್ಟಿಗೆ ತಯಾರಿಕಾ ಕಾರ್ಖಾನೆಗಳಲ್ಲಿ ಮಾಲೀಕರ ಬಲವಂತಕ್ಕೆ ದುಡಿಮೆ ಮಾಡುವ ಅನಿವಾರ್ಯತೆಗೆ ಸಿಲುಕಿದ್ದ ಮುತ್ತಣ್ಣ (30) ಮತ್ತು ಜ್ಯೋತಿ (24) ದಂಪತಿ ಹಾಗೂ ಇವರ 13 ಮತ್ತು 9 ವರ್ಷದ ಇಬ್ಬರು ಪುತ್ರರು (ಈ ಪೈಕಿ ಒಬ್ಬ ಬಾಲಕನಿಂದಲೂ ದುಡಿಸಲಾಗುತ್ತಿತ್ತು ಎಂಬ ಆರೋಪವಿದೆ), ಚೆನ್ನಪ್ಪ (50), ಆರ್ಮುಗಂ (22), ಗಣೇಶ್ (25), ರಾಜೇಶ್ವರಿ (22), ನಾಗಮ್ಮ (32), ಮಲ್ಲಿಕಾ (40), ಸುರೇಶ್ (27), ಪ್ರೇಮಾ (26), ಲಕ್ಷ್ಮೀ (24), ಚಂದ್ರು (60), ಚೆನ್ನಮ್ಮ (52), ಅಮುದಾ (34) ಹಾಗೂ ವೇಲುಸಾಧ (32) ಎಂಬುವರನ್ನು ಜೀತದಿಂದ ಮುಕ್ತಗೊಳಿಸಿ ರಕ್ಷಣೆ ಮಾಡಲಾಗಿದೆ.

ಬೇವಿನಹಳ್ಳಿ ಗ್ರಾಮದ ಹೊರವಲಯದ ಮೂರು ಇಟ್ಟಿಗೆ ತಯಾರಿಕಾ ಕಾರ್ಖಾನೆಗಳಲ್ಲಿ ಇವರನ್ನು ಬಲವಂತದಿಂದ ದುಡಿಸಿಕೊಳ್ಳಲಾಗುತ್ತಿತ್ತು ಎಂದು ಆರೋಪಿಸಲಾಗಿದ್ದು, ಈ ಕಾರ್ಖಾನೆಗಳ ಮಾಲೀಕರಾದ ಬೇವಿನಹಳ್ಳಿ ಗ್ರಾಮದ ಗಿರೀಶ್, ಮಹದೇವ್ ಹಾಗೂ ಯತಿರಾಜ್ ಎಂಬುವರನ್ನು ■6ನೇ ಪುಟಕ್ಕೆ





ಜೀತಪದ್ಧತಿಯಿಂದ ರಕ್ಷಿಸಿರುವ ಮುತ್ತಣ್ಣ ಮತ್ತು ಜ್ಯೋತಿ ದಂಪತಿಯನ್ನು ಚಿತ್ರದಲ್ಲಿ ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಜೀತಪದ್ಧತಿಯಡಿ ಸಿಲುಕಿದ್ದ ಉಳಿದ ಕಾರ್ಮಿಕರನ್ನು ಕಾಣಬಹುದು.


ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ

ಓಸಿ ನಿಯಮದಿಂದ ಒಮ್ಮೆ ವಿನಾಯಿತಿ

- ಅರ್ಹ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸಲು ಇಂಧನ ಇಲಾಖೆಯಿಂದ ಐತಿಹಾಸಿಕ ಆದೇಶ
- ಗ್ರಾಮೀಣ ಪ್ರದೇಶದ ರೈತರ ಮನೆ, ತೋಟದ ಮನೆ, ದನದ ಕೊಟ್ಟಿಗೆಗಳಿಗೂ ಓಸಿಯಿಂದ ಸಂಪೂರ್ಣ ವಿನಾಯಿತಿ

ಬೆಂಗಳೂರು, ಜೂ.22– ರಾಜ್ಯಾದ್ಯಂತ ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಪಡೆಯಲು ಎದುರಾಗುತ್ತಿದ್ದ ಪ್ರಮುಖ ತೊಂದರೆಯೊಂದನ್ನು ನಿವಾರಿಸಲು ಕರ್ನಾಟಕ ಸರ್ಕಾರವು ಅತ್ಯಂತ ಮಹತ್ವದ ತೀರ್ಮಾನ ಕೈಗೊಂಡಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ದಿಷ್ಟ ಮಿತಿಯೊಳಗಿನ ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣ ಪತ್ರ (Occupation Certificate - OC) ಒದಗಿಸುವುದರಿಂದ ಒಂದು ಬಾರಿಯ ಕ್ರಮವಾಗಿ ವಿನಾಯಿತಿ ನೀಡಿ ಇಂಧನ ಇಲಾಖೆಯು ಇಂದು ಅಧಿಕೃತ ಆದೇಶ ಹೊರಡಿಸಿದೆ.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಿರ್ಣಯದ ಹಿನ್ನೆಲೆಯಲ್ಲಿ ಈ ಜನಪರ ಆದೇಶವನ್ನು ಜಾರಿಗೊಳಿಸಲಾಗಿದೆ. ■6ನೇ ಪುಟಕ್ಕೆ



ಯಾರಿಗೆ ಲಭ್ಯ?

- ದಿನಾಂಕ: 31.05.2026ರ ಒಳಗಾಗಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಈಗಾಗಲೇ ಅರ್ಜಿ ಸಲ್ಲಿಸಿರುವವರಿಗೆ.
- ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು ಕಟ್ಟಡ ನಿರ್ಮಿಸಿ ಪೂರ್ಣಗೊಳಿಸಿರುವವರಿಗೆ.
- ಯಾವುದೇ ವಿದ್ಯುತ್ ಸಂಪರ್ಕ ಪಡೆಯದೇ ಕಟ್ಟಡ ಕಾಮಗಾರಿ ಪೂರ್ಣಗೊಂಡಿರುವವರಿಗೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಚನ್ನಪಟ್ಟಣ ಬಳಿ ಅಪಘಾತ

ಮೈಸೂರಿನ ಐವರು ಬಿಇಓಗಳಿಗೆ ಗಾಯ; ಚಾಲಕ ಸಾವು

- ಬೆಂಗಳೂರಲ್ಲಿ ಶಿಕ್ಷಣ ಆಯುಕ್ತರ ಸಭೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದರು
- ಟೈಯರ್ ಸ್ಫೋಟಿಸಿ ಇವರು ಪ್ರಯಾಣಿಸುತ್ತಿದ್ದ ತವೇರಾ ಉರುಳಿ ಬಿದ್ದು ಘೋರ ದುರಂತ


ಮೈಸೂರು,ಜೂ.22(ಎಂಟಿವೈ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆ ಚನ್ನಪಟ್ಟಣ ತಾಲೂಕಿನ ಮುದುಗೆರೆ ಗ್ರಾಮದ ಬಳಿ ತವೇರಾ ಹಾಗೂ ಗೂಡ್ಸ್ ವಾಹನದ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಮೈಸೂರಿನ ನಿವಾಸಿ ತವೇರಾ ಚಾಲಕ ಮೃತಪಟ್ಟು, ಐವರು ಬಿಇಓ (ಬ್ಲಾಕ್ ಎಜುಕೇಷನ್ ಆಫೀಸರ್ಸ್)ಗಳು ಗಾಯಗೊಂಡಿದ್ದಾರೆ. ಸೋಮವಾರ ಬೆಳಗ್ಗೆ ಈ ದುರಂತ ನಡೆದಿದೆ.

ಬೆಂಗಳೂರು ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಯಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಪಾಲ್ಗೊಳ್ಳಲು ಮೈಸೂರು ಜಿಲ್ಲೆಯ ವಿವಿಧ ವಲಯಗಳ ಐವರು ಬಿಇಓಗಳು ತವೇರಾ(ಕೆಎ.09, ಬಿ.3001) ಬಾಡಿಗೆಗೆ ಪಡೆದು ಅದರಲ್ಲಿ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ತವೇರಾ ಟೈರ್ ಸ್ಫೋಟಗೊಂಡಿದ್ದು, ಇದರಿಂದ ಚಾಲಕನ ನಿಯಂತ್ರಣ ಕಳೆದುಕೊಂಡ ವಾಹನ ಪಕ್ಕದ ಪಥಕ್ಕೆ ನುಗ್ಗಿದೆ. ಈ ವೇಳೆ ಮೈಸೂರು ಕಡೆಗೆ ಬರುತ್ತಿದ್ದ ಗೂಡ್ಸ್ ವಾಹನ (ಕೆಎ.09, ಎಎ.3131)ಕ್ಕೆ ಡಿಕ್ಕಿ ಹೊಡೆದಿದೆ. ಈ ವೇಳೆ ತವೇರಾ ಚಾಲಕ ಆನಂದ್ (40) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮೈಸೂರು ಉತ್ತರ ವಲಯದ ಬಿಇಓ ರೇವಣ್ಣ, ಮೈಸೂರು ಗ್ರಾಮಾಂತರ ಬಿಇಓ ಪ್ರಕಾಶ್, ಮೈಸೂರು ದಕ್ಷಿಣ ವಲಯದ ಬಿಇಓ ಕೃಷ್ಣ, ನಂಜನಗೂಡು ಬಿಇಓ ಮಹೇಶ್, ಹೆಚ್.ಡಿ.ಕೋಟೆ ಬಿಇಓ ರಾಜು ಅಪಘಾತದಲ್ಲಿ ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ ರೇವಣ್ಣ ಹಾಗೂ ರಾಜುಗೆ ಗಂಭೀರ ಗಾಯವಾಗಿದ್ದು, ಖಾಸಗಿ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೃಷ್ಣ ಮತ್ತು ಪ್ರಕಾಶ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಬಿಇಓ ಮಹೇಶ್ ಅವರ ಕೈ, ಕಾಲು ಹಾಗೂ ತಲೆಗೆ ಗಾಯವಾಗಿದೆ.




ರೇವಣ್ಣ



ಪ್ರಕಾಶ್



ಕೃಷ್ಣ



ಮಹೇಶ್



ರಾಜು



ಚಾಲಕ ಆನಂದ್

ನೆರವಿಗೆ ಬಂದ ಸಾರ್ವಜನಿಕರು: ಅಪಘಾತದ ಬಳಿಕ ತವೇರಾ ವಾಹನದಲ್ಲಿ ಸಿಲುಕಿಕೊಂಡಿದ್ದ ಬಿಇಓಗಳು ಹಾಗೂ ಚಾಲಕನ ನೆರವಿಗೆ ಸಾರ್ವಜನಿಕರು, ಇತರೆ ವಾಹನ ಸವಾರರು ಬಂದು ಗಾಯಾಳುಗಳನ್ನು ರಕ್ಷಿಸಿದ್ದಾರೆ. ಅಲ್ಲದೆ, ಸ್ಥಳೀಯ ಪೊಲೀಸರು ಹಾಗೂ ಹೈವೇ ಸಿಬ್ಬಂದಿಯ ನೆರವಿನಿಂದ ಬಿಇಓಗಳನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಲ್ಲದೆ, ವಾಹನದಲ್ಲಿ ಸಿಲುಕಿದ್ದ ತವೇರಾ ■6ನೇ ಪುಟಕ್ಕೆ





ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇಯ ಚನ್ನಪಟ್ಟಣ ತಾಲೂಕಿನ ಮುದುಗೆರೆ ಗ್ರಾಮದ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬಿಇಓಗಳು ಪ್ರಯಾಣಿಸುತ್ತಿದ್ದ ತವೇರಾ ವಾಹನ ನುಜ್ಜುಗುಜ್ಜಾಗಿರುವುದು. ಮತ್ತೊಂದು ಚಿತ್ರದಲ್ಲಿ ಡಿಕ್ಕಿ ಹೊಡೆದ ಗೂಡ್ಸ್ ವಾಹನ

ಈ ಕಾಲದಲ್ಲೂ ಇಂತಹ ಸಭೆ ಅನಿವಾರ್ಯತೆ ಇದೆಯಾ...!?

ಮೈಸೂರು,ಜೂ.22(ಎಂಟಿವೈ)– ಶಿಕ್ಷಣ ಇಲಾಖೆಯ ಬ್ಲಾಕ್ ಮಟ್ಟದ ಅಧಿಕಾರಿಗಳ ಸಭೆಯನ್ನು ಆನ್‌ಲೈನ್ ಮೂಲಕ ನಡೆಸಬಹುದಲ್ಲವೇ? ಬೆಂಗಳೂರಿಗೆ ಖುದ್ದಾಗಿ ಆಗಮಿಸುವಂತೆ ಸೂಚನೆ ನೀಡಿರುವುದರಲ್ಲಿ ಅರ್ಥವಿದೆಯಾ ಎಂದು ಸಾರ್ವಜನಿಕರು ಆಕ್ಷೇಪಿಸಿದ್ದಾರೆ.

ಎಕ್ಸ್‌ಪ್ರೆಸ್ ಹೈವೇಯಲ್ಲಿ ನಡೆದ ಅಪಘಾತದಲ್ಲಿ ಮೈಸೂರಿನ ಐವರು ಬಿಇಓಗಳು ಗಾಯಗೊಂಡಿರುವುದಕ್ಕೆ ಆಘಾತ ವ್ಯಕ್ತಪಡಿಸಿರುವ ಸಾರ್ವಜನಿಕರು, ಪ್ರಸಕ್ತ ಶೈಕ್ಷಣಿಕ ಸಾಲು ಆರಂಭವಾಗಿ 20 ದಿನಗಳಷ್ಟೇ ಕಳೆದಿದ್ದು, ಈ ವೇಳೆ ಶಾಲೆಗಳಿಗೆ ತೆರಳಿ ಪರಿಶೀಲಿಸಬೇಕಾಗಿತ್ತು. ಇಂತಹ ಸಂದರ್ಭದಲ್ಲಿ ರಾಜ್ಯಾದ್ಯಂತ ಬಿಇಓಗಳನ್ನು ಬೆಂಗಳೂರಿಗೆ ಖುದ್ದಾಗಿ ಆಗಮಿಸಿ, ಸಭೆಯಲ್ಲಿ ಪಾಲ್ಗೊಳ್ಳುವಂತೆ ಆದೇಶಿಸುವುದು ಸರಿಯಲ್ಲ. ಇಂದಿನ ಆನ್‌ಲೈನ್ ಹಾಗೂ ಡಿಜಿಟಲ್ ಯುಗದಲ್ಲಿ ಬ್ಲಾಕ್ ಮಟ್ಟದ ಅಧಿಕಾರಿಗಳನ್ನು ಆನ್‌ಲೈನ್ ಮೂಲಕವೇ ಸಂಪರ್ಕಿಸಬಹುದಿತ್ತಲ್ಲವೇ ಎಂದು ಪ್ರಶ್ನಿಸಿದ್ದಾರೆ. ಅಲ್ಲದೆ, ಈ ರೀತಿ ಸಭೆ ನಡೆಸಿದರೆ ಅಧಿಕಾರಿಗಳ ಪ್ರಯಾಣದ ಸಮಯವೂ ಉಳಿಯುತ್ತಿತ್ತು, ಅಪಘಾತವೂ ತಪ್ಪುತ್ತಿತ್ತು. ಇನ್ನಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಸಭೆಯನ್ನು ಆನ್‌ಲೈನ್ ಮೂಲಕ ನಡೆಸುವಂತೆ ಆಗ್ರಹಿಸಿದ್ದಾರೆ.

ಪಕ್ಷಾಂತರಿಗಳ ಮನೆಯಿಂದ ಹೆಣ್ಣು ತರಬೇಡಿ, ನೀರು ಕುಡಿಯಬೇಡಿ

ಅಡ್ಡ ಮತದಾನ ವಿರೋಧಿಸಿ ವಾಟಾಳ್ ಪ್ರತಿಭಟನೆ



ವಿಧಾನಪರಿಷತ್ ರದ್ದುಗೊಳಿಸುವಂತೆ ಆಗ್ರಹಿಸಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಹಾರ್ಡಿಂಜ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರು, ಜೂ.22(ಜಿಎ)–ವಿಧಾನ ಪರಿಷತ್ ಚುನಾವಣೆಯಲ್ಲಿ ಶೇ.50 ಮಂದಿ ಹಣದಿಂದ ಗೆದ್ದಿದ್ದಾರೆ. ಇಂತಹವರು ಬರುವುದಾದರೆ, ವಿಧಾನಪರಿಷತ್ ಬೇಡ ರದ್ದು ಮಾಡಿ ಎಂದು ಆಗ್ರಹಿಸಿ ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್ ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಆಗ್ರಹಿಸಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ರೀತಿಯ ಪಕ್ಷಾಂತರಿಗಳ ಬಳಿ ನೀರು ಕುಡಿಯಬೇಡಿ, ಅವರ ಮನೆಯಿಂದ ಹೆಣ್ಣು ತರಬೇಡಿ, ಹೆಣ್ಣು ಕೊಡಲುಬೇಡಿ. ಪಕ್ಷಾಂತರಿಗಳ ಸದಸ್ಯತ್ವ ರದ್ದಾಗಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಹೊಸ ಮುಖ್ಯಮಂತ್ರಿ ಬಂದ ನಂತರ ನಡೆದಿರುವ ವಿಧಾನಪರಿಷತ್ ಚುನಾವಣೆ ಅಪಾಯಕಾರಿ ಬೆಳವಣಿಗೆಯಾಗಿದ್ದು, ಪ್ರಜಾತಂತ್ರ ವ್ಯವಸ್ಥೆಗೆ ಕೊಡಲಿ ಪೆಟ್ಟು ಬಿದ್ದಿದೆ. ಇಂತಹ ಅನಿಷ್ಟ ಪದ್ಧತಿ ಯಾವತ್ತು ಆಗಿರಲಿಲ್ಲ ಎಂದರು.

ಅಡ್ಡ ಮತದಾನ ಮಾಡಿರುವುದನ್ನ ಕಂಡು ಹಿಡಿಯಬಹುದು. ಅಡ್ಡ ಮತದಾನಕ್ಕೆ ತೀವ್ರ ಶಿಕ್ಷೆ ಆಗಬೇಕು. ಅಡ್ಡ ಮತದಾನ ಕೊಲೆಗಿಂತ ಅಪಾಯಕಾರಿ. ಅಡ್ಡ ಮತದಾನ ಮಾಡಿರುವವರು ಜೀವನ ಪರ್ಯಂತ ಚುನಾವಣೆಗೆ ನಿಲ್ಲಬಾರದು. ಜೊತೆಗೆ ಜೈಲು ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು.

ಪಕ್ಷಾಂತರಿಗಳ ವಿಚಾರದಲ್ಲಿ 10ನೇ ಶೆಡ್ಯೂಲ್ ತಿದ್ದುಪಡಿ ಸರಿಯಿಲ್ಲ. ಮಾನ ಮರ್ಯಾದೆ ಗೌರವ ಇದ್ದರೆ ಎಂಜಲು ಕಾಸಿಗೆ ಮೂಲ ಪಕ್ಷವನ್ನ ಧಿಕ್ಕರಿಸಿ ಚೂರಿ ಹಾಕಿರೋದು ಅಗೌರವ. ಇವರನ್ನು ಜನರೇ ಬಹಿಷ್ಕರಿಸಿ, ಚುನಾವಣೆಯಲ್ಲಿ ನಿಂತರೆ ಪೊರಕೆಯಲ್ಲಿ ಹೊಡಿಬೇಕು. ಕಾಂಗ್ರೆಸ್ ನವರು ಪ್ರಾಮಾಣಿಕರಾಗಿದ್ದರೆ, 5ನೇ ಅಭ್ಯರ್ಥಿ ಹಾಕಬಾರದಿತ್ತು. ಉದ್ದೇಶಪೂರ್ವಕವಾಗಿ ವಿಪಕ್ಷಗಳನ್ನು ತುಳಿಯಲು. ನಾನು ನನ್ನ ಪಕ್ಷ ಅಧಿಕಾರದಲ್ಲಿದ್ದ ವೇಳೆ ಗೌರವ ಸಿಗುತ್ತೆ ಅಂತ ಮಾಡಿದ್ದಾರೆ ಎಂದರು. ಸಿಎಂ ಡಿ.ಕೆ ಶಿವಕುಮಾರ್ ಬಗ್ಗೆ ನಾನು ಮಾತನಾಡಿದರೆ, ನಾನೇ ಸಣ್ಣವನಾಗುತ್ತೇನೆ. ಸಿದ್ದರಾಮಯ್ಯರ 8 ವರ್ಷದ ಅವಧಿಯಲ್ಲಿ ಇಂತಹ ಘಟನೆ ನಡೆದಿರಲಿಲ್ಲ. ಸಿದ್ದರಾಮಯ್ಯರನ್ನು ಮೂಲೆಗುಂಪು ಮಾಡಿದರು ಎಂದರು.

ರಘು ಕೌಟಿಲ್ಯಗೆ ಸನ್ಮಾನ...



ವಿಧಾನಪರಿಷತ್ ನೂತನ ಸದಸ್ಯ ರಘು ಕೌಟಿಲ್ಯ ಅವರನ್ನು ಅಭಿನಂದಿಸಲಾಯಿತು. ಮೈಸೂರು ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಿ.ಮಹೇಶನಾಯಕ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಲೋಕೇಶ್ ನಾಯಕ, ಬಿಜೆಪಿ ಮುಖಂಡರಾದ ದಾಸಯ್ಯ, ಯಾದವ್ ಮತ್ತಿತರರು ಉಪಸ್ಥಿತರಿದ್ದರು.

ಮರೆಯದ ಮಹಾ ಗಾಯಕರು ಸಂಗೀತ ಸಂಜೆ ಕಾರ್ಯಕ್ರಮ

ಮೈಸೂರು, ಜೂ.22(ಜಿಎ)–ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್‌ನ 12ನೇ ವಾರ್ಷಿಕೋತ್ಸವದ ಅಂಗವಾಗಿ ನಾದಬ್ರಹ್ಮ ಸಭಾಂಗಣದಲ್ಲಿ ಜೂ.24ರಂದು ಸಂಜೆ 5ಗಂಟೆಗೆ 'ಮರೆಯದ ಮಹಾ ಗಾಯಕರು' ಶೀರ್ಷಿಕೆಯಲ್ಲಿ ಕನ್ನಡ ಮತ್ತು ಹಿಂದಿ ಹಾಡುಗಳ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ರೇವಣ್ಣ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಶಾಸಕ ಡಿ.ರವಿಶಂಕರ್ ಉದ್ಘಾಟಿಸುವರು. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅಧ್ಯಕ್ಷತೆ ವಹಿಸುವರು. ಮುಖ್ಯಮಂತ್ರಿಗಳ ಚಿನ್ನದ ಪದಕ ಪಡೆದ ಅಶೋಕಪುರಂ ಠಾಣೆ ಎಎಸ್‌ಐ ಎಸ್.ಶಿವಕುಮಾರ್ ಅವರನ್ನು ಗೌರವಿಸಲಾಗುವುದು. ಸರ್ವರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಬಿ.ಎಸ್.ಶ್ರೀಕಂಠರಾವ್, ಪ್ರಮಥ ಮಂಜುನಾಥ್, ರೇಣುಕಾ ಆರಾಧ್ಯ, ಗೀತಾ ಶ್ರೀಧರ್ ಉಪಸ್ಥಿತರಿದ್ದರು.

ರಂಗ ಗೀತೆಗಳ ಕಲಿಕಾ ಶಿಬಿರದ ಸಮಾರೋಪ

ಮೈಸೂರು, ಜೂ.22(ಜಿಎ)–ಏಕತಾರಿ ಸಾಂಸ್ಕೃತಿಕ ಸಂಘಟನೆಯಿಂದ ಕಿರು ರಂಗ ಮಂದಿರದಲ್ಲಿ ಜೂ.24ರಂದು ಸಂಜೆ 6.30ಕ್ಕೆ ರಂಗ ಗೀತೆಗಳ ಕಲಿಕಾ ಶಿಬಿರ ಸಮಾರೋಪ ನಡೆಯಲಿದೆ ಎಂದು ಶಿಬಿರದ ನಿರ್ದೇಶಕ ಕೆ.ಕೆ.ದೇವಾನಂದ ವರಪ್ರಸಾದ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗಭೀಷ್ಮ ಬಿ.ವಿ.ಕಾರಂತ ಹಾಗೂ ರಂಗಾಯಣದ ಮಾಜಿ ನಿರ್ದೇಶಕ ಜನಾರ್ಧನ (ಜನ್ನಿ) ಸಂಯೋಜಿಸಿರುವ ರಂಗಗೀತೆಗಳನ್ನು ಶಿಬಿರದಲ್ಲಿ ಕಲಿಸಲಾಗಿದೆ. ಅಂದು ಸಮಾರಂಭವನ್ನು ರಂಗಕರ್ಮಿ ಟಿ.ಎಸ್.ನಾಗಾಭರಣ ಉದ್ಘಾಟಿಸುವರು. ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯ ಕುಲಪತಿ ಕೆ.ರಾಮಕೃಷ್ಣಯ್ಯ, ರಂಗಕರ್ಮಿ ಶಿವಾಜಿ ರಾವ್ ಜಾದವ್ ಉಪಸ್ಥಿತರಿರುವರು. ಶಿಬಿರಾರ್ಥಿಗಳಿಂದ ರಂಗಗೀತೆಗಳ ಗಾಯನ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜನಾರ್ಧನ (ಜನ್ನಿ), ಸಂಘಟನೆ ಸದಸ್ಯರಾದ ಜ್ಯೋತಿ, ಸುಮಲತಾ, ಶ್ರೀವತ್ಸ ಉಪಸ್ಥಿತರಿದ್ದರು.


ನಿಧನ

ರುಬಿನ್ ಡವ್




ಮೈಸೂರು, ಜೂ. 22– ಮೈಸೂರಿನ ಕಲ್ಯಾಣಗಿರಿ ನಿವಾಸಿ ರುಬಿನ್ ಡವ್ (71) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಮಹದೇವಪುರ ರಸ್ತೆಯಲ್ಲಿರುವ ರೋಮನ್ ಕ್ಯಾಥೋಲಿಕ್ ಸಿಮೆಟ್ರಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಭಾಷ್ ಟಿ.ಪಾಟೀಲ್



ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ಸುಭಾಷ್ ಟಿ.ಪಾಟೀಲ್ ಸೋಮವಾರ ಬೆಳಗ್ಗೆ ನಿಧನರಾದರು. ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ ಎಸ್.ಚಂದನ ಎಸ್.ಪಾಟೀಲ್, ಪುತ್ರ ಧೀರಜ್ ಎಸ್.ಪಾಟೀಲ್, ಪುತ್ರಿ ದಿವ್ಯಾ ಎಸ್.ಪಾಟೀಲ್, ಸೊಸೆ ದೀಪ್ತಿ, ಅಳಿಯ ಸಚಿನ್ ಎಸ್.ಪಾಟೀಲ್, ಮೊಮ್ಮಕ್ಕಳಾದ ಕೃತಿ, ದಿವಿಜ್ ಮತ್ತು ದೃಶಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವಪ್ರಸಾದ್



ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಹೆಸರಾಂತ ವಕೀಲರಾದ ದಿವಂಗತ ಬೋರೇಗೌಡರ ಪುತ್ರ ಶಿವಪ್ರಸಾದ್ (ಗಡ್ಡ) ಅವರು ಸೋಮವಾರ ಮುಂಜಾನೆ ಮೈಸೂರಿನ ಯಾದವಗಿರಿಯ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ 71 ವರ್ಷ ವಯಸ್ಸಾಗಿತ್ತು. ಅವಿವಾಹಿತರಾಗಿದ್ದ ದಿವಂಗತರು ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದು, ಬನ್ನಿಮಂಟಪದ ಜೋಡಿ ತೆಂಗಿನಮರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಜಿಲ್ಲೆಯ ಸಂದೇಹಾಸ್ಪದ 1.33 ಲಕ್ಷ ಪಿಂಚಣಿದಾರರ ಮಾಸಾಶನಕ್ಕೆ ತಾತ್ಕಾಲಿಕ ತಡೆ

■ ದಾಖಲೆ ಪರಿಶೀಲನೆ ನಂತರ ಇವರ ಬಗ್ಗೆ ನಿರ್ಧಾರ ■ ಮೈಸೂರು ಜಿಲ್ಲೆಯಲ್ಲಿದ್ದಾರೆ 4.04 ಲಕ್ಷ ಪಿಂಚಣಿದಾರರು



ಮೈಸೂರು ತಾಲೂಕು ಕಚೇರಿ(ಮಿನಿ ವಿಧಾನ ಸೌಧ)ಯಲ್ಲಿ ಸೋಮವಾರ ಪಿಂಚಣಿ ಸೌಲಭ್ಯಕ್ಕಾಗಿ ದಾಖಲೆ ನೀಡುತ್ತಿರುವ ಸಂದೇಹಾಸ್ಪದ ಪಿಂಚಣಿದಾರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.22(ಎಂಕೆ)–ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ ಪಿಂಚಣಿ(ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಸೇರಿದಂತೆ ಇನ್ನಿತರೆ) ಪಡೆಯುತ್ತಿದ್ದವರ ವಾರ್ಷಿಕ ಆದಾಯ ಪರಿಶೀಲನೆಗೆ ಮುಂದಾಗಿರುವ ರಾಜ್ಯ ಸರ್ಕಾರ, ಮೈಸೂರು ಜಿಲ್ಲೆಯಲ್ಲಿರುವ 4,04,102 ಫಲಾನುಭವಿಗಳ ಪೈಕಿ ಸಂದೇಹಾಸ್ಪದ 1,33,819 ಫಲಾನುಭವಿಗಳ ಮಾಸಾಶನಕ್ಕೆ ತಾತ್ಕಾಲಿಕ ತಡೆ ನೀಡಿದೆ.

'ಸಂಯೋಜನೆ' ಮೊಬೈಲ್ ಆ್ಯಪ್ ಮೂಲಕ ಸಂದೇಹಾಸ್ಪದ ಪಿಂಚಣಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳ ಆದಾಯ ದೃಢೀಕರಣ ಪ್ರಮಾಣ ಪತ್ರ ಸೇರಿದಂತೆ ಇನ್ನಿತರೆ ದಾಖಲೆಗಳ ಪರಿಶೀಲನೆಗಾಗಿ ಕಳೆದ ಎರಡು ತಿಂಗಳಿಂದ ಇಂತಹ ಫಲಾನುಭವಿಗಳಿಗೆ ಮಾತ್ರ ಪಿಂಚಣಿ ಸೌಲಭ್ಯ ತಡೆಹಿಡಿಯಲಾಗಿದ್ದು, ಕಂದಾಯ ಇಲಾಖೆಯಿಂದ ಈ ಫಲಾನುಭವಿಗಳಿಗೆ ತಿಳುವಳಿಕೆ ಪತ್ರ(ನೋಟಿಸ್) ನೀಡಿದ ಬಳಿಕ ದಾಖಲೆಗಳ ಪರಿಶೀಲನೆಗೆ 1 ತಿಂಗಳ ಕಾಲಾವಕಾಶವನ್ನು ನೀಡಲಾಗಿದೆ.

ನಕಲಿ ದಾಖಲೆ, ವಾರ್ಷಿಕ ಆದಾಯ ಹೆಚ್ಚಿದ್ದರೂ ಕಡಿಮೆ ಆದಾಯ ತೋರಿಸಿ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲಿ 'ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ', 'ವಿಧವಾ ವೇತನ ಪಿಂಚಣಿ ಯೋಜನೆ', 'ವಿಕಲಾಂಗ ಪಿಂಚಣಿ ಯೋಜನೆ', 'ಸಂಧ್ಯಾ ಸುರಕ್ಷಾ ಯೋಜನೆ', 'ರಾಷ್ಟ್ರೀಯ ಕುಟುಂಬ ನೆರವು ಯೋಜನೆ', 'ಅಂತ್ಯ ಸಂಸ್ಕಾರ ಸಹಾಯಧನ ಯೋಜನೆ', ಹಾಗೂ 'ಮನಸ್ವಿನಿ ಯೋಜನೆ'ಯಡಿ ಪಡೆಯುವ ಮಾಸಿಕ ಪಿಂಚಣಿಗೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ದಾಖಲೆಗಳ ಭೌತಿಕ ಪರಿಶೀಲನೆಗೆ ಸರ್ಕಾರ ಮುಂದಾಗಿದೆ.

ನೋಟಿಸ್ ಪಡೆದ ಪಿಂಚಣಿದಾರರು ಒಂದು ತಿಂಗಳ ಅವಧಿಯೊಳಗೆ ಆದಾಯ ಪ್ರಮಾಣ ಪತ್ರ, ಬಿಪಿಎಲ್ ಕಾರ್ಡ್ ಇನ್ನಿತರೆ ದಾಖಲೆಗಳನ್ನು ಭೌತಿಕ ಪರಿಶೀಲನೆ ವೇಳೆ ಹಾಜರುಪಡಿಸಿದ ಬಳಿಕ ಕೂಲಂಕುಶವಾಗಿ ಪರಿಶೀಲಿಸಿ, ಪಿಂಚಣಿ ಮುಂದುವರೆಸಬೇಕೇ ಅಥವಾ ರದ್ದು ಮಾಡಬೇಕೇ ಎಂಬ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಸಾಮಾಜಿಕ ಭದ್ರತಾ ಯೋಜನೆಗಳ ಸಹಾಯಕ ನಿರ್ದೇಶಕಿ ಹೆಚ್.ಎಂ.ದಾಕ್ಷಾಯಿಣಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಆತಂಕಪಡುವ ಅಗತ್ಯವಿಲ್ಲ...

"ಸಂದೇಹಾಸ್ಪದ ಪಿಂಚಣಿದಾರರಿಗಷ್ಟೇ ಪಿಂಚಣಿ ನಿಂತಿದ್ದು, ಬೇರೆಯವರಿಗೆ ಎಂದಿನಂತೆ ಪಿಂಚಣಿ ಸೌಲಭ್ಯ ದೊರೆಯುತ್ತಿದೆ. ಹಾಗೆಯೇ ತಡೆ ಹಿಡಿದಿರುವ ಪಿಂಚಣಿದಾರರು ಸೂಕ್ತ ದಾಖಲೆ ನೀಡಿ, ಭೌತಿಕ ಪರಿಶೀಲನೆಗೆ ಒಳಪಟ್ಟ ನಂತರ ಪಿಂಚಣಿ ಸೌಲಭ್ಯ ಮುಂದುವರೆಯಲಿದ್ದು, ಯಾವುದೇ ಆತಂಕಕ್ಕೆ ಒಳಗಾಗದ ಪರಿಶೀಲನೆಗೆ ಸಹಕರಿಸಬೇಕು. **–ಹೆಚ್.ಎಂ.ದಾಕ್ಷಾಯಿಣಿ, ಸಾಮಾಜಿಕ ಭದ್ರತಾ ಯೋಜನೆಗಳ ಸಹಾಯಕ ನಿರ್ದೇಶಕಿ**

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನಲ್ಲಿ 10,654, ಹುಣಸೂರು 13188, ಕೆ.ಆರ್.ನಗರ 5999, ನಂಜನಗೂಡು 20519, ಪಿರಿಯಾಪಟ್ಟಣ 13812, ಸಾಲಿಗ್ರಾಮ 6221, ಸರಗೂರು 5839 ಹಾಗೂ ಟಿ.ನರಸೀಪುರ ತಾಲೂಕಿನಲ್ಲಿ 16,255 ಮಂದಿ ವಿವಿಧ ಪಿಂಚಣಿದಾರರಿಗೆ ಪಿಂಚಣಿ ಸೌಲಭ್ಯ ತಡೆಯಲಾಗಿದ್ದು, ಕಳೆದೆರಡು ದಿನದಿಂದ ದಾಖಲೆ ಪರಿಶೀಲನೆ ಸಂಬಂಧ ನೋಟಿಸ್ ನೀಡಲಾಗುತ್ತಿದೆ. ದಾಖಲೆ ಪರಿಶೀಲನೆ ಬಳಿಕ ನೈಜ ಪಿಂಚಣಿದಾರರಿಗೆ ಎಂದಿನಂತೆ ಪಿಂಚಣಿ ಸೌಲಭ್ಯ ಮುಂದುವರೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

32 ಸಾವಿರಕ್ಕೆ ಮಿತಿ: ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಸೌಲಭ್ಯ ಪಡೆಯಲು ಬಿಪಿಎಲ್ ಕಾರ್ಡ್ ಕಡ್ಡಾಯದ ಜೊತೆಗೆ ವಾರ್ಷಿಕ ಆದಾಯವನ್ನು 32ಸಾವಿರಕ್ಕೆ ಮಿತಿಗೊಳಿಸಲಾಗಿದೆ. 32ಸಾವಿರ ವಾರ್ಷಿಕ ಆದಾಯ ಹೆಚ್ಚಿದ್ದರೆ, ಅಂತಹವರ ಹಿನ್ನಲೆಯನ್ನು ಖುದ್ದು ಪರಿಶೀಲಿಸಿ ವರದಿ ಪಡೆದು ನಂತರ ಪಿಂಚಣಿ ನೀಡಬೇಕೆ ಅಥವಾ ನಿಲ್ಲಿಸಬೇಕೆ ಎಂಬುದರ ನಿರ್ಧಾರವಾಗಲಿದೆ ಎಂದಿದ್ದಾರೆ.

ಇವರಿಗೆ ಆದಾಯ ಮಿತಿಯಿಲ್ಲ: ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲೇ 'ಆದರ್ಶ ವಿವಾಹ ಯೋಜನೆ', ಆಮ್ ಆದ್ಮಿ ಭೀಮಾ ಯೋಜನೆ', 'ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಗೆ ವಿಧವಾವೇತನ', 'ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಪಿಂಚಣಿ ಯೋಜನೆ' ಹಾಗೂ ಎಂಡೋ ಸಲ್ಫಾನ್ ಸಂತ್ರಸ್ತರಿಗೆ ನೀಡುವ ಮಿತ ವೇತನ ಯೋಜನೆಗಳಿಗೆ ವಾರ್ಷಿಕ ಆದಾಯ ಮಿತಿ ಅನ್ವಯಿಸುವುದಿಲ್ಲ ಎಂದು ಮಾಹಿತಿ ನೀಡಿದ್ದಾರೆ.

ದೆಹಲಿಯ ಜನಜಾತಿ ಸಮಾಗಮ ಯಶಸ್ವಿ

ಮೈಸೂರು, ಜೂ.22(ಜಿಎ)–ದೆಹಲಿಯಲ್ಲಿ ಜನಜಾತಿ ಸುರಕ್ಷಾ ವೇದಿಕೆಯಿಂದ ಇತ್ತೀಚೆಗೆ ನಡೆದ ಜನಜಾತಿ ಸಮಾಗಮವು ಯಶಸ್ವಿಯಾಗಿದ್ದು ನಮ್ಮ ಬೇಡಿಕೆಗಳಿಗೆ ಕೇಂದ್ರ ಸರ್ಕಾರವು ಸ್ಪಂದಿಸಿದೆ ಎಂದು ಗಿರಿಜನ ಸುರಕ್ಷಾ ವೇದಿಕೆ ಅಧ್ಯಕ್ಷ ಎ.ಜಿ.ತಮ್ಮಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಾದ್ಯಂತ 500ಕ್ಕೂ ಹೆಚ್ಚು ಜನ ಜಾತಿ ಸಮುದಾಯಗಳಿಂದ ಲಕ್ಷಾಂತರ ಜನ ಭಾಗವಹಿಸಿದ್ದರು. ಅನುಸೂಚಿತ ಜನಜಾತಿಗೆ ಕಾನೂನುಬದ್ಧ ವ್ಯಾಖ್ಯಾನ ನೀಡಬೇಕು, ಮತಾಂತರ ಹೊಂದಿದವರನ್ನು ಜನ ಜಾತಿ ಸದಸ್ಯರೆಂದು ಪರಿಗಣಿಸಬಾರದು ಹಾಗೂ ಸಮುದಾಯದ ಸಾಂಸ್ಕೃತಿಕ ನಂಬಿಕೆ, ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಗೆ ದೀರ್ಘಕಾಲಿಕ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಲಾಯಿತು. ಈ ಬಗ್ಗೆ ಪ್ರಧಾನಿ ಹಾಗೂ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ದೊಂಡು ಪಾಟೀಲ, ಗಣೇಶ್, ರಾಜು ಎಸ್.ಇರುಳಿಗ ಇದ್ದರು

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಚ್.ಪಿ.ಗೀತಾ ಅವರ ಮಾರ್ಗದರ್ಶನದಲ್ಲಿ ಶ್ರೀಧರ.ವಿ ಅವರು ಕನ್ನಡ ಸಾಹಿತ್ಯ ಅಧ್ಯಯನ ವಿಷಯದಲ್ಲಿ ಸಾದರಪಡಿಸಿದ ಮಹಾಪ್ರಬಂಧವನ್ನು ಹಂಪಿ ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ. ಇವರು ಮೈಸೂರಿನ ನಜರ್ ಬಾದ್‌ನ ನಿವಾಸಿ ಕೆ.ವೀರಭದ್ರಯ್ಯ ಮತ್ತು ಲಕ್ಷ್ಮಿ ದಂಪತಿ ಪುತ್ರ. ಪ್ರಸ್ತುತ ಪಾಂಡವಪುರ ತಾಲೂಕಿನ ಚಿನಕುರಳಿಯ ಎಸ್‌ಟಿಜಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಉಚಿತವಾಗಿ ನೋಟ್‌ಬುಕ್ ವಿತರಣೆ



ಮೈಸೂರಿನ ಬೃಂದಾವನ ಬಡಾವಣೆಯ ಸದ್ಗುರು ಸೇವಾ ಟ್ರಸ್ಟ್ ವತಿಯಿಂದ ಕಲ್ಲಹಳ್ಳಿ ಸುತ್ತಮುತ್ತಲಿನ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಬಡ ಮಕ್ಕಳಿಗೆ ಉಚಿತವಾಗಿ ನೋಟ್‌ಬುಕ್ ವಿತರಿಸಲಾಯಿತು. ಈ ವೇಳೆ ಟ್ರಸ್ಟ್‌ನ ಖಜಾಂಚಿ ಸಚಿನ್ ಸವಿತೃ ಶರ್ಮಾ ಮೂಲ ಸಂಸ್ಥಾಪಕ ಕೀರ್ತಿ ನಾರಾಯಣ, ಟ್ರಸ್ಟ್ ಸದಸ್ಯರು, ಶಾಲಾ ಶಿಕ್ಷಕರು, ಸಿಬ್ಬಂದಿ ಇನ್ನಿತರರು ಉಪಸ್ಥಿತರಿದ್ದರು.

ಅತ್ಯುತ್ತಮ ಶಿಕ್ಷಕ ಪ್ರಶಸ್ತಿ...



ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಬೆಂಗಳೂರು ಕರುನಾಡ ಕನ್ನಡ ಕಲಾಸಿರಿ ಬಳಗ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮೈಸೂರು, ಅಲೆಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಮೈಸೂರು ಸಂಸ್ಥೆಗಳ ಸಹಯೋಗದೊಂದಿಗೆ 2026ನೇ ಸಾಲಿನ ಅತ್ಯುತ್ತಮ ಕನ್ನಡ ಸಾಧಕ ಶಿಕ್ಷಕ ಪ್ರಶಸ್ತಿಯನ್ನು ದೀಪಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಕನ್ನಡ ಭಾಷಾ ಉಪನ್ಯಾಸಕ, ಮೈಸೂರು ಆಕಾಶವಾಣಿ ಹಂಗಾಮಿ ಉದ್ಘೋಷಕರು ಆದ ಗೋವಿಂದೇಗೌಡ ಎ.ಎಸ್. ಅವರಿಗೆ ನೀಡಿ ಗೌರವಿಸಲಾಯಿತು.

ವಿಜಯನಗರ ಮೊದಲ, ಎರಡನೇ ಹಂತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹರೀಶ್‌ಗೌಡರಿಂದ ಚಾಲನೆ



ವಿಜಯನಗರ 1 ಮತ್ತು 2ನೇ ಹಂತದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು, ಜೂ.22(ಎಂಕೆ)– ನಗರಪಾಲಿಕೆ ವಾರ್ಡ್ ನಂ–20ರ ವ್ಯಾಪ್ತಿಯ ವಿಜಯನಗರದಲ್ಲಿ 5.20 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿದರು.

ವಿಜಯನಗರ ಎರಡನೇ ಹಂತದ ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಎದುರಿನ ಉದ್ಯಾನವನದಲ್ಲಿರುವ ಯೋಗ ಮಂಟಪದ ಬಳಿ ವಿಜಯನಗರ ಒಂದು ಮತ್ತು ಎರಡನೇ ಹಂತದ ಪ್ರಮುಖ ಮುಖ್ಯ ರಸ್ತೆಗಳು ಹಾಗೂ ಅಡ್ಡ ರಸ್ತೆಗಳ ಅಭಿವೃದ್ಧಿ, ಒಳಚರಂಡಿ ಕಾಮಗಾರಿಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ವಿಜಯನಗರ ಬಡಾವಣೆಯ ಸಮಗ್ರ ಅಭಿವೃದ್ಧಿ ಹಿನ್ನಲೆಯಲ್ಲಿ ಇಲ್ಲಿನ ರಸ್ತೆ, ಚರಂಡಿ, ಉದ್ಯಾನವನಗಳ ಅಭಿವೃದ್ಧಿ ಸೇರಿದಂತೆ ಮೂಲಸೌಕರ್ಯಗಳಿಗೆ ಆದ್ಯತೆ ನೀಡಲಾಗಿದೆ. ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇದಕ್ಕೆಲ್ಲಾ ಸ್ಥಳೀಯ ನಿವಾಸಿಗಳ ಸಹಕಾರ ಅತ್ಯಗತ್ಯ ಎಂದು ಹೇಳಿದರು.

ನಗರಪಾಲಿಕೆ ಮಾಜಿ ಸದಸ್ಯ ಎ.ಯು. ಸುಬ್ಬಯ್ಯ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಕಾಂಗ್ರೆಸ್ ಮುಖಂಡ ಡೆಲ್ಲಿ ರವಿ, ವಿಜಯನಗರ ಕ್ಷೇಮಾಭಿವೃದ್ಧಿ ಸಂಘದ ನಂಜಯ್ಯ, ನರಸೇಗೌಡ, ಐಶ್ವರ್ಯ ಫೌಂಡೇಶನ್ ಅಧ್ಯಕ್ಷ ಗೋಪಾಲಸ್ವಾಮಿ, ಮುಖಂಡರಾದ ನಾಗರಾಜು, ಶ್ರೀನಿವಾಸ್, ಕುಮಾರ್, ಪ್ರಶಾಂತ್, ಪಾಲಿಕೆ ಅಧಿಕಾರಿಗಳಾದ ಹಿತೇಂದ್ರ, ಅಭಿಲಾಷ್, ಶುಶ್ರುತ್, ನಟೇಶ್ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.06.2026 ಸೋಮವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಕುತ್ತಿಗೆ ನೋವು, ಸ್ಪಾಂಡಿಲೋಸಿಸ್, ಭುಜನೋವು, ಬೆನ್ನು ನೋವು ಯೋಗ ಚಿಕಿತ್ಸಾ ಶಿಬಿರ, ಅರ್ಥೈಟಿಸ್ ಚಿಕಿತ್ಸಾ ಶಿಬಿರ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ), ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.

■ **ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್** : ಶ್ರೀದುರ್ಗಾ ಸಪ್ತಶತೀ ಪಾರಾಯಣ ಹಾಗೂ ಚಂಡಿಕಾ ಮಹಾಯಾಗ, ಬೆಳಗ್ಗೆ 7 ಗಂಟೆಗೆ ಚಂಡಿಕಾ ಮಹಾಯಾಗ, ಸುಹಾಸಿನಿಯರಿಂದ ಕುಂಕುಮಾರ್ಚನೆ ಸೇವೆ, ಬೆಳಗ್ಗೆ 10.30ಕೆ ಭಜನಾ ಸಮಾವೇಶ, ವಿವಿಧ ಭಜನಾ ಮಂಡಳಿಗಳಿಂದ ಸಾಮೂಹಿಕ ಭಕ್ತಿಪೂರ್ವಕ ಭಜನಾ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ, ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಡಾ. ಭಾಷ್ಯಂ ಸ್ವಾಮೀಜಿ, ಶ್ರೀ ರಾಮಕೃಷ್ಣ ಮಠದ ಟ್ರಸ್ಟಿ ಸ್ವಾಮಿ ಮುಕ್ತಿದಾನಂದ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಸ್ಥಳ: ನಂಜರಾಜ ಬಹದ್ದೂರ್ ಛತ್ರದ ಆವರಣ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್** : ಯುವ ಪ್ರಕಾರ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಗೌರವ ಅಧ್ಯಕ್ಷ ಪ್ರೊ. ಎಂ.ಎಸ್.ಕೆ. ನರಹರಿ, ಎಂ.ಡಿ. ಗೋಪಿನಾಥ್, ಎಸ್. ಬಾಲಾಜಿ, ವೈ.ಆರ್. ರಮೇಶ, ಗಾಯಕ ನಿತಿನ್ ರಾಜಾರಾಂ ಶಾಸ್ತ್ರಿ, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 – ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ. ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠದಲ್ಲಿನ ಚಟುವಟಿಕೆಗಳು ಮತ್ತು ಅಧ್ಯಯನ ಅವಕಾಶಗಳನ್ನು ಕುರಿತು ಪೀಠದ ಮುಖ್ಯಸ್ಥರಾದ ಪ್ರೊ. ಶೆಲ್ವಪಿಳ್ಳೆ ಅಯ್ಯಂಗಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ–ಎನ್.ಕೇಶವಮೂರ್ತಿ, 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ವಾದ್ಯವೃಂದ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ವರ್ತಮಾನ ವೃತ್ತಾಂತ' ಸುದ್ಧಿಯ ಹಿಂದಿನ ಕಥೆ, ಪ್ರಸ್ತುತಿ: ಸಹನ

ಮಧ್ಯಾಹ್ನ : 12.05 ವನಿತಾ ವಿಹಾರ–ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿ ಪಡೆದಿರುವ ಸಮಾಜ ಸೇವೆಯನ್ನು ಜೀವನವಾಗಿಸಿಕೊಂಡಿರುವ ಮಂಡ್ಯದ ಅನುಪಮ ನಾಗರಾಜ್ ಗೌಡ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ದಿಗ್ವಿಜಯ್ .ಬಿ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಎಸ್.ಜಿ.ರಘುರಾಮ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ರೋಹಿಣಿ ಜಿ.ರಾವ್–ವೀಣಾವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ, ಮಾರುತಿ ವಿಜಯ, ಪ್ರಸ್ತುತಿ–ವಿದ್ವಾನ್. ಆರ್. ಗುರುರಾಜುಲು ನಾಯ್ಡು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಮಣ್ಣು ಹಾಗೂ ನೀರಿನ ಸಂರಕ್ಷಣೆ ಈ ಕುರಿತು ಕೃಷಿ ಇಲಾಖೆಯ ಉಪನಿರ್ದೇಶಕರಾದ ಜಿ.ಎಚ್. ಯೋಗೀಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಹರಿಪ್ರಸಾದ್ ಚೌರಾಸಿಯ–ಬಾನ್ಸುರಿ ವಾದನ, 8.30 ರಂಗಗೀತೆಗಳು–ಶಕುಂತಲಾ ನಾಟಕದ ಹಾಡುಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಪ್ರಪಂಚಂ ಸೀತಾರಾಂ–ಕೊಳಲು ವಾದನ, 10.00ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ

ದಸರಾ ವೇಳೆ ಮೈಸೂರು ಕಂಬಳ ಉತ್ಸವ

100ಕ್ಕೂ ಅಧಿಕ ಜೋಡಿ ಕೋಣಗಳು ಭಾಗಿ

ಇದಕ್ಕಾಗಿ 7 ಕೋಟಿ ಅನುದಾನ ಮೀಸಲು



ಮೈಸೂರಿನ ವಿಜಯನಗರದ ಎಂಡಿಎ ಜಾಗ ಪರಿಶೀಲಿಸುತ್ತಿರುವ ಕಂಬಳ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.



ಸಾತಗಳ್ಳಿಯಲ್ಲಿ ಸ್ಥಳ ಪರಿಶೀಲಿಸಿದ ಕಂಬಳ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.

ಮೈಸೂರು,ಜೂ.22(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಆಯೋಜಿಸಲು ನಿರ್ಧರಿಸಿರುವ 'ಮೈಸೂರು ಕಂಬಳ' ಉತ್ಸವದಲ್ಲಿ 100ಕ್ಕೂ ಹೆಚ್ಚು ಜೋಡಿ ಕೋಣಗಳು ಪಾಲ್ಗೊಳ್ಳುತ್ತಿದ್ದು, ಅಂದಾಜು 7 ಕೋಟಿ ರೂ. ವೆಚ್ಚದಲ್ಲಿ ಕಂಬಳ ಉತ್ಸವಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ದಸರಾ ಮಹೋತ್ಸವದಲ್ಲಿ 'ಮೈಸೂರು ಕಂಬಳ' ಉತ್ಸವ ನಡೆಸಲು ಈಗಾಗಲೆ ಜಿಲ್ಲಾಡಳಿತ ಕಂಬಳ ಉತ್ಸವ ಸಮಿತಿ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದೆ ಅಲ್ಲಿ ಉತ್ಸವದ ರೂಪುರೇಷೆ ಬಗ್ಗೆ ಚರ್ಚಿಸಲಾಗಿದೆ. ಉತ್ಸವಕ್ಕೆ ಮೈಸೂರಿನ ಮೂರು ಸ್ಥಳ ಗುರುತಿಸಲಾಗಿದ್ದು, ಅವುಗಳಲ್ಲಿ ವಿಜಯನಗರದ ಐಶ್ವರ್ಯ ಪೆಟ್ರೋಲ್ ಬಂಕ್ ಸಮೀಪ ಎಂಡಿಎಗೆ ಸೇರಿದ 15 ಎಕರೆ ವಿಸ್ತೀರ್ಣದ ಕ್ರೀಡಾ ಮೈದಾನ ಹಾಗೂ ಸಾತಗಳ್ಳಿ ವಿಟಿಟಿಯು ಸಮೀಪದ 23 ಎಕರೆ ಮೈದಾನವನ್ನು ಪರಿಶೀಲಿಸಲಾಗಿದೆ. ಈ ಎರಡೂ ಮೈದಾನದಲ್ಲಿ ಒಂದನ್ನು ಮುಂದಿನ ವಾರ ನಡೆಯುವ ಎರಡನೇ ಸಭೆಯಲ್ಲಿ ಅಂತಿಮಗೊಳಿಸಲಾಗುತ್ತದೆ.

100ಕ್ಕೂ ಹೆಚ್ಚು ಜೋಡಿ ಕೋಣ ಭಾಗಿ: ತುಳುನಾಡಿನ ಪ್ರಸಿದ್ಧ ಕಂಬಳ ಉತ್ಸವಗಳಲ್ಲಿ ಪಾಲ್ಗೊಂಡಿರುವ 100ಕ್ಕೂ ಹೆಚ್ಚು ಜೋಡಿ ಕೋಣಗಳು 'ಮೈಸೂರು ಕಂಬಳ' ಉತ್ಸವದಲ್ಲಿ ಪಾಲ್ಗೊಳ್ಳಲಿವೆ. ಈಗಾಗಲೆ ದಸರಾ ಮೈಸೂರು ಕಂಬಳ ಉತ್ಸವದ ಬಗ್ಗೆ ಮಾಹಿತಿ ನೀಡಲಾಗಿದ್ದು, ಮಂಗಳೂರು, ಪುತ್ತೂರು, ಕಾರ್ಕಳ, ಉಡುಪಿ, ಮೂಡಬಿದ್ರೆ ಸುಳ್ಯ ಸೇರಿದಂತೆ ಸುತ್ತುಮುತ್ತಲಿನ ಕೋಣಗಳ ಮಾಲೀಕರಿಗೆ ಆಹ್ವಾನ ನೀಡಲಾಗಿದೆ.

ಅ.8ರಿಂದ 19ರೊಳಗೆ ಮೈಸೂರು ಕಂಬಳ

"ದಸರಾ ಮಹೋತ್ಸವದ ಅಂಗವಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆಶಯದಂತೆ ಮೈಸೂರಲ್ಲಿ ಕಂಬಳ ನಡೆಸಲು ಕಂಬಳ ಸಮಿತಿ ನಿರ್ಧರಿಸಿದೆ. ಈಗಾಗಲೇ ಜಿಲ್ಲಾಡಳಿತ ಸಮಿತಿಯೊಂದಿಗೆ ಮೊದಲ ಸಭೆ ನಡೆಸಿ ಚರ್ಚಿಸಿದೆ. ಕಂಬಳ ನಡೆಸಲು ಕನಿಷ್ಠ 20 ಎಕರೆ ಜಾಗ ಬೇಕು. ಹಾಗಾಗಿ ಮೈಸೂರಲ್ಲಿ ಮೂರು ಸ್ಥಳ ಪರಿಶೀಲಿಸಿದ್ದು, ಅದರಲ್ಲಿ ಎರಡು ಸ್ಥಳ ಸೂಕ್ತ ಎನಿಸಿದೆ. ಮುಂದಿನ ವಾರ ಕಂಬಳ ಸಮಿತಿ ಅಧ್ಯಕ್ಷರೂ ಆಗಿರುವ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ನೇತೃತ್ವದಲ್ಲಿ ಮತ್ತೊಂದು ಸಭೆ ನಡೆಯಲಿದೆ. ಅದರಲ್ಲಿ ಸ್ಥಳ ಅಂತಿಮಗೊಳ್ಳಲಿದೆ. ಕಂಬಳ ಟ್ರ್ಯಾಕ್ ನಿರ್ಮಾಣಕ್ಕೆ ಮೂರು ತಿಂಗಳು ಸಮಯಾವಕಾಶ ಬೇಕಾಗುತ್ತದೆ. ಕಂಬಳ ಉತ್ಸವ ಅ.8ರಿಂದ 19ರೊಳಗೆ ನಿಗಧಿಯಾದ ದಿನಾಂಕದಂದು ನಡೆಸಲಾಗುತ್ತದೆ. ಕಂಬಳ ವೀಕ್ಷಿಸಲು ಕನಿಷ್ಠ 2 ರಿಂದ 3 ಲಕ್ಷ ಜನ ಆಗಮಿಸಲಿದ್ದಾರೆ.

- ಮುರುಳೀಧರ್ ರೈ ಮಠಂತಬೆಟ್ಟು, ಕಾರ್ಯಾಧ್ಯಕ್ಷ, ಕಂಬಳ ಸಮಿತಿ

ಎರಡು ಟ್ರ್ಯಾಕ್‌ನಲ್ಲಿ ಓಟ: ಕೋಣಗಳ ರೋಚಕ ಓಟದ ಸ್ಪರ್ಧೆಗೆ ಎರಡು ಟ್ರ್ಯಾಕ್ ನಿರ್ಮಿಸಲಾಗುತ್ತದೆ. 250 ಮೀಟರ್ ಉದ್ದ 50 ಅಡಿ ಅಗಲದ ಟ್ರ್ಯಾಕ್ ನಿರ್ಮಿಸಲಾಗುತ್ತದೆ ಆದರೆ, ಓಟಕ್ಕೆ 140 ಮೀಟರ್ ಅಂತರವನ್ನು ನಿಗದಿ ಮಾಡಲಾಗುತ್ತದೆ ಅಕ್ಕ –ಪಕ್ಕ ಇರುವ ಎರಡೂ ಟ್ರ್ಯಾಕ್‌ನಲ್ಲಿ ಏಕ ಕಾಲಕ್ಕೆ ಎರಡು ಜೋಡಿ ಕೋಣಗಳು ಓಡಿ ಗೆದ್ದ ಜೋಡಿ ಮುಂದಿನ ಸುತ್ತಿಗೆ ಪ್ರವೇಶ ಪಡೆಯಲಿವೆ.


ಸತತ 48 ಗಂಟೆ ಓಟ: ದಕ್ಷಿಣ ಕನ್ನಡದಲ್ಲಿ ನಡೆಸುವ ಮಾದರಿ ಹಾಗೂ ನಿಯಮವನ್ನು ಮೈಸೂರು ಕಂಬಳ ಉತ್ಸವಕ್ಕೂ ಅನ್ವಯವಾಗಲಿದ್ದು, 48 ಗಂಟೆ ಸತತ ಕಂಬಳ ಉತ್ಸವ ನಡೆಯಲಿದೆ. ನಿಗಧಿತ ದಿನಾಂಕದಂದು ಬೆಳಗ್ಗೆ 9ಗಂಟೆಗೆ ಉದ್ಘಾಟನೆಗೊಳ್ಳುವ ಕಂಬಳ ಉತ್ಸವ ಎರಡು ರಾತ್ರಿ, ಎರಡು ಹಗಲು ನಿರಂತರವಾಗಿ ನಡೆಯಲಿದೆ. ಹೊನಲು ಬೆಳಕಿನ ವ್ಯವಸ್ಥೆಯಲ್ಲಿ ಕಂಬಳ ನಡೆಸಲು ಉದ್ದೇಶಿಸಲಾಗಿದೆ.

ಒಂದು ಜೋಡಿಗೆ 50 ಸಾವಿರ ರೂ.: ಕಳೆದ ವರ್ಷ ಬೆಂಗಳೂರಲ್ಲಿ ನಡೆದ ಕಂಬಳ ಉತ್ಸವದಲ್ಲಿ ಪಾಲ್ಗೊಂಡ ಒಂದು ಜೋಡಿ ಕೋಣಕ್ಕೆ 50 ಸಾವಿರ ರೂ. ವೆಚ್ಚ ಭರಿಸಲಾಗಿತ್ತು. ಅದೇ ಮಾದರಿಯಲ್ಲಿ ಮೈಸೂರು ಕಂಬಳಕ್ಕೆ ಬರುವ ಜೋಡಿ ಕೋಣಗಳಿಗೂ 50 ಸಾವಿರ ರೂ. ನೀಡಲು ಕಂಬಳ ಸಮಿತಿ ನಿರ್ಧರಿಸಿದೆ. ಅದಲ್ಲದೆ, ವಿಜೇತ ಜೋಡಿಗೆ ಏನು ಬಹುಮಾನ ನೀಡಬೇಕು ಎಂದು ಮುಂದಿನ ಸಭೆಯಲ್ಲಿ ನಿರ್ಧರಿಸಲಾಗುತ್ತದೆ.

ಒಂದು ಜೋಡಿಗೆ 30 ಜನ: ಕಂಬಳ ಉತ್ಸವದಲ್ಲಿ ಪಾಲ್ಗೊಳ್ಳುವ ಜೋಡಿ ಕೋಣಗಳೊಂದಿಗೆ 30 ಮಂದಿ ಆಗಮಿಸಲಿದ್ದಾರೆ. ಅದರ ಪಾಲಕರು, ಸಹಾಯಕರು ಸೇರಿದಂತೆ ಈ ತಂಡದಲ್ಲಿ ಆಗಮಿಸುವವರಿಗೆ ಊಟ, ವಸತಿ ಸೇರಿ ಹಾಗೂ ಅಗತ್ಯ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಕಂಬಳ ಆರಂಭಕ್ಕೂ ಒಂದು ದಿನ ಮೊದಲೆ ಕೋಣಗಳನ್ನು ಕರೆತರುವಂತೆ ಸೂಚನೆ ನೀಡಲಾಗುತ್ತದೆ.

150 ಮಂದಿಯಿಂದ ನಿರ್ವಹಣೆ: ಮೈಸೂರು, ಬೆಂಗಳೂರು ಕಂಬಳ ಸಮಿತಿ ಅಧ್ಯಕ್ಷರೂ ಆಗಿರುವ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ನೇತೃತ್ವದಲ್ಲಿ ಕಂಬಳ ಉತ್ಸವ ನಡೆಯಲಿದೆ. ಕಂಬಳ ಸಮಿತಿ ಕಾರ್ಯಾಧ್ಯಕ್ಷ ಮುರುಳೀಧರ್ ರೈ ಮಠಂತಬೆಟ್ಟು, ಕಾರ್ಯದರ್ಶಿ ವಿಜಯಕುಮಾರ್ ಕಂಗಿನಮನೆ ಸೇರಿದಂತೆ 15 ಜನರ ಸಮಿತಿಯಿದ್ದು, ಅವರೊಂದಿಗೆ ಕಂಬಳದಲ್ಲಿ ಪರಿಣಿತಿ ಪಡೆದ 130ಕ್ಕೂ ಹೆಚ್ಚು ಮಂದಿ ಮೈಸೂರು ಕಂಬಳ ಯಶಸ್ವಿಗೆ ಕಾರ್ಯ ನಿರ್ವಹಿಸಲಿದ್ದಾರೆ. ಇವರೊಂದಿಗೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ 15 ಅಧಿಕಾರಿಗಳ ಸಮಿತಿಯೂ ನೆರವಾಗಲಿದೆ.

ದೇಗುಲಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿ ಲಿಂಗೈಕ್ಯ



ಮೈಸೂರು, ಜೂ.22– ಬೆಂಗಳೂರು ದಕ್ಷಿಣ ಜಿಲ್ಲೆ ಕನಕಪುರ ತಾಲೂಕಿನ ದೇಗುಲ ಮಠದ ಹಿರಿಯ ಶ್ರೀಗಳಾದ ಮುಮ್ಮಡಿ ನಿರ್ವಾಣ ಸ್ವಾಮೀಜಿ ಅವರು, ವಯೋಸಹಜ ಕಾಯಿಲೆಯಿಂದ ಸೋಮವಾರ ಸಂಜೆ ಲಿಂಗೈಕ್ಯರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಮಂಗಳವಾರ ಮೂರು ಗಂಟೆಯವರೆಗೂ ಶ್ರೀಗಳ ಅಂತಿಮ ದರ್ಶನ ಮಠದ ಆವರಣದಲ್ಲಿ ವ್ಯವಸ್ಥೆ ಮಾಡಲಾಗಿದೆ. ಬಳಿಕ ಕನಕಪುರ ಪ್ರಮುಖ ರಸ್ತೆಗಳಲ್ಲಿ ಮಧ್ಯಾಹ್ನ 3 ಗಂಟೆಯಿಂದ ಸಂಜೆ 4.30ರವರೆಗೆ ಅಂತಿಮ ದರ್ಶನ ಮೆರವಣಿಗೆ ಜರುಗಲಿದೆ.

ಬಳಿಕ ಮಠದ ಆವರಣದಲ್ಲಿ ನಾಡಿನ ಪ್ರಮುಖ ಮಠಾಧಿಪತಿಗಳು ಹಾಗೂ ಹರಗುರು ಚರಮೂರ್ತಿಗಳ ಸಾನ್ನಿಧ್ಯದಲ್ಲಿ ಅಂತಿಮ ವಿಧಿ–ವಿಧಾನಗಳು ನೆರವೇರಿಸಲಾಗುತ್ತದೆ ಎಂದು ಕನಕಪುರ ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ

292 ಪ್ರಕರಣಗಳಲ್ಲಿ ಒಟ್ಟು 73,500 ರೂ. ದಂಡ ಪಾವತಿ

ಮೈಸೂರು,ಜೂ.22(ಪಿಎಂ)– ರಾಜ್ಯ ಸರ್ಕಾರ ಇ–ಚಲನ್ ಅಡಿಯ ಸಂಚಾರ ನಿಯಮ ಉಲ್ಲಂಘನೆ ದಂಡಕ್ಕೆ ಶೇ.50ರಷ್ಟು ರಿಯಾಯಿತಿ ನೀಡಿದ್ದು, ಅದರಂತೆ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಭಾನುವಾರ (ಜೂ.21) 292 ಪ್ರಕರಣಗಳ ಸಂಬಂಧ ಒಟ್ಟು 73,500 ರೂ. ದಂಡ ಪಾವತಿಯಾಗಿದೆ ಎಂದು ಜಿಲ್ಲಾ ಪೊಲೀಸ್ ಪ್ರಕಟಣೆ ತಿಳಿಸಿದೆ.

ಸಂಚಾರ ನಿಯಮ ಉಲ್ಲಂಘಿಸಿರುವವರಿಗೆ ರಿಯಾಯಿತಿಯಲ್ಲಿ (ಶೇ.50) ದಂಡ ಪಾವತಿಸಲು ಮೈಸೂರು ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ನಗದು ಪಾವತಿಸಲು ಹಾಗೂ Ksp fine App Websiteಮೂಲಕ ಆನ್‌ಲೈನ್‌ನಲ್ಲಿ ಪಾವತಿಸಲು ಜು.10ರವರೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಸಾರ್ವಜನಿಕರು ದಂಡ ಪಾವತಿಸಲು ಸರ್ಕಾರವು ನೀಡಿರುವ ರಿಯಾಯಿತಿಯನ್ನು ಸದುಪಯೋಗ ಮಾಡಿಕೊಳ್ಳುವಂತೆ ಕೋರಲಾಗಿದೆ.

ಇಂದು ಶಂಕುಸ್ಥಾಪನಾ ಸಮಾರಂಭ

ಮೈಸೂರು,ಜೂ.22(ಪಿಎಂ)– ಮೈಸೂರು ವಕೀಲರ ಸಂಘ, ಕರ್ನಾಟಕ ಮತ್ತು ಭಾರತ ಸರ್ಕಾರಗಳ ಸಂಯುಕ್ತಾಶ್ರಯದಲ್ಲಿ ಮಹಿಳಾ ವಕೀಲರು ಹಾಗೂ ನೋಟರಿಗಳ ಕಟ್ಟಡ ನಿರ್ಮಾಣಕ್ಕೆ ಜೂ.23ರ ಬೆಳಗ್ಗೆ 10ಕ್ಕೆ ಶಂಕುಸ್ಥಾಪನಾ ಸಮಾರಂಭ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಶಂಕುಸ್ಥಾಪನಾ ಸಮಾರಂಭ ನಡೆಯಲಿದ್ದು, ಕರ್ನಾಟಕ ಹೈ ಕೋರ್ಟ್ ನ್ಯಾಯಮೂರ್ತಿ ಎಸ್.ಜಿ.ಪಂಡಿತ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಅವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಂದಿನಿ ಹಾಲಿನ ಬಗ್ಗೆ ತಪ್ಪು ಮಾಹಿತಿ; ವೈದ್ಯೆಗೆ ಹೈಕೋರ್ಟ್ ತರಾಟೆ

ಕ್ರಿಮಿನಲ್ ಮೊಕದ್ದಮೆಗೆ ತಡೆ ನೀಡಲು ನಕಾರ!



ಬೆಂಗಳೂರು: ಇನ್‌ಸ್ಟಾಗ್ರಾಂ ರೀಲ್ಸ್‌ಗಳ ಮೂಲಕ ನಂದಿನಿ ಡೈರಿ ಉತ್ಪನ್ನಗಳ ಬಗ್ಗೆ ತಪ್ಪು ಮಾಹಿತಿ ಹರಡಿದ ಆರೋಪದ ಮೇಲೆ ಬೆಂಗಳೂರು ಮೂಲದ ಚರ್ಮರೋಗ ತಜ್ಞರಾದ ಡಾ. ಶರಣ್ಯ ಪದ್ಮಾ ವಿರುದ್ಧದ ಕ್ರಿಮಿನಲ್ ಮೊಕದ್ದಮೆಗಳಿಗೆ ತಡೆ ನೀಡಲು ಕರ್ನಾಟಕ ಹೈಕೋರ್ಟ್ ಸೋಮವಾರ ನಿರಾಕರಿಸಿದೆ.

ತಮ್ಮ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯನ್ನು ರದ್ದುಗೊಳಿಸುವಂತೆ ಕೋರಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ, ಯಾವುದೇ ವೈಜ್ಞಾನಿಕ ಆಧಾರವಿಲ್ಲದೆ ಸಾರ್ವಜನಿಕ ಭೀತಿಯನ್ನು ಸೃಷ್ಟಿಸಲು ಸಾಮಾಜಿಕ ಮಾಧ್ಯಮವನ್ನು ಬಳಸುವುದು ಸರಿಯಲ್ಲ ಎಂದು ಹೇಳಿದರು.

ಈ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯ ರಾಜ್ಯ ಸರ್ಕಾರ ಮತ್ತು ವೈದ್ಯರ ವಿರುದ್ಧ ದೂರು ದಾಖಲಿಸಿದ್ದ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್)ದ ಪ್ರತಿಕ್ರಿಯೆಯನ್ನು ಕೇಳಿದೆ.

ಚರ್ಮರೋಗ ತಜ್ಞೆ ಡಾ. ಶರಣ್ಯ ಪದ್ಮಾ ಅವರು ಇನ್‌ಸ್ಟಾಗ್ರಾಂ ಮತ್ತು ಇತರ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಕೆಲವು ನಂದಿನಿ ಹಾಲಿನ ಉತ್ಪನ್ನಗಳು ಸೇವನೆಗೆ ಸುರಕ್ಷಿತವಲ್ಲ ಎಂಬ ಮಾನನಷ್ಟಕರ ಹೇಳಿಕೆಗಳೊಂದಿಗೆ ರೀಲ್ಸ್‌ಗಳನ್ನು ಅಪ್‌ಲೋಡ್ ಮಾಡಿದ್ದಾರೆ ಎಂದು ಕೆಎಂಎಫ್ ತನ್ನ ದೂರಿನಲ್ಲಿ ತಿಳಿಸಿದೆ.

ಸ್ಟ್ರಾಬೆರಿ ಫ್ಲೇವರ್ ಹಾಲು ಮತ್ತು ಇತರ ಇದೇ ರೀತಿಯ ಪಾನೀಯಗಳು ಸೇರಿದಂತೆ ಕೆಲವು ನಂದಿನಿ ಉತ್ಪನ್ನಗಳು ವಿಷಕಾರಿ ಮತ್ತು ರಾಸಾಯನಿಕಗಳನ್ನು ಒಳಗೊಂಡಿವೆ. ಇದು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ಅವರು ಹೇಳಿದ್ದರು ಎಂದು ಆರೋಪಿಸಲಾಗಿದೆ.

ಕೆಎಂಎಫ್ ದೂರಿನ ಆಧಾರದ ಮೇಲೆ, ಮಲ್ಲೇಶ್ವರಂ ಪೊಲೀಸರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಉದ್ಯೋಗಿಯಾಗಿರುವ ಮತ್ತು ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಕ್ಲಿನಿಕ್ ನಡೆಸುತ್ತಿರುವ ಡಾ. ಪದ್ಮಾ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಡಾ. ಪದ್ಮಾ ಅವರು ತಮ್ಮ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸುವಂತೆ ಅರ್ಜಿ ಸಲ್ಲಿಸಿದ್ದಾರೆ.

ವಿಚಾರಣೆಯ ಸಂದರ್ಭದಲ್ಲಿ, ವೈದ್ಯರು ಸ್ಟ್ರಾಬೆರಿ ಫ್ಲೇವರ್ ಹಾಲಿನ ಬಗ್ಗೆ ಮಾತ್ರ ಕಾಮೆಂಟ್ ಮಾಡಿದ್ದಾರೆ ಮತ್ತು ನಂದಿನಿ ಹಾಲಿನ ಬಗ್ಗೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ ಎಂದು ಅವರ ಪರ ವಕೀಲರು ವಾದಿಸಿದರು.

ನೀವು ಅದನ್ನು ಹೇಗೆ ಹೇಳುತ್ತೀರಿ? ನೀವು ಎಲ್ಲ ನಾಗರಿಕರಲ್ಲಿ ಭಯವನ್ನು ಉಂಟುಮಾಡುತ್ತಿದ್ದೀರಿ. ನಂದಿನಿ ಹಾಲು ಒಳ್ಳೆಯದಲ್ಲ ಎಂದು ನೀವು ಹೇಗೆ ಹೇಳುತ್ತೀರಿ? ನೀವು ಅದನ್ನು ಪರೀಕ್ಷಿಸಿದ್ದೀರಾ? ನೀವು ಪ್ರಮಾಣೀಕರಿಸಿದ್ದೀರಾ? ನೀವು ಅದನ್ನು ಸರ್ಕಾರಕ್ಕೆ ತಿಳಿಸಿದ್ದೀರಾ? ಇನ್‌ಸ್ಟಾಗ್ರಾಂ ಇರುವುದು ಅದಕ್ಕಾಗಿಯೇ? ಎಂದು ನ್ಯಾಯಾಲಯ ಪ್ರಶ್ನಿಸಿದೆ.

'ನಕಲಿ ಹಾಲು' ಎಂದರೆ ನಿಮ್ಮ ಪ್ರಕಾರ ಅರ್ಥವೇನು? ನೀವು ಈ ರೀತಿ ಭಯ ಹುಟ್ಟಿಸಲು ಸಾಧ್ಯವಿಲ್ಲ. ಹಾಲು ನಕಲಿ, ಸ್ಟ್ರಾಬೆರಿ ರುಚಿ ಚೆನ್ನಾಗಿಲ್ಲ ಎಂದು ಹೇಳುವುದು ಸರಿಯಲ್ಲ. ಒಂದು ವೇಳೆ ಅದು ಚೆನ್ನಾಗಿಲ್ಲದಿದ್ದರೆ, ನೀವು ಕುಡಿ ಯುವುದು ಬೇಡ. ಆದರೆ, ನೀವು ಇದನ್ನೆಲ್ಲ ಏಕೆ ಮಾಡಬೇಕು? ಯಾರಾ ದರೂ ಅದನ್ನು ಪರೀಕ್ಷೆಗೆ ಕಳುಹಿಸಿದ್ದಾರೆಯೇ? ಎಂದು ನ್ಯಾಯಾಲಯ ತರಾಟೆಗೆ ತೆಗೆದುಕೊಂಡಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ಇಂತಹ ಪರಿಶೀಲಿಸದ ಹೇಳಿಕೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ನ್ಯಾಯಾಧೀಶರು, ಸಾಂಧರ್ಭಿಕವಾಗಿ, ನೀವು ತಕ್ಷಣವೇ ಇಂತಹ ಹೇಳಿಕೆಗಳನ್ನು ನೀಡುತ್ತೀರಿ ಮತ್ತು ಸಮಾಜದಲ್ಲಿ ಸಮಸ್ಯೆಗಳನ್ನು ಸೃಷ್ಟಿಸುತ್ತೀರಿ. Instagram ಇರುವುದು ಅದಕ್ಕಾಗಿ ಅಲ್ಲ ಎಂದರು.

ಬಿಡದಿ ಟೌನ್‌ಶಿಪ್ ವಿವಾದ: ಡಿಕೆಶಿ–ಹೆಚ್‌ಡಿಕೆ ಪತ್ರ ಸಮರ


ವಿಧಾನಸೌಧದಲ್ಲಿ ಚರ್ಚೆಗೆ ಆಹ್ವಾನಿಸಿದ ಡಿಕೆಶಿ



ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆಗೆ ದಿನದಿಂದ ದಿನಕ್ಕೆ ಭಾರೀ ವಿರೋಧ ವ್ಯಕ್ತವಾಗುತ್ತಿದ್ದು, ತಮ್ಮ ಮತ್ತು ಯೋಜನೆ ಬಗ್ಗೆ ಸಮರ ಸಾರಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆಗೆ ಆಹ್ವಾನಿಸಿದ್ದಾರೆ. ಈ ಸಂಬಂಧ ಕುಮಾರಸ್ವಾಮಿಗೆ ಸಿಎಂ ಡಿ.ಕೆ. ಶಿವಕುಮಾರ್ ಬರೆದಿರುವ ಪತ್ರದ ಸಾರಾಂಶ ಇಂತಿದೆ: ತಾವು ಪ್ರಾರಂಭಿಸಿದ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ, ತಮ್ಮ ಜೊತೆ ನಾನು ಚರ್ಚಿಸಲು ಉತ್ಸುಕನಾಗಿದ್ದು, ದಿನಾಂಕ 26.06.2026ರಂದು ಬೆಳಗ್ಗೆ 11 ಗಂಟೆಗೆ ವಿಧಾನಸೌಧಕ್ಕೆ ತಾವು ಮತ್ತು ತಮ್ಮ ತಂಡದ ಐದು ಪ್ರತಿನಿಧಿಗಳೊಂದಿಗೆ ನನ್ನ ಕಚೇರಿಗೆ ಆಗಮಿಸುವಂತೆ ತಮ್ಮನ್ನು ಕೋರುತ್ತೇನೆ ಎಂದು ಮುಖ್ಯಮಂತ್ರಿಗಳು ಅಧಿಕೃತವಾಗಿ ಆಹ್ವಾನ ನೀಡಿದ್ದಾರೆ.

ಬೇಡ... ಬೇಡ... ಬೈರಮಂಗಲದಲ್ಲಿ ಸಭೆ ನಿಗದಿ ಮಾಡಿ

●26ರಂದು ಪೂರ್ವನಿಗದಿತ ಕಾರ್ಯಕ್ರಮವಿದೆ, 27ರಂದು ಸಭೆ ನಿಗದಿಗೆ ಕೋರಿಕೆ ●ನೊಂದ ರೈತರಿಲ್ಲದ ಸಭೆ ಫಲಪ್ರದವಾಗದು ಎಂದ ಸಚಿವರು



ಬೆಂಗಳೂರು, ಜೂ.22– ಬಿಡದಿ ನೂತನ ಟೌನ್‌ಶಿಪ್ ಯೋಜನೆ ಬಗ್ಗೆ ಚರ್ಚಿಸಲು ಸಿಎಂ ತಮಗೆ ಬರೆದಿದ್ದ ಪತ್ರಕ್ಕೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಉತ್ತರ ಬರೆದಿದ್ದಾರೆ.

ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ವಿಧಾನಸೌಧದಲ್ಲಿ ಚರ್ಚೆ ಉಪಯೋಗವಿಲ್ಲ, ಬಾಧಿತ ರೈತರ ಭಾಗದಲ್ಲಿಯೇ ಚರ್ಚೆ ನಡೆಯಬೇಕು ಎಂದು ಸಚಿವರು ತಿಳಿಸಿದ್ದಾರೆ.

ಸಚಿವರ ಪತ್ರದ ಪೂರ್ಣಪಾಠ ; ಡಿ.ಕೆ.ಶಿವಕುಮಾರ್‌ರವರೇ, ದಿನಾಂಕ: 22–06–2026ರ ತಮ್ಮ ಪತ್ರದಲ್ಲಿ ವಿಧಾನಸೌಧದಲ್ಲಿ ದಿನಾಂಕ: 26–06–2026ರಂದು ಬೆಳಗ್ಗೆ 11 ಗಂಟೆಗೆ ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದ ಸಭೆಗೆ ನನ್ನನ್ನು ಮತ್ತು ನನ್ನ ತಂಡದ ಐವರು ಪ್ರತಿನಿಧಿಗಳೊಂದಿಗೆ ಚರ್ಚೆಗೆ ಆಹ್ವಾನಿಸಿರುವ ತಮ್ಮ ಪತ್ರ ನನ್ನ ಕೈ ಸೇರಿದೆ. ತಮ್ಮ ಆಹ್ವಾನಕ್ಕೆ ಧನ್ಯವಾದಗಳು.

ಬಿಡದಿ ಸಮಗ್ರ ಉಪನಗರ ಯೋಜನೆ ಅನುಷ್ಠಾನದಿಂದ ರಾಮನಗರ ತಾಲೂಕಿನ ಬಿಡದಿ ಹೋಬಳಿಯ ಎಂಟು ಗ್ರಾಮಗಳು ಮತ್ತು ಹಾರೋಹಳ್ಳಿ ತಾಲೂಕಿನ ಒಂದು ಗ್ರಾಮದ ರೈತರು, ಗ್ರಾಮಸ್ಥರು ಮತ್ತು ಪಾಲುದಾರರು ಹಲವಾರು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅಲ್ಲದೇ, ಈ ಭಾಗದಲ್ಲಿರುವ ಅಪಾರ ಪರಿಸರ ಸಂಪತ್ತಿಗೆ ಹಾನಿಯಾಗುತ್ತದೆ.

ಈ ಹಿನ್ನೆಲೆಯಲ್ಲಿ ತಾವು ಪ್ರಸ್ತಾಪಿಸಿರುವ ಸಭೆಯನ್ನು ರಾಮನಗರ ಜಿಲ್ಲೆಯ ಬಿಡದಿ ಅಥವಾ ಬಾಧಿತ ಪ್ರದೇಶವಾದ ಬೈರಮಂಗಲದ ಯಾವುದಾದರೂ ಸೂಕ್ತ ಸಾರ್ವಜನಿಕ ಸ್ಥಳದಲ್ಲಿ ಕರೆಯುವುದು ಸಮಂಜಸವೆನ್ನಿಸುತ್ತದೆ.

ಈ ಮೇಲೆ ಸೂಚಿಸಿದ ಸ್ಥಳಗಳಲ್ಲಿ ಬಿಡದಿ ಸಮಗ್ರ ಉಪನಗರ ಯೋಜನೆಯಿಂದ ಬಾಧಿತರಾಗಿರುವ ರೈತರು, ಗ್ರಾಮಸ್ಥರು, ಕೃಷಿ ಕಾರ್ಮಿಕರು, ಹೈನುಗಾರಿಕೆ ಉದ್ಯಮದಲ್ಲಿರುವ ರೈತ ಮಹಿಳೆಯರು, ಸಣ್ಣ ವ್ಯಾಪಾರಸ್ಥರು, ಉದ್ಯಮಿಗಳು ಹಾಗೂ ಬಾಧಿತ ಇತರ ಪಾಲುದಾರರು ಭಾಗವಹಿಸಲು ಅವಕಾಶ ನೀಡಿದಲ್ಲಿ, ಮುಕ್ತ ಮನಸ್ಸಿನ ಚರ್ಚೆ ನಡೆಸಿ, ಬಾಧಿತ ವರ್ಗದ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅವಕಾಶವಾಗುತ್ತದೆ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ ಮತ್ತು ನಿಲುವು.

ಈ ಯೋಜನೆಯ ರಚನೆ ಮತ್ತು ಅನುಷ್ಠಾನದಲ್ಲಿ ನನಗೆ ಯಾವುದೇ ವೈಯಕ್ತಿಕ ಹಿತಾಸಕ್ತಿ ಇಲ್ಲ ಎನ್ನುವುದನ್ನು ಈ ಪತ್ರದ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ. ಮುಂದುವರೆದು, ವಿಧಾನಸೌಧದಲ್ಲಿ ನಡೆಸಲು ಉದ್ದೇಶಿಸಿರುವ ಸಭೆಯಲ್ಲಿ ಬಾಧಿತ ರೈತ ವರ್ಗ, ಗ್ರಾಮಸ್ಥರು ಮತ್ತು ಪಾಲುದಾರರನ್ನು ಆಹ್ವಾನಿಸದೆ ಅವರನ್ನು ಹೊರಗೆ ಇಟ್ಟು ಸಭೆ ನಡೆಸುವುದರಿಂದ ಸಭೆ ಫಲಪ್ರದವಾಗುವುದಿಲ್ಲ. ತಾವು ನಿಗದಿಪಡಿಸಿದ ದಿನಾಂಕ: 26–06–2026ರಂದು ನನಗೆ ಪೂರ್ವ ನಿಯೋಜಿತ ಕಾರ್ಯಕ್ರಮಗಳು ಇರುವುದರಿಂದ, ಈ ಉದ್ದೇಶಿತ ಸಭೆಯನ್ನು ದಿನಾಂಕ: 27–06–2026 ರಂದು ಮೇಲೆ ತಿಳಿಸಿದಂತೆ ಬಿಡದಿ ಅಥವಾ ಬೈರಮಂಗಲದ ಸೂಕ್ತ ಸ್ಥಳದಲ್ಲಿ ಆಯೋಜಿಸಿ, ಮೇಲೆ ಕಾಣಿಸಿದ ಬಾಧಿತ ವರ್ಗದ ಜನರನ್ನು ಆಹ್ವಾನಿಸುವಂತೆ ಈ ಮೂಲಕ ಕೋರುತ್ತೇನೆ.

ಒಂದು ಒಳಚರಂಡಿ ಪೈಪ್‌ಲೈನ್ ಪುರಾಣ...!

ಮೈಸೂರು ಪಾಲಿಕೆಯ ಅಧಿಕಾರಿ ವರ್ಗದ ಹೀನ ಕೃತ್ಯದಿಂದ ನಿವಾಸಿಗಳ ಮೂಕಯಾತನೆ...!?

ಮೈಸೂರು, ಜೂ. 22– ಮೈಸೂರು ನಗರ ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ಇದೊಂದು ತಾಜಾ ಉದಾರಣೆ. ಜನರ ತೆರಿಗೆ ಹಣ ಹೇಗೆ ಪೋಲಾಗುತ್ತಿದೆ ಎಂಬುದಕ್ಕೂ ನಿದರ್ಶನ.

ವಿಜಯನಗರ ಎರಡನೇ ಹಂತದಿಂದ ಹೆಬ್ಬಾಳು–ಮಂಚೇಗೌಡನಕೊಪ್ಪಲು ಭಾಗದಲ್ಲಿ ಎರಡು ವರ್ಷದ ಹಿಂದೆ 50 ಲಕ್ಷ ರೂ. ವೆಚ್ಚದಲ್ಲಿ ಒಳಚರಂಡಿ ಪೈಪ್ ಅಳವಡಿಸಲಾಗಿತ್ತು. ಆದರೆ, ಆ ವೇಳೆ ಅಧಿಕಾರಿಗಳ ಸರಿಯಾದ ಉಸ್ತುವಾರಿ, ನಿರ್ವಹಣೆಯಿಲ್ಲದೆ ಅದು ಕೆಲವೇ ದಿನಗಳಲ್ಲಿ ವಿಫಲವಾಯಿತು. ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದವು. ಮನೆಗಳ ಶೌಚಾಲಯಗಳಲ್ಲೂ ಈ ನೀರು ತುಂಬಿ ನಿವಾಸಿಗಳು ಹೊಸ ಸಂಕಷ್ಟಕ್ಕೀಡಾದರು.

ಆಗ ಎಚ್ಚೆತ್ತ ಪಾಲಿಕೆ ಒಳಚರಂಡಿ ಮಂಡಳಿ ಅಧಿಕಾರಿಗಳು ಜೆಟ್ಟಿಂಗ್ ಮೆಷಿನ್ ತಂದು ಆಗಾಗ ತುಂಬಿ ಹರಿಯುತ್ತಿದ್ದ ಮ್ಯಾನ್‌ಹೋಲ್‌ಗಳ ಕೊಳಚೆ ನೀರು ತೆರವು ಮಾಡಿ ಹೋಗುತ್ತಿದ್ದರು. ಬಳಿಕ ಅದನ್ನು ಕೈಬಿಟ್ಟಾಗ ಅಲ್ಲಿಂದ ಈ ಮಾರ್ಗದ ಜನ ಪರದಾಡಬೇಕಾಗಿ ಬಂತು.

ಚಾಣಾಕ್ಷನ ಮಹಾ ಕಾರ್ಯ: ಈ ವೇಳೆ ಅತ್ಯಂತ ಚಾಣಾಕ್ಷರಾದ ಒಳಚರಂಡಿ ಮಂಡಳಿ ಅಧಿಕಾರಿಯೊಬ್ಬರು ಮ್ಯಾನ್‌ಹೋಲ್‌ಗಳಲ್ಲಿ ಉಕ್ಕಿ ಹರಿಯುತ್ತಿದ್ದ ಒಳಚರಂಡಿ ನೀರನ್ನು ಒಂದೆಡೆ ಮಳೆ ನೀರು ಚರಂಡಿಗೆ ಹರಿಸಿ ಕೈತೊಳೆದುಕೊಂಡರು.

ಇದಾಗಿ ಸುಮಾರು ಒಂದೂವರೆ ವರ್ಷವಾಗುತ್ತಾ ಬಂದಿದೆ. ಅಲ್ಲಿಂದಲೂ ಒಳಚರಂಡಿಯ ಮಲಮಿಶ್ರಿತ ನೀರು ಮಳೆ ನೀರು ಚರಂಡಿಯಲ್ಲಿ ಹರಿಯುತ್ತಿದೆ. ಬೇಸಿಗೆಯಲ್ಲಿ ಸಹಿಸಲಾರದಷ್ಟು ದುರ್ವಾಸನೆ. ಈಗ ಅದರೊಂದಿಗೆ ಮಳೆ ನೀರು ಸೇರಿ ಚರಂಡಿ ಅಜುಬಾಜಿನ ಮನೆಯವರು ಭೂಮಿ ಮೇಲೆ ನರಕ ಅನುಭವಿಸುವಂತಾಗಿದೆ. ಇದರ ಬಗ್ಗೆ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಅನೇಕ ವೇಳೆ ಅಜು–ಬಾಜಿನ ನಿವಾಸಿಗಳು ಮನವಿ ಮಾಡಿದರೂ, ಬೇಡಿದರೂ ಯಾವಾಗಾದರೊಮ್ಮೆ ಪಾಲಿಕೆ ಇಂಜಿನಿಯರ್ ಎಂದು ಹೇಳಿಕೊಂಡು ಬಂದು, ಇನ್ನೇನು ನಿಲ್ಲಿಸುತ್ತೇವೆ... ಹೊಸದಾಗಿ ಒಳಚರಂಡಿ ಪೈಪ್ ಅಳವಡಿಸುತ್ತೇವೆ ಎಂದು ಹೇಳುತ್ತಲೇ ಬರುತ್ತಿದ್ದಾರೆ.

ಈ ಮಧ್ಯೆ ಈಗ ಭಾಗ್ಯವೆಂಬಂತೆ 50 ಲಕ್ಷ ವೆಚ್ಚದಲ್ಲಿ ಮತ್ತೆ ಒಳ ಚರಂಡಿ ಪೈಪ್‌ಲೈನ್ ಕಾಮಗಾರಿ ಮಂಜೂರಾಗಿದೆ ಎಂದು ಹೇಳಿದರು. ಹೀಗೆ ಹೇಳಿದ ತಿಂಗಳ ಬಳಿಕ ಈ ಮಾರ್ಗದಲ್ಲಿ ಪೈಪ್‌ಗಳ ತಂದು ಸಾಲಾಗಿ ಸುರಿದಿದ್ದ ಕಂಡು, ಸದ್ಯ ಇನ್ನೇನು ದುರ್ವಾಸನೆ ದೂರವಾಗುತ್ತಿದೆ ಎಂಬ ಆಶಾಭಾವನೆಯಲ್ಲಿದ್ದ ನಿವಾಸಿಗಳಿಗೆ ಮತ್ತೊಂದು 'ಗ್ರೇಟ್ ತಮಾಷೆ' ಕಾದಿತ್ತು. ಇದರ ಸರ್ವೇಗೆಂದು ತಿಂಗಳಾನುಗಟ್ಟಲೆ ತೆಗೆದುಕೊಂಡಿದ್ದಾಯಿತು. ಅದರ ನಡುವೆ ಈ ಮಾರ್ಗದ ಸುತ್ತಮುತ್ತ ಮಳೆ ಚರಂಡಿ ನಿರ್ಮಾಣ ಕಾಮಗಾರಿ ಆರಂಭವಾಯ್ತು. ಅಂತೂ ಒಳಚರಂಡಿ ಮಾರ್ಗದ ಪೈಪ್‌ಲೈನ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಾಗಿ ಹೇಳಿ, ಅದನ್ನು ಆರಂಭದಿಂದ ಆರಂಭಿಸದೆ, ಈ ಸಮಸ್ಯೆಗೆ ಸಂಬಂಧವಿಲ್ಲದ ಡಾ. ಅಂಬರೀಷ್ ರಸ್ತೆಯನ್ನು ತುಂಡರಿಸಿ, ಅಲ್ಲಿ ಲೈನ್ ಲಿಂಕ್ ಕೊಡುವುದಾಗಿ ಸರ್ಕಸ್ ಆರಂಭ ಆಯಿತು.



ಅಂಬರೀಶ್ ರಸ್ತೆಯನ್ನು ಅನಗತ್ಯವಾಗಿ ತುಂಡರಿಸಿ ಈಗ ಮುಚ್ಚಿರುವುದು.

ಸದಾ ಜನ ಮತ್ತು ವಾಹನ ದಟ್ಟಣೆಯಿಂದ ಕೂಡಿದ ಅಂಬರೀಶ್ ರಸ್ತೆ ತುಂಡರಿಸಿ, ತುಂಬಾ ಆಳದಲ್ಲಿ ಪೈಪ್ ಅಳವಡಿಸುವ ಕಾಮಗಾರಿ ಆರಂಭಿಸಲಾಯಿತು. ಕೊನೆಗೆ ತೇಪೆ ಹಾಕಿ ವಾಹನ ಸಂಚಾರಕ್ಕೆ ರಸ್ತೆಯನ್ನು ಮುಕ್ತಗೊಳಿಸಲಾಯಿತು. ಆದರೆ ಒಂದೆಡೆ ಉದ್ದೇಶಿತ ಒಳಚರಂಡಿ ಪೈಪ್ ಲಿಂಕ್ ಕಲ್ಪಿಸಲು, ತೆಗೆದಿದ್ದ ಭಾರಿ ಅಳದ ಗುಂಡಿಯನ್ನು ಮುಚ್ಚದೇ 20 ದಿನದಿಂದ ಹಾಗೆ ಬಿಡಲಾಗಿತ್ತು. ಅದಕ್ಕೆ ಯಾವುದೇ ತಡೆಗೋಡೆ, ಎಚ್ಚರಿಕೆ ವ್ಯವಸ್ಥೆಯೂ ಇಲ್ಲ.


ಅಚ್ಚರಿ ಎಂದರೆ, ಎರಡು ದಿನದ ಹಿಂದೆ ಲಿಂಕ್ ಕೊಡಲೆಂದು ತೆರೆದಿಟ್ಟಿದ್ದ ಆ ಗುಂಡಿಯನ್ನು ಸಹ ಮುಚ್ಚಲಾಗಿದೆ. ಕಾರಣ ಪೈಪ್‌ಲೈನ್ ಹಾದು ಹೋಗಿದೆಯಂತೆ. ಇದರ ಅರಿವು ಬೇಕಿತ್ತಲ್ಲವೇ? ಇಲ್ಲಿಗೆ ಮೈಸೂರು ನಗರ ಪಾಲಿಕೆ ಅಧಿಕಾರಿಗಳ ಒಂದು ಹಂತದ ಘನ ಕಾರ್ಯ ಪೂರ್ಣಗೊಂಡಿದೆ.

ಆದರೆ, ಒಳಚರಂಡಿಯಲ್ಲಿ ಮಲಮಿಶ್ರಿತ ಒಳಚರಂಡಿ ನೀರು ಸರಾಗವಾಗಿ ಈಗಲೂ ಹರಿಯುತ್ತಿದೆ. ಈಗ ಅದರೊಂದಿಗೆ ಮಳೆ ನೀರು ಸೇರಿ ಮೊದಲಿದ್ದ ಸೊಳ್ಳೆ ಹಾವಳಿ ದುಪ್ಪಟ್ಟಾಗಿದೆ. ಇದೆಲ್ಲಾ ನಮ್ಮ ಮಹಾನಗರ ಪಾಲಿಕೆಯ ಮಹತ್ಕಾರ್ಯ ಎಂದು ದಿನನಿತ್ಯವೂ ಜನ ಹಿಡಿಶಾಪ ಹಾಕುತ್ತಾ ಬದುಕು ಸಾಗಿಸುತ್ತಿದ್ದಾರೆ.

ಈ ಬಗ್ಗೆ ಪಾಲಿಕೆಯ ಕೆಳ ಅಧಿಕಾರಿಯಿಂದ ಹಿಡಿದು ಆಯುಕ್ತರು, ಜಿಲ್ಲಾಧಿಕಾರಿಗಳವರೆಗೂ ದೂರಿತ್ತರು ಯಾವ ಪ್ರಯೋಜನವೂ ಆಗಿಲ್ಲ. ಅಧಿಕಾರಿಗಳ 'ಪಥ ಸಂಚಲನ' ಮಾತ್ರ ನಡೆದಿದೆ. ಶಾಸಕರು ಬ್ಯುಸಿ ಇದ್ದಾರೆ ಬಿಡಿ!

"ಮೈಸೂರಲ್ಲೂ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಭೈರೇಗೌಡರಂತಹ ಸಮರ್ಥ, ದಕ್ಷ ಸಚಿವರು ಇದ್ದಿದ್ದರೆ ಇಂತಹ ಬೇಜವಾಬ್ದಾರಿ ಕರ್ತವ್ಯಕ್ಕೆ ಒಂದಿಬ್ಬರು ಇಂಜಿನಿಯರ್ ಅಮಾನತ್ತಾಗುತ್ತಿದ್ದರು. ಆದರೆ, ಆ ಭಾಗ್ಯ ಮೈಸೂರಿಗರಿಗೆ ಇಲ್ಲ. ಈಗ ಒಂದೆಡೆ ಒಳಚರಂಡಿ ಸೇರುತ್ತಿರುವ ಮಲಮಿಶ್ರಿತ ನೀರು ನೇರವಾಗಿ ಹೆಬ್ಬಾಳು ಕೆರೆ ಒಡಲು ಸೇರುತ್ತಿದೆ. ನೂರಾರು ಕೋಟಿ ವೆಚ್ಚದಲ್ಲಿ ಕೆರೆ ಅಭಿವೃದ್ಧಿ ಪಡಿಸಿದ ಇನ್ಫೋಸಿಸ್‌ನ ಡಾ. ಸುಧಾಮೂರ್ತಿಯವರ ಮಹತ್ಕಾರ್ಯ ನಿರರ್ಥಕವಾಗಿದೆ. ಅಲ್ಲಿ ಪ್ರತಿನಿತ್ಯ ಬೆಳಗ್ಗೆ–ಸಂಜೆ ಸಾವಿರಾರು ಮಂದಿ ವಿಹರಿಸುತ್ತಾರೆ. ಅವರೂ ಮೂಗು ಮುಚ್ಚಿಕೊಂಡು, ಇದಕ್ಕೆ ಕಾರಣರಾದವರಿಗೆ ನಿತ್ಯವೂ ಹಿಡಿಶಾಪ ಹಾಕುತ್ತಿದ್ದಾರೆ.

ಚರಂಡಿ ಕಸವನ್ನು ಮತ್ತೆ ಚರಂಡಿಗೆ ಚೆಲ್ಲಿ!



ಸ್ವಚ್ಛತೆ ಕಾಪಾಡಿಕೊಳ್ಳೋಣ... ಎಂದು ನಾಗರಿಕರಿಗೆ ಪಾಠ ಮಾಡುವ ಪಾಲಿಕೆ ತನ್ನ ಸಿಬ್ಬಂದಿಗೆ ಮೊದಲು ಸ್ವಚ್ಛತೆಯ ಪಾಠ ಮಾಡಲಿ! ಆಮೇಲೆ ಜನರಿಗೆ ನೀತಿ ಹೇಳಲಿ ಎಂಬುದಕ್ಕೆ ಇದೊಂದು ಉದಾಹರಣೆ. ಮಂಚೇಗೌಡನ ಕೊಪ್ಪಲು 3ನೇ ಕ್ರಾಸ್‌ನಲ್ಲಿ ಚರಂಡಿ ಸ್ವಚ್ಛ ಮಾಡಿದ ಪಾಲಿಕೆಯ ಸ್ವಚ್ಛತಾ ಸಿಬ್ಬಂದಿ ಅಲ್ಲಿಂದ ಹೊರ ತೆಗೆದ ಮಣ್ಣು ಸೇರಿದಂತೆ ತ್ಯಾಜ್ಯವನ್ನು ಹೀಗೆ ರಸ್ತೆಬದಿ ಹಾಕಿ ವಾರವೇ ಕಳೆಯಿತು. ಅದನ್ನು ತೆರವುಗೊಳಿಸಲೇ ಇಲ್ಲ. ವಾಹನಗಳು ಹಾದು ಹೋಗಿ ಅದು ಅಸ್ತವ್ಯಸ್ತಗೊಂಡಿತು, ವಾಸನೆ ಬೇರೆ. ಅದೀಗ ಮಳೆ ಬಂದು, ಮಳೆ ನೀರಲ್ಲಿ ಮತ್ತೆ ಚರಂಡಿ ಸೇರುತ್ತಿದೆ. ಇದೊಂದು ರೀತಿ 'ಚರಂಡಿಯ ಕಸವನ್ನು ಮತ್ತೆ ಚರಂಡಿಗೆ ಚೆಲ್ಲಿ'ದಂತೇ ಆಗುತ್ತಿದೆ. ಸ್ವಚ್ಛತಾ ಸಿಬ್ಬಂದಿಗೆ ಒಬ್ಬರು ಮೇಲ್ವಿಚಾರಕ ಇರುತ್ತಾನೆ. ಆತ ಮಾರ್ಗದರ್ಶನ ಮಾಡುತ್ತಿದ್ದರೆ ಇಂತಹ ಅಚಾತುರ್ಯಗಳು ಆಗಲಾರವು. ಪಾಲಿಕೆ ಸಿಬ್ಬಂದಿಯ ಇಂತಹ ಕಾರ್ಯದಿಂದಲೇ ಇರಬೇಕು ಜನ ಸ್ವಚ್ಛತೆ ವಿಷಯದಲ್ಲಿ ಯಾವುದನ್ನೂ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ ಎನ್ನಿಸುತ್ತಿದೆ!

ನಕ್ಕರೆ ಅದೇ ಸ್ವರ್ಗ

ಒಂದು ಭಾನುವಾರ ರೋಗಿಯೊಬ್ಬ ಡಾಕ್ಟರ್ ಹತ್ತಿರ ಹೋದ

ರೋಗಿ : ಡಾಕ್ಟ್ರೇ... ನನ್ನ ಹೆಂಡ್ತಿ ಮನೆಯಲ್ಲಿದ್ರೆ ತುಂಬಾ ಕಿರಿಕಿರಿ ಮಾಡ್ತಾಳೆ. ನೆಮ್ಮದಿಯೇ ಇಲ್ಲ. ಏನಾದ್ರು ಮಾತ್ರೆ ಇದ್ರೆ ಕೊಡಿ ಶಾಂತ ಆಗೋಕೆ.

ಡಾಕ್ಟರ್ : ಅಂತಹ ಮಾತ್ರೆ ಇದ್ದಿದ್ರೆ ನಾನ್ಯಾಕೆ ಭಾನುವಾರನೂ ಆಸ್ಪತ್ರೆ ತಕ್ಕೊಂಡು ಕುಂತಿರ್ತಿದ್ದೆ?

ಮೈಸೂರು ಮಿತ್ರ

ಮಂಗಳವಾರ, ಜೂನ್ 23, 2026

ಸತ್ಯೇನೋತ್ಪಥಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕಾಡುವ ಬಡತನ ನಾಳೆ ಹೋಗಬಹುದು. ಇಲ್ಲದ ಸಿರಿತನ ಮುಂದೆ ಬರಬಹುದು. ಆದರೆ, ಒಮ್ಮೆ ಕಳೆದುಕೊಂಡ ನಂಬಿಕೆ, ವಿಶ್ವಾಸ, ಪ್ರೀತಿ ಮತ್ತೆ ಬರುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಸಾಲ್ಗಾರ ಸುಮ್ಮನಿದ್ರು, ಸಾಕ್ಷಿಗಾರ ಸುಮ್ಮನಿರ.

ನಿಮ್ಮ ಪತ್ರಗಳು

ಜಯದೇವ ಆಸ್ಪತ್ರೆಯ ಮೇಲಿನ ಒತ್ತಡ ಕಡಿಮೆ ಮಾಡಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಒಂದೇ ದಿನ 11 ರೋಗಿಗಳು ಮೃತಪಟ್ಟಿರುವ ಘಟನೆ ಅತ್ಯಂತ ವಿಷಾದನೀಯ ಹಾಗೂ ಆತಂಕಕಾರಿ. ಈ ಘಟನೆ ಸಾರ್ವಜನಿಕರಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದ್ದು, ಸಾವುಗಳಿಗೆ ವೈದ್ಯರ ನಿರ್ಲಕ್ಷ್ಯ ಕಾರಣವೇ ಅಥವಾ ಆಸ್ಪತ್ರೆಯ ಮೇಲಿನ ಅತಿಯಾದ ಒತ್ತಡವೇ ಎಂಬುದರ ಬಗ್ಗೆ ತನಿಖೆ ನಡೆಯಬೇಕಾಗಿದೆ.

ಮೈಸೂರು ಸೇರಿದಂತೆ ಸುತ್ತಮುತ್ತಲಿನ ಏಳು ಜಿಲ್ಲೆಗಳ ಹೃದ್ರೋಗಿಗಳು ಜಯದೇವ ಆಸ್ಪತ್ರೆಯನ್ನೇ ಪ್ರಮುಖವಾಗಿ ಅವಲಂಬಿಸಿದ್ದಾರೆ. ಪ್ರತಿದಿನ ಸಾವಿರಾರು ಹೊರ ರೋಗಿಗಳು ಹಾಗೂ ನೂರಾರು ಒಳರೋಗಿಗಳು ಇಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಒಂದೇ ದಿನದಲ್ಲಿ ಹೆಚ್ಚಿನ ಸಂಖ್ಯೆಯ ಸಾವುಗಳು ಸಂಭವಿಸಿರುವುದು ಆರೋಗ್ಯ ವ್ಯವಸ್ಥೆಯ ಸಾಮರ್ಥ್ಯ ಮತ್ತು ಆಸ್ಪತ್ರೆಯ ಮೇಲಿನ ಒತ್ತಡದ ಕುರಿತು ಗಂಭೀರ ಚರ್ಚೆಗೆ ಕಾರಣವಾಗಿದೆ.

ಸುಮಾರು 400 ಹಾಸಿಗೆಗಳ ಸಾಮರ್ಥ್ಯ ಹೊಂದಿರುವ ಈ ಆಸ್ಪತ್ರೆಯು ಲಕ್ಷಾಂತರ ಜನರ ಆರೋಗ್ಯದ ಹೊಣೆ ಹೊತ್ತಿದೆ. ಹೃದಯ ಸಂಬಂಧಿತ ಕಾಯಿಲೆಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಲಭ್ಯವಿರುವ ಹಾಸಿಗೆಗಳು, ತಜ್ಞ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿಯ ಸಂಖ್ಯೆ ಸಾಕಷ್ಟಿದೆಯೇ ಎಂಬ ಪ್ರಶ್ನೆ ಸಹಜವಾಗಿದೆ. ಆಸ್ಪತ್ರೆಯ ನಿರ್ದೇಶಕರು ಮಾಧ್ಯಮಗಳಿಗೆ ನೀಡಿರುವ ಮಾಹಿತಿಯ ಪ್ರಕಾರ ಘಟನೆ ನಡೆದ ರಾತ್ರಿ ಮೂವರು ವೈದ್ಯರು ಕರ್ತವ್ಯದಲ್ಲಿದ್ದರು. ಆದರೆ ಇಂತಹ ಬೃಹತ್ ಆಸ್ಪತ್ರೆಯಲ್ಲಿ ನೂರಾರು ರೋಗಿಗಳ ಆರೈಕೆಗೆ ಇಷ್ಟು ತಜ್ಞ ವೈದ್ಯರು ಸಾಕಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರ ಹುಡುಕಬೇಕಾಗಿದೆ.


ಸರ್ಕಾರವು ಜಯದೇವ ಆಸ್ಪತ್ರೆಯ ಮೇಲಿನ ಒತ್ತಡ ಕಡಿಮೆ ಮಾಡಲು ತಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕು. ಬಿಪಿಎಲ್ ಕಾರ್ಡ್ ಹೊಂದಿರುವ ರೋಗಿಗಳಿಗೆ ಆಯುಷ್ಮಾನ್ ಭಾರತ್, ಯಶಸ್ವಿನಿ ಸೇರಿದಂತೆ ವಿವಿಧ ಸರ್ಕಾರಿ ಯೋಜನೆಗಳ ಅಡಿಯಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಹೃದಯ ಚಿಕಿತ್ಸೆಯ ಸೌಲಭ್ಯ ಲಭ್ಯವಿದ್ದು, ಆಂಜಿಯೋಗ್ರಾಮ್ ಆಂಜಿಯೋಪ್ಲಾಸ್ಟಿ ಚಿಕಿತ್ಸೆಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಸೇವೆ ಸಿಗಲಿದ್ದು, ಇಂತಹ ರೋಗಿಗಳನ್ನು ಖಾಸಗಿ ಆಸ್ಪತ್ರೆಗಳಿಗೆ ವರ್ಗಾಯಿಸಿದಲ್ಲಿ ಜಯದೇವ ಆಸ್ಪತ್ರೆಯ ಮೇಲಿನ ಒತ್ತಡ ಕಡಿಮೆಯಾಗಬಹುದು. ಇದರಿಂದ ಗಂಭೀರ ಸ್ಥಿತಿಯಲ್ಲಿರುವ ರೋಗಿಗಳಿಗೆ ಹೆಚ್ಚಿನ ಸಮಯ, ಗಮನ ಮತ್ತು ಉನ್ನತ ಮಟ್ಟದ ಚಿಕಿತ್ಸೆ ದೊರೆಯಲು ಸಾಧ್ಯವಾಗುತ್ತದೆ.

ಜೊತೆಗೆ ಸರ್ಕಾರವು ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಉಚಿತ ಚಿಕಿತ್ಸಾ ಯೋಜನೆಗಳ ಕುರಿತು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಜಾಗೃತಿ ಮೂಡಿಸಬೇಕು. ಮೈಸೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಹೆಚ್ಚಿನ ಹೃದ್ರೋಗ ಚಿಕಿತ್ಸಾ ಕೇಂದ್ರಗಳು ಮತ್ತು ವಿಶೇಷ ಆಸ್ಪತ್ರೆಗಳನ್ನು ಸ್ಥಾಪಿಸುವ ಮೂಲಕ ರೋಗಿಗಳಿಗೆ ಸಮೀಪದಲ್ಲಿಯೇ ಗುಣಮಟ್ಟದ ಚಿಕಿತ್ಸೆ ದೊರೆಯುವಂತೆ ಮಾಡಬೇಕು.

ಈ ಘಟನೆ ಕೇವಲ ಒಂದು ಆಸ್ಪತ್ರೆಯ ಸಮಸ್ಯೆಯಲ್ಲ; ಇದು ರಾಜ್ಯದ ಆರೋಗ್ಯ ವ್ಯವಸ್ಥೆಗೆ ಎಚ್ಚರಿಕೆ ಗಂಟೆಯಾಗಿದೆ. ದಿನದಿಂದ ದಿನಕ್ಕೆ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇವರ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳ ಕೊರತೆ ಇದ್ದು ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಆರೋಗ್ಯ ಸೇವೆಯನ್ನು ಬಲಪಡಿಸಿ ಉತ್ತಮ ಸೇವೆಯೊಂದಿಗೆ ಬಡರೋಗಿಗಳಿಗೆ ಉಚಿತ ಸೇವೆ ಸಿಗುವಂತಾಗಲಿ.

–ವಿನೋದ್ ಶಂಕರ್, ಅವಿನಾಶ್ ಫೌಂಡೇಶನ್, ಕುವೆಂಪುನಗರ, ಮೈಸೂರು.

ಹೂಟಗಳ್ಳಿ ಮಳೆ ನೀರು ಮೋರಿಗೆ ಗಲೀಜು ನೀರು ಸೇರ್ಪಡೆ



ಮಾನ್ಯರೆ,

ಈ ಹಿಂದೆ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟಿಸಿದ್ದ ಪತ್ರದ ನಂತರ ಒಮ್ಮೆ ಮೋರಿ ಸ್ವಚ್ಛ ಮಾಡಲಾಗಿತ್ತು. ಮಳೆ ಬಂದ ನಂತರ ಸ್ವಲ್ಪ ಸ್ವಚ್ಛ ಆಗಿದೆ. ಈಗಲೇ ಮಣ್ಣು ಮತ್ತು ಗಿಡಗಳನ್ನು ತೆಗೆಸಿ ಹಾಕಿದರೆ, ನೀರು ಸರಾಗವಾಗಿ ಸಾಗಿ ಹೋಗುವ ಹಾಗೂ ಸೊಳ್ಳೆಗಳ ಹಾವಳಿ ಸ್ವಲ್ಪ ಕಡಿಮೆ ಆಗಬಹುದು. ಅದ್ದರಿಂದ ಹೂಟಗಳ್ಳಿ ನಗರಸಭೆ ಅಧಿಕಾರಿಗಳಲ್ಲಿ ಮನವಿ ಏನೆಂದರೆ ಮೋರಿ ಸ್ವಚ್ಛಗೊಳಿಸಿ ಸಮಸ್ಯೆ ಪರಿಹರಿಸಿ ಎಂದು ಕೋರಿಕೆ.

–ಜಯಶ್ರೀ.ಅಶೋಕ್.ಜೋಶಿ, ಕೃಷ್ಣ ಬೇಕರಿ ಹತ್ತಿರ, ಹೂಟಗಳ್ಳಿ, ಮೈಸೂರು.

ಈಗಿರುವ ಸಚಿವಾಲಯಗಳು ಮಲಗಿಕೊಂಡಿವೆಯೇ?

ಮಾನ್ಯರೆ,

ನೂತನ ಮುಖ್ಯಮಂತ್ರಿಗಳು ಜನರ ಸಮಸ್ಯೆಗೆ ತ್ವರಿತವಾಗಿ ಸ್ಪಂದಿಸಲು 'ಪ್ರಜಾ ಸೇವೆ' ಅರ್ಥಾತ್ 'ಪ್ರಜಾ ಸೇವ್' ಎಂಬ ಪ್ರತ್ಯೇಕ ಸಚಿವಾಲಯ ಸ್ಥಾಪನೆಗೆ ಮುಂದಾಗಿದ್ದಾರೆ. ಹಾಗಾದರೆ ಈಗಿರುವ 33-34 ಸಚಿವಾಲಯಗಳು ಸೂಕ್ತವಾಗಿ ಕಾರ್ಯ ನಿರ್ವಹಿಸಲು ಅಸಮರ್ಥವಾಗಿವೆ ಎಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡಂತೆ ಆಯಿತು. ಯಾಕೆ ಈಗಿರುವ ಸಚಿವಾಲಯಗಳು ಮಲಗಿಕೊಂಡಿವೆಯೇ?

ಇನ್ನೊಂದು ಸಚಿವಾಲಯ ಅಂದರೆ ಅವರಿಗೊಂದು ಹೊಸ ಇನ್ನೋವಾ ಕಾರು, (ಹೆಚ್ಚು ಅಲ್ಲ) ಅವರಿಗೆ ಸಂಬಳ, ಒಂದು ಕಿ.ಮೀ.ಗೆ 20ರೂ. ಸಾರಿಗೆ ಭತ್ಯೆ, ಒಂದು ಹತ್ತು ಜನ ಸಿಬ್ಬಂದಿ, ಇಬ್ಬರು ಪಿ.ಎ.ಗಳು, ಒಂದು ತಿಂಗಳಿಗೆ ಮೊಬೈಲ್ ಡೇಟಾ 300/- ಇದ್ದರೂ 3,000 ಸಾವಿರ ಟೆಲಿಫೋನ್ ಭತ್ಯೆ. ಅವರಿಗಾಗಿ 224 ವಿಧಾನಸಭಾ ಕ್ಷೇತ್ರಗಳಲ್ಲಿ ಒಂದು ಕಚೇರಿ. ಅದಕ್ಕೆ ದುನಿಯಾದಲ್ಲಿ ಇಲ್ಲದಿರುವ ಬಾಡಿಗೆ (ಚೇಲಾಗಳ ಮುಂಡು, ಗುಂಡು, ತುಂಡು ಅನುಕೂಲಕ್ಕಾಗಿ) ಒಂದು ಕಲ್ಲು ಹೊಡೆದು ಹಲವಾರು ಹಕ್ಕಿ ಹೊಡೆಯುವ ಹುನ್ನಾರ. ಇದಕ್ಕೆಲ್ಲಾ ಒಂದೇ ಹೆಸರು ಏನೆಂದರೆ 'ಹಗಲು ದರೋಡೆ' ಅಂತ.

ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ದಿನ ಬೆಳಗಾದರೆ ಒಂದೊಂದೇ ಬೆಲೆ ಏರಿಸುವುದು ಸಾಮಾನ್ಯವಾಗಿದೆ. ಜನ ಸಾಮಾನ್ಯರು ಜೀವನ ಮಾಡುವುದು ದುಸ್ತರವಾಗಿ ಬಿಟ್ಟಿದೆ. ಸರ್ಕಾರದ ನಡವಳಿಕೆಗಳನ್ನು ಗಮನಿಸಿದಾಗ ಸರ್ಕಾರ ಎಂಬ ಹೆಸರನ್ನು ಬದಲಾಯಿಸಿ ಜನರ ಪ್ರಾಣ ಹಿಂಡುವ ಸಂಸ್ಥೆ ಎಂದು ಕರೆಯುವುದು ಸೂಕ್ತ ಎಂದು ಅನಿಸುತ್ತದೆ. ಇದೆಲ್ಲಾ ಸರ್ಕಸ್ ಓಲ್ಡ್ ವೈನ್ ಇನ್ ದಿ ನ್ಯೂ ಬಾಟಲ್ ಅಷ್ಟೆ. ಕುರಿ ಕಾಯೋ ತೋಳ ಅಂದರೆ ಸಂಬಳನೇ ಬೇಡ ಎನ್ನುವ ಗಾದೆ ಚೆನ್ನಾಗಿ ಅನ್ವಯವಾಗುತ್ತದೆ.

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ, ಮೈಸೂರು.

ಅಹಂಕಾರಿಗಳ ಆರ್ಭಟಕ್ಕೆ ಭೂಮಿ ನಲುಗುತ್ತಿದೆ!



> ಗೆಲುವಿಗಾಗಿ ಯುದ್ಧ ಮಾಡಿದರೆಂದರೆ, ಅವರು ಗೆದ್ದಿದ್ದು ಏನನ್ನು? ಲಕ್ಷಾಂತರ ಸೈನಿಕರು, ನಾಗರಿಕರ ಬಲಿಕೊಟ್ಟು ಪಡೆದ ಗೆಲುವು ಗೆಲುವೆ? ಯುದ್ಧದ ಗೆಲುವಿನಲ್ಲಿ ಮಾನವೀಯತೆ, ಮಾನವ ಕಲ್ಯಾಣ ಇಲ್ಲವಾದಲ್ಲಿ ಯುದ್ಧಗಳು ಏತಕ್ಕಾಗಿ ಬೇಕು?



ಮಿರ್ಲೆ ಚಂದ್ರಶೇಖರ
ಹವ್ಯಾಸ ಬರಹಗಾರರು
ಮೊ: 9916129654

ವೈಜ್ಞಾನಿಕವಾಗಿ ಬೆಳೆದು ನಿಂತಿರುವ ಮನುಕುಲದಲ್ಲಿ ಯುದ್ಧ ಎನ್ನುವುದು ಹುಡುಗಾಟಿಕೆಯ ಸ್ಪರ್ಧೆಯಾಗಿದೆ, ಮನುಷ್ಯನ ಹಠ, ಅಹಂಕಾರ ಮತ್ತು ರಾಜಕೀಯದ ಆಟಗಳ ತಳಹದಿಯಲ್ಲಿ ನಡೆಯುವ ವಿನಾಶದ ಹಾದಿ. ಅಮೆರಿಕ-ಇರಾನ್ ನಡುವಿನ ಯುದ್ಧದಲ್ಲಿ ಗೆದ್ದವರು ಯಾರು? ಎಂಬುದು ಅವರಿಬ್ಬರನ್ನು ಬಿಟ್ಟರೆ ವಿಶ್ವದಲ್ಲಿ ಯಾರೊಬ್ಬರು ಗೆದ್ದವರು ಇವರೇ ಎಂದು ಹೇಳಿಲ್ಲ. ತಮ್ಮದೇ ಆಗಿರುವ ಸಮರ್ಥನೆ ಕೊಟ್ಟು ಗೆದ್ದಿದ್ದು ತಾನೇ ಎಂದು ಹೇಳಿಕೊಳ್ಳುತ್ತಿವೆ, ಆದರೆ ಗೆದ್ದವರು ಯಾರೂ ಅಲ್ಲ, ಸೋತಿದ್ದು ಮಾತ್ರ ಮನುಷ್ಯತ್ವ ಮತ್ತು ಬಲಿಯಾಗಿದ್ದು ಮನುಷ್ಯರಿಗಿಂತ ಹೆಚ್ಚಾಗಿ ಜೀವಜಗತ್ತು ಮತ್ತು ಪ್ರಕೃತಿ.

ಇತ್ತೀಚಿನ ಸುದ್ದಿಗಳ ಪ್ರಕಾರ ಸ್ವಿಟ್ಜರ್ಲೆಂಡ್‌ನಲ್ಲಿ ನಡೆದ ಜೂನ್ 19ರ ಶಾಂತಿ ಒಪ್ಪಂದದ ಮೂಲಕ 108 ದಿನಗಳ ಯುದ್ಧಕ್ಕೆ ಅಂತ್ಯ ಕಾಣಿಸಿದ್ದಾರೆ ಎನ್ನಲಾಗುತ್ತಿದೆ. ಶಾಶ್ವತವಾಗಿ ನಿಂತಿಲ್ಲ ಎನ್ನುವುದಂತು ಸತ್ಯ. ಶಾಂತಿ ಒಪ್ಪಂದದ ವ್ಯಾಪ್ತಿಯಲ್ಲಿ ಇಸ್ರೇಲ್ ಬಂದಂತಿಲ್ಲ ಹಾಗೂ ಲೆಬನಾನ್ ಮೇಲೆ ದಾಳಿ ನಿಲ್ಲಿಸಲು ಒಪ್ಪುವ ಮನಸ್ಥಿತಿಯಲ್ಲಿ ಇಲ್ಲ. ಇಸ್ರೇಲ್, ಇರಾನ್ ಮತ್ತು ಅಮೆರಿಕ ದೇಶಗಳ ಕಿತ್ತಾಟಗಳು ಏನೇ ಇರಲಿ, ಅವುಗಳಿಂದ ಇಡೀ ವಿಶ್ವವೇ ನಲುಗಿದೆ. ಭಾರತವು ಇದರಿಂದ ಹೊರತಾಗಿಲ್ಲ.

ಸಂಘರ್ಷದಿಂದ ಜಾಗತಿಕ ಆರ್ಥಿಕತೆ ಮತ್ತು ಇಂಧನ ಮಾರುಕಟ್ಟೆಯ ಮೇಲೆ ಬಹುದೊಡ್ಡ ಹೊಡೆತ ಬಿತ್ತು. ಹಾರ್ಮುಜ್ ಜಲಸಂಧಿಯ ಮೂಲಕ ಬರುತ್ತಿದ್ದ ಇಂಧನಕ್ಕೆ ತಡೆಯಾಗಿ ಭಾರತವು ಕೊರತೆಯನ್ನು ಎದುರಿಸಬೇಕಾಯಿತು. ಶಾಂತಿ ಒಪ್ಪಂದದ ಕಾರಣ ಕುಸಿಯುತ್ತಿದ್ದ ಷೇರು ಮಾರುಕಟ್ಟೆ ಏರಿಕೆ ಕಂಡಿದೆ. ತೈಲಬೆಲೆಯಲ್ಲಿ ಇಳಿಕೆ ಕಾಣುತ್ತಿದೆ. ತಿಳಿಯಬೇಕಾದದ್ದೇನಂದರೆ ಇಲ್ಲಿವರೆಗೆ ಯುದ್ಧಗಳಿಂದ ಆಗಿರುವುದು ದುರಂತಗಳೇ ಹೊರತು ಯಾವೊಂದು ಉಪಯೋಗವು ಯಾರಿಗೂ ಆಗಿಲ್ಲ. ಯುದ್ಧದಲ್ಲಿ ಗೆದ್ದವನೆಂದವರಿಗೂ ಅನಾಹುತಗಳು ತಪ್ಪಿದ್ದಲ್ಲ. ಸೋತವನಿಗೆ ತಕ್ಷಣಕ್ಕೆ ಸಹಿಸಿಕೊಳ್ಳಲಾರದಷ್ಟು ಪೆಟ್ಟು, ಗೆದ್ದವನಿಗೂ ಬಾರಿ ನಷ್ಟವಾದರೂ ಗೆದ್ದೇ ಎಂಬ ಅಹಂಕಾರದ ಸಮಾದಾನ. ಇತಿಹಾಸದಲ್ಲಿ ನಡೆದ ಎಲ್ಲಾ ಯುದ್ಧಗಳಲ್ಲಿ ಸಂಪಾದಿಸಿದ್ದು ಇದನ್ನೇ.

ಮೊದಲನೆಯ ಮಹಾಯುದ್ಧ(1914-1918)

ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ(1565 ದಿನಗಳು) ನಡೆದ ಮೊದಲನೇ ಮಹಾಯುದ್ಧವು ಯುರೋಪಿನ ಹಳೆಯ ಸಾಮ್ರಾಜ್ಯಗಳನ್ನು ನಾಶ ಮಾಡಿ ಹೊಸ ಜಗತ್ತಿನ ಉದಯಕ್ಕೆ ಕಾರಣವಾಯಿತು. ಯುರೋಪ್ ಮತ್ತು ಮಧ್ಯಪ್ರಾಚ್ಯದಲ್ಲಿ ಪೋಲೆಂಡ್, ಫಿನ್‌ಲ್ಯಾಂಡ್, ಜೆಕೋಸ್ಲೊವಾಕಿಯಾ, ಯುಗೊಸ್ಲಾವಿಯಾ, ಇರಾಕ್ ಮತ್ತು ಸಿರಿಯಾದಂತಹ ಹಲವು ದೇಶಗಳು ಹುಟ್ಟಿಕೊಂಡವು. ಯುದ್ಧಕ್ಕೂ ಮೊದಲು ಸಾಲಗಾರ ದೇಶವಾಗಿದ್ದ ಅಮೆರಿಕವು ಯುರೋಪಿಯನ್ ದೇಶಗಳಿಗೆ ಯುದ್ಧ ಸಾಮಗ್ರಿಗಳನ್ನು ಮತ್ತು ಸಾಲ ನೀಡಿ ಆರ್ಥಿಕವಾಗಿ ಬೆಳೆದು ಜಗತ್ತಿಗೆ ದೊಡ್ಡಣ್ಣನಾಗಿ ಬೆಳೆಯಿತು. ರಷ್ಯಾದಲ್ಲಿ ಕ್ರಾಂತಿ ನಡೆದು ರಾಜಪ್ರಭುತ್ವ ಹೋಗಿ ಮೊದಲ ಕಮ್ಯೂನಿಸ್ಟ್ ಸರ್ಕಾರ ಸೋವಿಯತ್ ಒಕ್ಕೂಟ ಸ್ಥಾಪನೆ ಆಯಿತು.

ಈ ಯುದ್ಧದಲ್ಲಿ ಎರಡು ಕೋಟಿಗೂ ಹೆಚ್ಚು ಸೈನಿಕರು ಮತ್ತು ನಾಗರಿಕರು ಪ್ರಾಣ ಕಳೆದುಕೊಂಡರು ಹಾಗೂ ಅಷ್ಟೇ ಸಂಖ್ಯೆಯ ಜನರು ಗಾಯಗೊಂಡು ಅಂಗವಿಕಲರಾದರು. ಯುದ್ಧದ ಕೊನೆಯಲ್ಲಿ ಹರಡಿದ 'ಸ್ಪ್ಯಾನಿಷ್ ಫ್ಲೂ' ಎಂಬ ಸಾಂಕ್ರಾಮಿಕ ರೋಗಕ್ಕೆ ಜಗತ್ತಿನ ಎಲ್ಲಡೆ ಕೋಟ್ಯಂತರ ಜನರ ಸಾವಿಗೆ ಕಾರಣವಾಯಿತು. ರಷ್ಯಾ, ಜರ್ಮನ್, ಆಸ್ಟ್ರಿಯಾ-ಹಂಗೇರಿ ಮತ್ತು ತುರ್ಕಿ ಸಾಮ್ರಾಜ್ಯಗಳು ಪತನವಾದವು.

ಯುದ್ಧದಲ್ಲಿ ಭಾಗವಹಿಸಿದ ಎಲ್ಲಾ ದೇಶಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದವು, ಕೃಷಿಭೂಮಿ ನಾಶವಾಯಿತು. ಕೈಗಾರಿಕೆಗಳು ಮತ್ತು ಸಾರಿಗೆ ವ್ಯವಸ್ಥೆ ನಾಶವಾಯಿತು. ಯುದ್ಧದಲ್ಲಿ ಭೀಕರ ಬಾಂಬ್ ದಾಳಿಗಳನ್ನು ಎದುರಿಸಿ ಬದುಕುಳಿದ ಲಕ್ಷಾಂತರ ಸೈನಿಕರು ಮಾನಸಿಕ ಖಿನ್ನತೆಗೆ ಒಳಗಾದರು. ಮುಂದೆ ಯುದ್ಧಗಳು ನಡೆಯದಂತೆ 'ಲೀಗ್ ಆಫ್ ನೇಷನ್ಸ್' ಸ್ಥಾಪನೆ ಆಯಿತಾದರೂ ಶಕ್ತಿಶಾಲಿ ರಾಷ್ಟ್ರಗಳ ಹಠಮಾರಿತನ ಮತ್ತು ದುರಾಹಂಕಾರದಿಂದ ಎರಡನೆ ಮಹಾಯುದ್ಧವನ್ನು ತಡೆಯುವಲ್ಲಿ ವಿಫಲವಾಯಿತು.

ಎರಡನೆಯ ಮಹಾಯುದ್ಧ(1939-1945)

ಎರಡನೇ ಮಹಾಯುದ್ಧವು ಆರು ವರ್ಷಗಳಿಗೂ ಹೆಚ್ಚು ಕಾಲ(2194 ದಿನಗಳು) ನಡೆಯಿತು. ಅಲ್ಲಿಯವರೆಗೆ ನಡೆದಿದ್ದ ಯುದ್ಧಗಳ ಇತಿಹಾಸದಲ್ಲೇ ಭಾರೀ ಸಂಖ್ಯೆಯಲ್ಲಿ(7ರಿಂದ 8 ಕೋಟಿ ಜನರು ಸಾವನ್ನಪ್ಪಿದರು) ಸಾವುನೋವುಗಳಾದವು ಮತ್ತು ಪ್ರಕೃತಿಯ ವಿನಾಶಕ್ಕೆ ಕಾರಣವಾಯಿತು.

ಜಪಾನ್‌ನ ಹಿರೋಷಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಅಮೆರಿಕ ಹಾಕಿದ ಅಣುಬಾಂಬ್‌ಗಳು ಜಗತ್ತನ್ನು ಪರಮಾಣು ಯುಗಕ್ಕೆ ತಳ್ಳಿತು. ಯುದ್ಧ ನಿಲ್ಲಿಸುವಲ್ಲಿ ವಿಫಲವಾದ ಲೀಗ್ ಆಫ್ ನೇಷನ್ಸ್ ಬದಲಾಗಿ 1945ರಲ್ಲಿ ಜಾಗತಿಕ ಭದ್ರತೆ ಮತ್ತು ವಿಶ್ವಶಾಂತಿಗಾಗಿ "ವಿಶ್ವ ಸಂಸ್ಥೆ" ಯನ್ನು ಸ್ಥಾಪಿಸಲಾಯಿತು, ಯಾಕೋ ಇದು ಕೂಡ ಅಮೆರಿಕ-ಇರಾನ್ ನಡುವೆ ಯುದ್ಧ ನಡೆಯದಂತೆ ತಡೆಯುವಲ್ಲಿ ವಿಫಲವಾಯಿತು, ಸದ್ಯದ ಸ್ಥಿತಿಯಲ್ಲಿ ಈ ಸಂಸ್ಥೆಯು ಇರುವುದನ್ನು ಜನ ಮರೆತಿದ್ದಾರೆ.

ಬ್ರಿಟನ್, ಫ್ರಾನ್ಸ್ ಮುಂತಾದ ಯುರೋಪಿಯನ್ ರಾಷ್ಟ್ರಗಳು ಆರ್ಥಿಕವಾಗಿ ಸಂಪೂರ್ಣ ದುರ್ಬಲಗೊಂಡವು, ಇದರಿಂದ ಭಾರತವೂ ಸೇರಿದಂತೆ ಏಷ್ಯಾ ಮತ್ತು ಆಫ್ರಿಕಾದ ಹತ್ತಾರು ದೇಶಗಳು ಸ್ವಾತಂತ್ರ್ಯ ಪಡೆದವು. ಎರಡನೇ ಮಹಾಯುದ್ಧವು ವಿಶ್ವವನ್ನು ಎರಡು ಬಣಗಳಾಗಿ ವಿಂಗಡಿಸಿತು. ಅಮೆರಿಕ ನಾಯಕತ್ವದ ಬಂಡವಾಳಶಾಹಿ ಮತ್ತು ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಬಣಗಳ ನಡುವೆ ಅಂದಿನಿಂದಲೂ ಶೀತಲ ಸಮರ ಮತ್ತು ಯುದ್ಧಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತನ್ನು ಭಯದ ವಾತಾವರಣದಲ್ಲಿಟ್ಟಿದೆ.

ಮಧ್ಯಪ್ರಾಚ್ಯದಲ್ಲಿ ಪ್ರಸ್ತುತ ಒಂದು ಕೋಟಿ ಜನಸಂಖ್ಯೆಯನ್ನು ಮೀರದ ಯಹೂದಿಗಳಿರುವ ಇಸ್ರೇಲ್ ದೇಶವು ಇದೇ ಸಂದರ್ಭದಲ್ಲಿ ಸ್ಥಾಪಿತವಾಯಿತು, ಈ ಭಾಗದಲ್ಲಿ ಇಸ್ರೇಲ್ ಸುತ್ತ ಆವರಿಸಿರುವ ಇಸ್ಲಾಮಿಕ್ ದೇಶಗಳೊಂದಿಗೆ ಸಂಘರ್ಷಕ್ಕೆ ಕಾರಣವಾಗಿದೆ.

ಎರಡನೇ ಮಹಾಯುದ್ಧವು ಮಾನವ ಕುಲದ ನಾಶಕ್ಕೆ ನಡೆದಂತೆ ಕಂಡರು ಅದೇ ಕಾಲಕ್ಕೆ ಸೈನಿಕರ ಚಿಕಿತ್ಸೆಗಾಗಿ ವೈದ್ಯಕೀಯ ಲೋಕದಲ್ಲಿ ಹೊಸ ಔಷಧಿಗಳ ಆವಿಷ್ಕಾರವಾಯಿತು ಮತ್ತು ಭವಿಷ್ಯದಲ್ಲಿ ತಮ್ಮ ದೇಶವನ್ನು ರಕ್ಷಿಸಿಕೊಳ್ಳಲು ಎಲ್ಲಾ ದೇಶಗಳು ರೇಡಾರ್, ಜೆಟ್ ಎಂಜಿನ್, ರಾಕೆಟ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿಕೊಂಡವು ಹಾಗೂ ಕಂಪ್ಯೂಟರ್‌ಗಳು, ಜಾಗತಿಕ ಸಂಪರ್ಕ ಮತ್ತು ಬಾಹ್ಯಾಕಾಶ ಯುಗಕ್ಕೆ ಉತ್ತೇಜನ ಕೊಟ್ಟಂತಾಯಿತು. ಮೊದಲನೇ ಮಹಾಯುದ್ಧವು ರಾಜಪ್ರಭುತ್ವವನ್ನು ಕೊನೆಗೊಳಿಸಿದರೆ ಎರಡನೇ ಮಹಾಯುದ್ಧವು ಐರೋಪ್ಯ ರಾಷ್ಟ್ರಗಳ ಸಾಮ್ರಾಜ್ಯಶಾಹಿ ಒಡೆತನಕ್ಕೆ ಅಂತ್ಯ ಹಾಡಿತು. ಯುದ್ಧಗಳು ಅಪಾರ ಸಾವು-ನೋವುಗಳು, ಪ್ರಕೃತಿ ನಾಶ, ಮಾಲಿನ್ಯ ಮುಂತಾದವುಗಳಿಗೆ ಕಾರಣವಾದರೂ ರಾಜಕೀಯ ವ್ಯವಸ್ಥೆ, ತಾಂತ್ರಿಕ ಪ್ರಗತಿ ಮತ್ತು ವಿಶ್ವಸಂಸ್ಥೆಯನ್ನು ಸ್ಥಾಪಿಸಲು ಕಾರಣವಾಯಿತು.

ಅಮೆರಿಕ-ಇಸ್ರೇಲ್-ಇರಾನ್ ಯುದ್ಧ

ಈ ದೇಶಗಳ ನಡುವೆ ದಶಕಗಳಿಂದ ಸಂಘರ್ಷಗಳು ನಡೆಯುತ್ತಲೇ ಇದೆ. ಫೆಬ್ರುವರಿ 28, 2026ರಿಂದ ಶಾಂತಿ ಒಪ್ಪಂದದ ಘೋಷಣೆಯ ದಿನ ಜೂನ್ 14, 2026ರವರೆಗೆ 108 ದಿನಗಳವರೆಗೆ ನಡೆದ ಯುದ್ಧ ಅಥವಾ ಸಂಘರ್ಷದಲ್ಲಿ ಜಗತ್ತಿನಾದ್ಯಂತ ವಾಸಿಯಾಗಲು ಬಹಳ ಕಾಲ ತೆಗೆದುಕೊಳ್ಳುವ ಆಳವಾದ ಗಾಯವನ್ನು ಮಾಡಿದೆ. ಅಂತರ ರಾಷ್ಟ್ರೀಯ ಇಂಧನ ಸಂಸ್ಥೆಯು ಯುದ್ಧವನ್ನು 'ಜಾಗತಿಕ ತೈಲ ಮಾರುಕಟ್ಟೆಯ ಇತಿಹಾಸದಲ್ಲೇ ಅತ್ಯಂತ ದೊಡ್ಡ ಪೂರೈಕೆಯ ವ್ಯತ್ಯಯ' ಎಂದು ಕರೆದಿದೆ. ಬಹುತೇಕ ಎಲ್ಲಾ ದೇಶಗಳು ಇಂಧನ ಕೊರತೆಯನ್ನು ಎದುರಿಸಬೇಕಾಯಿತು.

ಕೈಗಾರಿಕೆಗಳು ವಿಶೇಷವಾಗಿ ಉಕ್ಕು ಮತ್ತು ರಾಸಾಯನಿಕ ವಲಯಗಳು ಹೆಚ್ಚುವರಿ ವೆಚ್ಚದ ಹೊರೆಯನ್ನು ಎದುರಿಸಿದವು. ಗಲ್ಫ್ ರಾಷ್ಟ್ರಗಳು ಆಹಾರ ಪೂರೈಕೆಗಾಗಿ ಹಾರ್ಮುಜ್ ಜಲಸಂಧಿಯನ್ನೇ ಅವಲಂಬಿಸಿವೆ, ಜಲಮಾರ್ಗವು ಮುಚ್ಚಿದ್ದರಿಂದ ಅಗತ್ಯ ವಸ್ತುಗಳನ್ನು ವಿಮಾನಗಳ ಮೂಲಕ ಸಾಗಣೆ ಮಾಡಬೇಕಾಯಿತು, ಇದರಿಂದ ದಿನಸಿ ಪದಾರ್ಥಗಳ ಬೆಲೆ ದುಪ್ಪಟ್ಟಾಯಿತು. ಮಿಸೈಲ್‌ಗಳ ದಾಳಿಯಿಂದ ಕುಡಿಯುವ ನೀರಿನ ಘಟಕಗಳಿಗೆ ಹಾನಿ ಆಯಿತು. ಪ್ರವಾಸೋದ್ಯಮ ಪೂರ್ಣವಾಗಿ ಸ್ಥಗಿತಗೊಂಡಿತು.

ಜಾಗತಿಕ ಮಟ್ಟದ ವಿಶ್ಲೇಷಕರ ಅಭಿಪ್ರಾಯದಂತೆ ಯುದ್ಧದಲ್ಲಿ ಪ್ರಮುಖವಾಗಿ ಮುಂಚೂಣಿಯಲ್ಲಿದ್ದ ನಾಯಕ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡುತ್ತಿದ್ದ ದಿನಕ್ಕೊಂದು ಹೇಳಿಕೆಗಳು, ಕಾರ್ಯರೂಪಕ್ಕೆ ಬರದೆ ಪೊಳ್ಳಾದವು. ಜಗತ್ತಿಗೇ ದೊಡ್ಡಣ್ಣನಾಗಿ ಮೆರೆದು ಸೂಪರ್ ಪವರ್ ಎನಿಸಿಕೊಂಡು ಯಾರ ಮೇಲಾದರೂ ದಾಳಿ ಮಾಡಿ ವಶಪಡಿಸಿಕೊಳ್ಳಬಹುದೆಂಬ ಅಹಂಕಾರಕ್ಕೆ ಬಾರಿ ಪೆಟ್ಟು ಬಿತ್ತು. ಅಮೆರಿಕ ಆರ್ಥಿಕ ವ್ಯವಸ್ಥೆ ಕುಸಿಯಿತು. ಮೂರೂ ದೇಶಗಳು ಅಪಾರ ನಷ್ಟ ಅನುಭವಿಸಿದರೂ ಗೆದ್ದಿದ್ದು ನಾನೇ ಎನ್ನುವ ಭ್ರಮೆಯಲ್ಲಿ ಇವೆ. ಎಲ್ಲರೂ ಸೋತರು ಎಂಬುದು ಕಟುಸತ್ಯ, ಏಕೆಂದರೆ ಎಲ್ಲರೂ ಅಪಾರ ಸೈನಿಕರನ್ನು ಕಳೆದುಕೊಂಡಿದ್ದಾರೆ, ಲೆಕ್ಕವಿಲ್ಲದಷ್ಟು ಕುಟುಂಬಗಳು ಅಸ್ತಿತ್ವವನ್ನು ಕಳೆದುಕೊಂಡು ಬೀದಿಗೆ ಬಿದ್ದವು. ಗೆಲ್ಲಬೇಕಾಗಿರುವುದು ಅಹಂ ಅಲ್ಲ ಮಾನವೀಯತೆ ಮತ್ತು ಶಾಂತಿ ಎನ್ನುವ ಪರಿಜ್ಞಾನ ಇಲ್ಲದೆ ದೊಡ್ಡ ನಾಯಕರಾದವರು ಇವರು!. ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಶೃಂಗಸಭೆಯ ಸಂದರ್ಭದಲ್ಲಿ 'ಇರಾನ್ ಸರಿಯಾಗಿ ನಡೆದುಕೊಳ್ಳದಿದ್ದರೆ ಮತ್ತೇ ಇರಾನಿನ ಮೇಲೆ ಬಾಂಬ್ ದಾಳಿ ನಡೆಸಲು ಹಿಂದೇಟು ಹಾಕುವುದಿಲ್ಲ' ಎಂದು ಟ್ರಂಪ್ ಗುಡುಗಿದ್ದಾರೆ. ಒಟ್ಟಿನಲ್ಲಿ ಮಳೆ ನಿಂತರೂ ಎಲೆಗಳ ಹನಿ ನಿಲ್ಲದು.

ಇವೆಲ್ಲವೂ ಒಂದು ಕಡೆಯಾದರೆ ಪರಿಸರದ ಸಮತೋಲನದ ಬಗ್ಗೆಯೂ ಯೋಚಿಸಬೇಕಲ್ಲವೇ?. ಪ್ರಕೃತಿ, ಕಾಡು, ಪ್ರಾಣಿ-ಪಕ್ಷಿಗಳು ಹಾಗೂ ಸಮಸ್ತ ಜೀವರಾಶಿಗಳ ಮೇಲೆ ಆಗಿರುವ ಹೊಡೆತವನ್ನು ಅಂದಾಜಿಸಲು ಸಾಧ್ಯವೇ?.

ಬಾಂಬ್ ಹಾಗೂ ಕ್ಷಿಪಣಿಗಳ ದಾಳಿಯಿಂದ ಬೆಂಕಿಯ ಕೆನ್ನಾಲಿಗೆಗೆ ಸಾವಿರಾರು ಎಕರೆ ಅರಣ್ಯನಾಶ, ರಾಸಾಯನಿಕ ಮತ್ತು ಸ್ಫೋಟಕಗಳು ನದಿ, ಕೆರೆ ಮತ್ತು ಮಣ್ಣನ್ನು ಸೇರುವುದರಿಂದ ನೀರು ಮತ್ತು ಮಣ್ಣು ಕಲುಷಿತಗೊಳ್ಳುತ್ತದೆ. ಹಲವು ಪ್ರಾಣಿಪಕ್ಷಿಗಳ ಬೇದ ಕಣ್ಮರೆಯಾಗುವುದು, ಅಪರೂಪದ ಸಸ್ಯಗಳು ಮತ್ತು ಔಷಧೀಯ ಗಿಡಗಳು ನಾಶವಾಗುತ್ತವೆ, ಕಾರ್ಬನ್ ಡೈಆಕ್ಸೈಡ್ ಹೆಚ್ಚಾಗಿ ತಾಪಮಾನ ಏರಿಕೆ ಆಗುವುದು. ಕೃಷಿ ಭೂಮಿ ಫಲವತ್ತತೆ ಕಳೆದುಕೊಳ್ಳುವುದರಿಂದ ಆಹಾರ ಉತ್ಪಾದನೆ ಕಡಿಮೆ ಆಗುವುದು, ಹಸಿವು ಮತ್ತು ಅಪೌಷ್ಟಿಕತೆ ಹೆಚ್ಚಾಗುತ್ತದೆ.

ಗೆಲುವಿಗಾಗಿ ಯುದ್ಧ ಮಾಡಿದರೆಂದರೆ, ಅವರು ಗೆದ್ದಿದ್ದು ಏನನ್ನು?, ಲಕ್ಷಾಂತರ ಸೈನಿಕರು ಮತ್ತು ನಾಗರಿಕರನ್ನು ಬಲಿ ಕೊಟ್ಟು ಪಡೆದ ಗೆಲುವು ಗೆಲುವೆ?. ಯುದ್ಧದ ಗೆಲುವಿನಲ್ಲಿ ಮಾನವೀಯತೆ ಮತ್ತು ಮಾನವ ಕಲ್ಯಾಣ ಇಲ್ಲವಾದಲ್ಲಿ ಯುದ್ಧಗಳು ಏತಕ್ಕಾಗಿ ಬೇಕು?. ಯುದ್ಧದಲ್ಲಿ ಮರಣ ಹೊಂದಿದ ಕೋಟ್ಯಂತರ ಹೆಣಗಳ ರಾಶಿಯ ಮೇಲೆ ಜಯದ ಪತಾಕೆ ಹಾರಿಸಿ ನಗೆ ಬೀರುವುದಕ್ಕಿಂತ ನಾವೂ ಬದುಕಿ ಇತರರನ್ನೂ ಬದುಕಲು ಬಿಟ್ಟು ಹಸಿದವರಿಗೆ ಅನ್ನ ನೀಡಿ ಸಹಬಾಳ್ವೆ ನಡೆಸುವುದು ಅತ್ಯುತ್ತಮ ಜೀವನ ಮಾರ್ಗ.

ರಾಕೆಟ್, ಬಾಂಬ್ ಮತ್ತು ಕ್ಷಿಪಣಿಗಳನ್ನು ಹಾರಿಸಿದ್ದು ಯಾರೇ ಇರಬಹುದು ನೋವು ಮಾತ್ರ ಹೆತ್ತು ಪೊರೆದ ಭೂಮಿ ತಾಯಿಯ ಒಡಲಿಗೆ ಎನ್ನುವುದನ್ನು ಮರೆಯದಿರಿ ಅಹಂಕಾರಿಗಳೇ.

ಕೆಪಿಸಿಸಿ ಸಮಾವೇಶದಿಂದ ನೀಟ್‌ಗೆ ಹಾಜರಾಗಲಾಗದ ಮೂವರು ವಿದ್ಯಾರ್ಥಿಗಳಿಗೆ ಸೂಕ್ತ ನೆರವು

● ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಭರವಸೆ ● ಪ್ರಧಾನಿಯವರಿಂದ ನಾವೇನು ಪಾಠ ಕಲಿಯಬೇಕಿಲ್ಲ

ಬೆಂಗಳೂರು, ಜೂ. 22(ಕೆಎಂಶಿ)- ಸರಣಿ ತಪ್ಪು ಮಾಹಿತಿ ನೀಡುವ ಬೆಂಗಳೂರಿನ ಸಂಸದರು ಮತ್ತೊಮ್ಮೆ ತಪ್ಪು ಸಂದೇಶ ಹರಡುವ ಕೆಲಸವನ್ನು ಬಹಳ ಉತ್ತಮವಾಗಿ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ತಿಳಿಸಿದ್ದಾರೆ.

ನಿನ್ನೆ ನಡೆದ ಕಾಂಗ್ರೆಸ್ ಪಕ್ಷದ ಸಂಕಲ್ಪ ಸಮಾವೇಶ ಕಾರ್ಯಕ್ರಮದಲ್ಲಿ ಟ್ರಾಫಿಕ್ ಜಾಮ್ ಆಗಿದ್ದು ನಿಜ. ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂದು ನಾವು ಭಾನುವಾರ ಕಾರ್ಯಕ್ರಮ ಹಮ್ಮಿಕೊಂಡಿದ್ದೆವು.

ಸಣ್ಣ ಪುಟ್ಟ ತೊಂದರೆಗಳು ಆಗಿವೆ. ಅವುಗಳನ್ನು ನಾವು ಅಲ್ಲಗಳೆಯುವುದಿಲ್ಲ. ಆದರೆ ನಮ್ಮ ಕಾರ್ಯಕ್ರಮದ ಟ್ರಾಫಿಕ್ ಸಮಸ್ಯೆಯಿಂದ ಎರಡು, ಮೂರು ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಹಾಜರಾಗದೇ ಉಳಿದಿದ್ದಾರೆ ಎಂಬ ಸುದ್ದಿ ನೋಡಿದೆ. ಈ ಕಾರ್ಯಕ್ರಮದಿಂದ ಇಂತಹ ಪ್ರಮಾದವಾಗಿದ್ದರೆ ನಾವು ವಿಷಾದ ವ್ಯಕ್ತಪಡಿಸುತ್ತೇನೆ.

ನಾವು ಮುಂಜಾಗ್ರತೆ ಕ್ರಮ ಕೈಗೊಳ್ಳುವಾಗ ಪೊಲೀಸರು ಹಾಗೂ ಸೇವಾದಳದ ಕಾರ್ಯಕರ್ತರಿಗೆ ಬಹಳ ಸ್ಪಷ್ಟವಾಗಿ ಕೆಲವು ನಿರ್ದೇಶನ ನೀಡಿದ್ದೆವು. ನೀಟ್ ಪ್ರಾರಂಭವಾಗಿದ್ದು 1.30ರ ಸಮಯದಲ್ಲಿ ನಮ್ಮ ಕಾರ್ಯಕ್ರಮಕ್ಕೆ ಬರಬೇಕಾಗಿದ್ದ ಎಲ್ಲಾ ಬಸ್‌ಗಳು ಬೆಳಗ್ಗೆ 10.30ರ ವೇಳೆಗೆ ಅರಮನೆ ಮೈದಾನ ತಲುಪಿದ್ದವು. ಎಲ್ಲೂ ಸಮಸ್ಯೆಯಾಗಬಾರದು ಎಂದು ಅರಮನೆ ಮೈದಾನದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೂ ಎರಡು ಮೂರು ಮಕ್ಕಳಿಗೆ ತೊಂದರೆ ಆಗಿರುವ ಬಗ್ಗೆ ಮಾಧ್ಯಮಗಳಲ್ಲಿ ಪ್ರಸಾರವಾಗಿವೆ. ಅವರಿಗೆ ಮುಂದಿನ ಪರೀಕ್ಷೆ ಕೈಗೊಳ್ಳಲು ಬೇಕಾಗಿರುವ ಎಲ್ಲಾ ಸಹಾಯ ಮಾಡಲು ನಾವು ಸಿದ್ಧರಿದ್ದೇವೆ.

20 ವಿದ್ಯಾರ್ಥಿಗಳ ಆತ್ಮಹತ್ಯೆಗೇನು ಹೇಳ್ತೀರಾ: ನೀಟ್ ಪರೀಕ್ಷೆ ಮುಂದೂಡಿಕೆಯಾಗಿರುವುದು, ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದನ್ನು ನಾವು ನೋಡಿದ್ದೇವೆ. ಸಿಬಿಎಸ್‌ಸಿ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದನ್ನೂ ನೋಡಿದ್ದೇವೆ. 20 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಾಗ ಮೌನವಹಿಸಿದ ಮೋದಿ ಅವರಾಗಲೀ, ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್ ಅವರಾಗಲಿ ಈ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರಾ...

ಬೆಂಗಳೂರಿನ ಸಂಸತ್ ಸದಸ್ಯರು ನಡೆಯಬಾರದ ಪ್ರಮಾದ ನಡೆದಿದೆ ಎಂದು ಮಾತನಾಡುತ್ತಿದ್ದಾರೆ. ಆದರೆ ಲಕ್ಷಾಂತರ ಜನರಿಗೆ ಪದೇ ಪದೆ ಪರೀಕ್ಷೆ ಬರೆಯುವಂತೆ ಮಾಡುತ್ತಿರುವುದು ಬಿಜೆಪಿ.



ಬಿ.ಕೆ.ಹರಿಪ್ರಸಾದ್

ಪ್ರಶ್ನೆ ಪತ್ರಿಕೆಯಿಂದ 1.40 ಕೋಟಿ ವಿದ್ಯಾರ್ಥಿಗಳ ಭವಿಷ್ಯ ಅನಿಶ್ಚಿತತೆಗೆ ಸಿಲುಕಿರುವಾಗ ಪ್ರಧಾನಿಯಾಗಲಿ, ಶಿಕ್ಷಣ ಸಚಿವರಾಗಲಿ ಅವರಿಗೆ ಸ್ಪಂದಿಸಿದ್ದಾರಾ. ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುವಾಗ ಕೇಂದ್ರ ಸಚಿವರ ವಿರುದ್ಧ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಆದರೂ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಮಕ್ಕಳ ಆತ್ಮಹತ್ಯೆಗೆ ಕಾರಣ ಯಾರು ಎಂದು ಬಿಜೆಪಿ ಸಂಸದರು ಹೇಳಬೇಕು. ಮೈಸೂರಿನಲ್ಲಿ 1400 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಅಲ್ಲಿ ಯಾವ ಕಾರ್ಯಕ್ರಮವಿತ್ತು. ಯಾದಗಿರಿಯಲ್ಲಿ 286, ದಕ್ಷಿಣ ಕನ್ನಡ ಸೇರಿದಂತೆ ಅನೇಕ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಗೈರಾಗಿದ್ದಾರೆ. ಇಲ್ಲೆಲ್ಲಾ ಯಾವ ಕಾರ್ಯಕ್ರಮ ನಡೆದಿತ್ತು. ಕೆಲವು ವಿದ್ಯಾರ್ಥಿಗಳು ಮಾಧ್ಯಮಗಳಿಗೆ ನೀಡಿರುವ ಸಂದರ್ಶನದಲ್ಲಿ ಪರೀಕ್ಷೆ ಬರೆದಿರುವುದಾಗಿಯೂ ಹೇಳಿದ್ದಾರೆ. ಸುಳ್ಳಿನ ಕಾರ್ಖಾನೆ ಇಟ್ಟುಕೊಂಡಿರುವ ಬಿಜೆಪಿಯವರು ತಮ್ಮ ತಪ್ಪು ಮರೆಮಾಚಲು ಕಾಂಗ್ರೆಸ್ ವಿರುದ್ಧ ಕುಂಟು ನೆಪ ಹೇಳುವುದು ಬೇಡ. ದೇಶದಾದ್ಯಂತ ವಿದ್ಯಾರ್ಥಿಗಳು ಆತಂಕದಲ್ಲಿರುವಾಗ, ಪರೀಕ್ಷೆ ಬರೆಯದೇ ನಕಲಿ ಪ್ರಮಾಣಪತ್ರ ಹೊಂದಿರುವ ಪ್ರಧಾನಮಂತ್ರಿಗಳು ಪರೀಕ್ಷಾ ಪೆ ಚರ್ಚಾ ಮಾಡುತ್ತಾರೆ. ಆದರೆ ಸೋರಿಕೆ ಬಗ್ಗೆ ಮಾತನಾಡುತ್ತಿದ್ದಾರೆ.

ಬರೀ ನೀತಿ ಪಾಠ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆಗೆ ಹೊಣೆ ಯಾರು, ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಮಾನಸಿಕ ಯಾತನೆಗೆ ಹೊಣೆ ಯಾರು, ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಉತ್ತರ ಕೊಡುವವರು ಯಾರು, ಪರೀಕ್ಷೆ ವ್ಯವಸ್ಥೆ ಮೇಲೆ ನಂಬಿಕೆ ಕಳೆದುಕೊಳ್ಳುವಂತೆ ಮಾಡಿದವರು ಯಾರು? ಈ ಪ್ರಶ್ನೆಗಳಿಗೆ ಉತ್ತರ ನೀಡದೇ ಕಾಂಗ್ರೆಸ್ ಕಾರ್ಯಕ್ರಮ ಗುರಿಯಾಗಿಸಿ ಮಾತನಾಡಲು ಬಿಜೆಪಿ ನಾಯಕರಿಗೆ ನಾಚಿಕೆಯಾಗುವುದಿಲ್ಲವೇ ಕಾಂಗ್ರೆಸ್ ಪಕ್ಷ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಕಾಳಜಿ ಹೊಂದಿದೆ. ಅವರ ಹಕ್ಕುಗಳ ಪರವಾಗಿ ನಿಲ್ಲುತ್ತದೆ. ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡಿದವರು ಇಂದು ನೀತಿ ಪಾಠ ಹೇಳುತ್ತಿರುವುದು ದೇಶದ ದುರಂತ. ಬಿಜೆಪಿ ನೀಟ್ ಹಗರಣದಲ್ಲಿ ದೇಶದ ಜನರಿಗೆ ಕ್ಷಮೆ ಕೇಳಲಿ. ನಂತರ ಕಾಂಗ್ರೆಸ್ ಬಗ್ಗೆ ಮಾತನಾಡಲಿ ಮೊದಲು ದೇಶದ ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು.

ಅವರಿಂದ ಪಾಠ ಕಲಿಯಬೇಕಿಲ್ಲ: ವಿಮಾನ ನಿಲ್ದಾಣದಲ್ಲಿ ಮೋದಿ ಅವರು ಕಾದಿರುವುದನ್ನು ನೋಡಿ ಕಲಿಯಲಿ ಎಂಬ ಕುಮಾರಸ್ವಾಮಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, 'ಎಷ್ಟು ನಿಮಿಷ ಕಾದರು, ಯಾವ ಹೆಲಿಕಾಪ್ಟರ್‌ನಲ್ಲಿ ಹೋದರು ಎಂದು ಅವರಿಂದ ನಾವು ಕಲಿಯಬೇಕಾಗಿಲ್ಲ'. ಮೋದಿ ಅವರು ಕುಮಾರಸ್ವಾಮಿ ಅವರು ಉತ್ತರ ಕೊಡಬೇಕಾಗಿರುವುದು, ನೀಟ್ ಪ್ರಶ್ನೆಪತ್ರಿಕೆ 3 ಬಾರಿ ಸೋರಿಕೆಯಾಗಿರುವುದರಿಂದ 20 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವುದರ ಬಗ್ಗೆ. ಮೋದಿ ಅವರು ವಿಮಾನ ನಿಲ್ದಾಣದಲ್ಲಿ 45 ನಿಮಿಷ ಯಾವ ಕಾರಣಕ್ಕೆ ಇದ್ದರು ಎಂಬುದು ನನಗೆ ಗೊತ್ತಿದೆ. ಈಗ ಆ ವಿಚಾರ ಮಾತನಾಡುವುದಿಲ್ಲ. ನೀಟ್, ಸಿಬಿಎಸ್ಸಿ, ಯುಪಿಎಸ್ಸಿ ಪ್ರಶ್ನೆಪತ್ರಿಕೆ ಸೋರಿಕೆ ಬಗ್ಗೆ ಉತ್ತರವಿಲ್ಲ, ತಪ್ಪಿತಸ್ಥರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಇದಕ್ಕೆ ಉತ್ತರ ಕೊಡದವರಿಂದ ಕಲಿಯುವುದೇನು ಇಲ್ಲ' ಎಂದರು.

ಕಾರ್ಯಕ್ರಮದಿಂದ ತೊಂದರೆ ಅನುಭವಿಸಿರುವ ವಿದ್ಯಾರ್ಥಿಗಳ ಬಗ್ಗೆ ಕೇಳಿದಾಗ, 'ನಮ್ಮ ತಂಡ ಅವರನ್ನು ಭೇಟಿ ಮಾಡುವ ಪ್ರಯತ್ನ ಮಾಡಲಿದೆ. ಅವರಿಗೆ ಆಗಿರುವ ನಷ್ಟ ಭರಿಸಲು ಸಿದ್ಧರಿದ್ದೇವೆ. ಕೆಲವರಿಂದ ನಾಗ್ಪುರದ ಸುಳ್ಳಿನ ಸಂಘ ಸುಳ್ಳು ಹೇಳಿಸಿದೆ' ಎಂದು ತಿರುಗೇಟು ನೀಡಿದರು. ನೀಟ್ ಪರೀಕ್ಷೆ ರದ್ದುಗೊಳಿಸುವ ಬಗ್ಗೆ ಅಭಿಪ್ರಾಯ ವ್ಯಕ್ತವಾಗುತ್ತಿರುವ ಬಗ್ಗೆ ಕೇಳಿದಾಗ, 'ಸಿಇಟಿ ಪರೀಕ್ಷೆ ಮೂಲಕ ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯನ್ನು ಪರಿಣಾಮಕಾರಿಯಾಗಿ ನಡೆಸಿದ್ದು ಕರ್ನಾಟಕ. ದಕ್ಷಿಣ ಭಾರತದ ವಿದ್ಯಾರ್ಥಿಗಳು ಹೆಚ್ಚಾಗಿ ಆಯ್ಕೆಯಾಗುತ್ತಿದ್ದ ವ್ಯವಸ್ಥೆ ತಪ್ಪಿಸಲು ನೀಟ್ ವ್ಯವಸ್ಥೆ ತಂದರು. ಅಲ್ಲಿರುವ ಕಾಲೇಜುಗಳಿಗೂ, ಇಲ್ಲಿರುವ ಕಾಲೇಜುಗಳಿಗೂ ಇರುವ ವ್ಯತ್ಯಾಸ ನೋಡಿ' ಎಂದರು.

ಯಂತ್ರೋಪಕರಣಗಳಿಗೆ ಅರ್ಜಿ ಆಹ್ವಾನ

ಮೈಸೂರು: ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ ಕೇಂದ್ರ ಪುರಸ್ಕೃತ ಯೋಜನೆಯಡಿ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು ಯೋಜನೆಯನ್ನು 2024-25ರಿಂದ 2030-31ರವರೆಗೆ ಅನುಷ್ಠಾನ ಮಾಡಲು ಮಂಜೂರಾತಿ ನೀಡಿದ್ದು, ಖಾದ್ಯ ತೈಲಗಳನ್ನು ಆಮದು ಮಾಡಿಕೊಳ್ಳುವಲ್ಲಿ ದೇಶದ ಅವಲಂಬನೆಯನ್ನು ಕಡಿಮೆ ಮಾಡಲು ಮತ್ತು ದೇಶೀಯ ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಿಸುವ ಹಾಗೂ ರೈತರ ಆದಾಯ ಸುಧಾರಿಸುವುದರೊಂದಿಗೆ ಆತ್ಮನಿರ್ಭರತೆ ಸಾಧಿಸುವ ಉದ್ದೇಶದಿಂದ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 2026-27ನೇ ಸಾಲಿನ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ-ಎಣ್ಣೆಕಾಳು ಯೋಜನೆಯಡಿ ಸ್ಥಳೀಯವಾಗಿ ಉದ್ಯೋಗಾವಕಾಶ ಕಲ್ಪಿಸಲು ಹಾಗೂ ಶುದ್ಧ ಖಾದ್ಯ ತೈಲ ಉಪಯೋಗಿಸಲು ಅನುಕೂಲವಾಗುವಂತೆ ಪ್ರೇರೇಪಿಸಲು ಸಂಸ್ಕರಣಾ ಘಟಕಗಳಿಗೆ ಅವಶ್ಯವಿರುವ ಯಂತ್ರೋಪಕರಣಗಳನ್ನು ಸದರಿ ಯೋಜನೆಯ ಯೋಜನಾ ವರದಿಯ ಶೇ.33ರಷ್ಟು ಅಥವಾ ರೂ. 9.99 ಲಕ್ಷಕ್ಕೆ ಮೀರದಂತೆ ಸಹಾಯಧನ ಒದಗಿಸಲಾಗುವುದು. (ಈ ಘಟಕದಡಿ ಕಟ್ಟಡ ವೆಚ್ಚ ಮತ್ತು ಭೂಮಿ ಬಾಡಿಗೆ ಪರಿಗಣಿಸುವುದಿಲ್ಲ.) ಯೋಜನೆಯಡಿ ಸೌಲಭ್ಯ ಪಡೆಯಲು ಸರ್ಕಾರ-ಸರ್ಕಾರೇತರ ಸಂಸ್ಥೆಗಳು, ರೈತ ಉತ್ಪಾದಕರ ಸಂಸ್ಥೆಗಳು ಜೂ.30 ದಿನಾಂಕದೊಳಗೆ ವಿಸ್ತೃತ ಯೋಜನಾ ವರದಿಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಹೋಬಳಿ ರೈತ ಸಂಪರ್ಕ ಕೇಂದ್ರ ಅಥವಾ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಅಥವಾ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದಿವಂಗತ ಹರಿ ಶಂಕರ್ ಸಿಂಘಾನಿಯಾ ಜನ್ಮದಿನ
ಬೃಹತ್ ಸ್ವಯಂ ರಕ್ತದಾನ ಶಿಬಿರ


ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ ಕಂಪನಿ ಅಧಿಕಾರಿಗಳು ರಕ್ತದಾನ ಮಾಡಿದರು.

ಮೈಸೂರು, ಜೂ.22(ವಿವಿಹೆಚ್)– ಜೆಕೆ ಟೈರ್ ಅಂಡ್ ಇಂಡಸ್ಟ್ರೀಸ್ ಲಿಮಿಟೆಡ್ ವತಿಯಿಂದ ಮಾಜಿ ಅಧ್ಯಕ್ಷ ದಿವಂಗತ ಹರಿ ಶಂಕರ್ ಸಿಂಘಾನಿಯಾ ಅವರ 93ನೇ ಜನ್ಮದಿನದ ಅಂಗವಾಗಿ ಬೃಹತ್ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು.

ಲಯನ್ಸ್ ರಕ್ತನಿಧಿ ಕೇಂದ್ರ (ಜೀವಧಾರ) ಮತ್ತು ಭಾರತೀಯ ಉದ್ಯಮ ಒಕ್ಕೂಟ ಸಹಯೋಗದಲ್ಲಿ ಮೈಸೂರಿನ ಜೆಕೆ ಟೈರ್‌ನ ವರುಣ ಉತ್ಪಾದನಾ ಘಟಕಗಳು ಹಾಗೂ ಕಂಪನಿಯ ಅತಿಥಿಗೃಹ ಸೇರಿದಂತೆ ನಾಲ್ಕು ಸ್ಥಳಗಳಲ್ಲಿ ಏಕಕಾಲದಲ್ಲಿ ನಡೆಯಿತು.

ಜೆಕೆ ಟೈರ್ನ ಉಪಾಧ್ಯಕ್ಷ-(ವರ್ಕ್ಸ್) ವಿ.ಈಶ್ವರ ರಾವ್ ಮಾತನಾಡಿ, ಕಳೆದ ವರ್ಷ 1,358 ಯೂನಿಟ್ ರಕ್ತ ಸಂಗ್ರಹಿಸ ಲಾಗಿತ್ತು, ಈ ವರ್ಷದ ಶಿಬಿರದಲ್ಲಿ 1,300ಕ್ಕೂ ಹೆಚ್ಚು ಯೂನಿಟ್ ರಕ್ತವನ್ನು ದಾನ ಮಾಡಿದ್ದಾರೆ. ಈ ರಕ್ತದಾನ ಕಾರ್ಯಕ್ರಮವು ನಮ್ಮ ಸಂಸ್ಥೆಯು ಕಳೆದ 12 ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಒಂದು ಉದಾತ್ತ ಕಾರ್ಯವಾಗಿದೆ. ಜವಾಬ್ದಾರಿಯುತ ನಾಗರಿಕರಾಗಿ ರಕ್ತದಾನ ಮಾಡುವುದು ನಮ್ಮ ಮೂಲಭೂತ ಕರ್ತವ್ಯವಾಗಿದೆ. ಇದು ಇತರರ ಜೀವ ಉಳಿಸುವುದಲ್ಲದೆ, ಆರೋಗ್ಯವನ್ನು ವೃದ್ಧಿಸಲು ಸಹಾಯ ಮಾಡುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಿಐಐ ಮೈಸೂರು ವಲಯದ ಅಧ್ಯಕ್ಷ ಉತ್ಸವ್ ಅಗರ್ವಾಲ್, ಮೈಸೂರು ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿ ಡಾ.ಮೊಹಮ್ಮದ್ ಸಿರಾಜ್ ಅಹಮದ್, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ (ಮೈಸೂರು) ಕಾರ್ಯದರ್ಶಿ ಡಾ.ಜಯಂತ್, ಲಯನ್ಸ್ ರಕ್ತನಿಧಿ ಕೇಂದ್ರ – ಜೀವಧಾರದ ವ್ಯವಸ್ಥಾಪಕ ನಿರ್ದೇಶಕ ಎಸ್.ಇ. ಗಿರೀಶ್, ಜೆಕೆ ಟೈರ್‌ನ ಹಿರಿಯ ಆಡಳಿತ ವರ್ಗದ ಅಧಿಕಾರಿಗಳಾದ ಆರ್.ಜಗದೀಶ್, ರಾಜೀವ್ ಕುಮಾರ್, ದೊನಾಲ್ಡ್ ವಾಜ್, ನವೀನ್, ಎಸ್.ಕೆ.ಶೆಟ್ಟಿ, ಸೇರಿದಂತೆ ಕಂಪನಿಯ ಅಧಿಕಾರಿಗಳು ಹಾಗೂ ರಕ್ತದಾನಿಗಳು ಉಪಸ್ಥಿತರಿದ್ದರು.


ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ಎಎಚ್‌ಇಆರ್ ಹಾಗೂ ಸುತ್ತೂರು ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.


ವಿಶ್ವ ಯೋಗ ದಿನಾಚರಣೆಯ ಪ್ರಯುಕ್ತವಾಗಿ ಡಾ.ರಾಧಾಕೃಷ್ಣನ್ ಪಾರ್ಕ್‌ನಲ್ಲಿ ಯೋಗ ದಿನ ಆಚರಿಸಲಾಯಿತು. ಕೊಯಮತ್ತೂರಿನ ಈಶ ಟೆಂಪಲ್ ಆದಿ ಯೋಗಿ ಶಿಷ್ಯರಾದ ಶಶಿಕಾಂತ್ ಸಾಹು ಯೋಗ ಗುರುಗಳು ಆಗಮಿಸಿದ್ದರು. ಇವರ ಮಾರ್ಗದರ್ಶನದಲ್ಲಿ ಶಕ್ತಿನಗರ ಟೀಚರ್ಸ್ ಲೇಔಟ್ ವಿದ್ಯಾಶಂಕರ್ ಲೇಔಟ್ ಸುತ್ತಮುತ್ತಲ ಬಡಾವಣೆ ನಿವಾಸಿಗಳು ಯೋಗ ನಡಿಗೆ, ಯೋಗ ಮಾಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ಯೋಗ ದಿನಾಚರಣೆ


ಮೈಸೂರು ಎಸ್‌ಜೆಸಿಇ ಕ್ಯಾಂಪಸ್‌ನ ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅಂತರ ರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಈ ವೇಳೆ ಪ್ರಾಂಶುಪಾಲ ಡಾ.ಭಕ್ತವತ್ಸಲ, ವಿವಿಧ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿ ಉಪಸ್ಥಿತರಿದ್ದರು.


ಮೈಸೂರು ತಾಲೂಕು ವಾಜಮಂಗಲ ರೋಟರಿ ಮೈಸೂರು ಉತ್ತರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಯೋಗ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಮುಖ್ಯ ಶಿಕ್ಷಕರು, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದೇವಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ


ದೇವಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಸಾಮೂಹಿಕ ಯೋಗ ಕಾರ್ಯಕ್ರಮ.

ಮೈಸೂರು, ಜೂ. 22– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ತಾಲೂಕಿನ ವರುಣಾ ಹೋಬಳಿ ದೇವಲಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಸಾಮೂಹಿಕ ಯೋಗ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶಾಲೆಯ ದೈಹಿಕ ಶಿಕ್ಷಕ ಪಿ ಎಸ್ ಹರ್ಷ ಮಾರ್ಗದರ್ಶನದಲ್ಲಿ ಬೆಳಿಗ್ಗೆ 7:00 ಗಂಟೆಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಯೋಗಾಸನದ ವಿವಿಧ ಭಂಗಿಗಳನ್ನು 45 ನಿಮಿಷಗಳ ಕಾಲ ಉತ್ಸಾಹದೊಂದಿಗೆ ಪ್ರದರ್ಶಿಸಿದರು. ಕಾರ್ಯಕ್ರಮದ ಅಂತ್ಯದಲ್ಲಿ ಸಾಮೂಹಿಕ ಓಂಕಾರ ಮತ್ತು ಶಾಂತಿ ಮಂತ್ರ ಪಠಿಸುವ ಮೂಲಕ ಯೋಗ ದಿನ ಮುಕ್ತಾಯಗೊಂಡಿತು. ಕಾರ್ಯಕ್ರಮದಲ್ಲಿ ಶಾಲೆ ಮುಖ್ಯಶಿಕ್ಷಕ ಬಿ ಸಿದ್ದರಾಜು, ಸಹ ಶಿಕ್ಷಕರಾದ ನರೇಂದ್ರ, ರಾಘವೇಂದ್ರ, ಮನೋಹರ, ನಂದಿತಾ, ಲಕ್ಷ್ಮಣ, ಕಲಾಪೂರ್ಣ ಹಾಜರಿದ್ದರು.

ಮಕ್ಕಳಿಗೆ ಶಿಕ್ಷಣ, ಸಂಸ್ಕಾರದ ಜೊತೆ ಭಾವನಾತ್ಮಕತೆ ಬೆಳೆಸಿ

ಸತ್ಸಂಗದಲ್ಲಿ ಆದಿಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಕರೆ


ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಸಮ್ಮಿಲನ-ಸತ್ಸಂಗ-ಸಂಗೀತದ ನೇಗಿಲೋತ್ಸವ ಕಾರ್ಯಕ್ರಮವನ್ನು ಆದಿಚುಂಚನಗಿರಿ ಮಠದ ಪೀಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು, ಜೂ.22(ಎಸ್‌ಪಿಎನ್)– ಮಕ್ಕಳಿಗೆ ಉತ್ತಮ ಸಂಸ್ಕಾರ, ಶಿಕ್ಷಣ ಕೊಡಿಸುವುದು ಪೋಷಕರ ಜವಾಬ್ದಾರಿ. ಅದೇ ರೀತಿ ಮಕ್ಕಳನ್ನು ಸಂಬಂಧಗಳ ಬೆಸುಗೆಯಾಗಿ, ಭಾವನಾತ್ಮಕವಾಗಿ ಬೆಳೆಸಲು ಪೋಷಕರು ಮುಂದಾಗಬೇಕು ಎಂದು ಆದಿಚುಂಚನಗಿರಿ ಮಠದ ಪೀಠಾಧಿಪತಿ ಡಾ.ನಿರ್ಮಲಾನಂದ ನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಸಮ್ಮಿಲನ-ಸತ್ಸಂಗ-ಸಂಗೀತದ ನೇಗಿಲೋತ್ಸವ ಕಾರ್ಯ ಕ್ರಮದಲ್ಲಿ ಪಾಲ್ಗೊಂಡು ಪ್ರವಚನ ನೀಡಿದರು.

ಆಧುನಿಕ ಸಮಾಜದಲ್ಲಿ ಕೌಟುಂಬಿಕ ವಾತಾವರಣ ನಾನಾ ಕಾರಣಗಳಿಗೆ ಕಲುಷಿತಗೊಂಡಿದೆ. ಇದರಿಂದ ಮಕ್ಕಳು ನಾನಾ ರೀತಿಯ ಮಾನಸಿಕ ತೊಂದರೆಗಳಿಗೆ ಒಳಗಾಗುತ್ತಿದ್ದಾರೆ. ಪ್ರಸ್ತುತ ಗಂಡ-ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುವುದರಿಂದ ಮನೆಗಳಲ್ಲಿ ಏಕಾಂಗಿಯಾಗಿ ಬೆಳೆಯುವ ಮಕ್ಕಳು ನಾನಾ ರೀತಿಯ ಮಾನಸಿಕ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ದೇಶದ ಭವಿಷ್ಯವನ್ನು ರೂಪಿಸುವ ಮಕ್ಕಳು ಈ ರೀತಿ ತೊಂದರೆಗೆ ಒಳಗಾಗುತ್ತಿರುವುದು ಆತಂಕಕಾರಿ ಎಂದರು.

ಮಕ್ಕಳನ್ನು ಸಂಸ್ಕಾರವಂತರಾಗಿ, ಭಾವನಾತ್ಮಕವಾಗಿ ಬೆಳೆಸಬೇಕು. ಮಕ್ಕಳು ಆದಷ್ಟು ಸಮಾಜದಲ್ಲಿನ ವ್ಯವಸ್ಥೆಗೆ ಒಗ್ಗಿಗೊಂಡು ಬೆಳೆಯಬೇಕು. ಇದರಿಂದ ಅವರಿಗೆ ಸಮಾಜದಲ್ಲಿ ಯಾವುದು ಒಳ್ಳೆಯದು, ಕೆಟ್ಟದು ಎಂಬುದನ್ನು ತಿಳಿದುಕೊಳ್ಳಲು ಇದು ಸಹಕಾರಿ. ಈ ಮೂಲಕ ಅವರಿಗೆ ಸಮಾಜ ಸಮ್ಮತವಾದ ನಡವಳಿಕೆಗಳು ಮೈಗೂಡುತ್ತವೆ ಎಂದು ಕಿವಿಮಾತು ಹೇಳಿದರು.

ಮಕ್ಕಳ ಮಾನಸಿಕ ಸ್ವಾಸ್ಥ್ಯ ಚೆನ್ನಾಗಿರಬೇಕಾದರೆ ತಂದೆ-ತಾಯಿ, ಅಜ್ಜ-ಅಜ್ಜಿ ಹಾಗೂ ಇನ್ನಿತರ ಸಂಬಂಧಗಳ ನಡುವೆ ಅವರು ಬದುಕುವ ವಾತಾವರಣ ನಿರ್ಮಾಣವಾಗಬೇಕು. ಇದರಿಂದ ಅವರ ಎಲ್ಲಾ ಭಾವನೆಗಳಿಗೆ ಹಿರಿಯರು ಒತ್ತಾಸೆಯಾಗಿ ನಿಲ್ಲುತ್ತಾರೆ. ಪರಿಣಾಮ ತಮ್ಮೆಲ್ಲಾ ಒಳ್ಳೆಯ ಪ್ರಯತ್ನಗಳಿಗೆ ಹಿರಿಯರ ಬೆಂಬಲ ದೊರಕುತ್ತದೆ. ಇದರಿಂದ ಮಕ್ಕಳು ದೊಡ್ಡ ಸಾಧನೆಗಳ ಕಡೆಗೂ ಗಮನಹರಿಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ ಒಕ್ಕಲಿಗರು ವಿಘಟಿತರಾಗುತ್ತಿರುವುದು ಕಂಡು ಬರುತ್ತಿದೆ. ಜೊತೆಗೆ ಒಕ್ಕಲುತನ ಹಾಗೂ ಅದರೊಂದಿಗೆ ಸಾಗಿ ಬಂದಿರುವ ಸಂಸ್ಕೃತಿಯೂ ಮಾಯವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ವೇದಿಕೆಯಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರ ಸ್ವಾಮೀಜಿ, ಬಿಜೆಪಿ ಮೈಸೂರು ನಗರ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ ಒಕ್ಕಲಿಗರ ಸಂಘದ ನಿರ್ದೇಶಕ ಮಂಜೇಗೌಡ, ಜಿಲ್ಲಾಧ್ಯಕ್ಷ ಮರಿಸ್ವಾಮಿ, ಹಿರಿಯ ಐಪಿಎಸ್ ಅಧಿಕಾರಿ ಡಾ.ಪ್ರಕಾಶ್ ಗೌಡ, ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ. ಶ್ರೀಧರ್, ಪ್ರಶಾಂತ್ ಗೌಡ, ನೇಗಿಲ ಯೋಗಿ ಸಮಾಜಸೇವಾ ಟ್ರಸ್ಟ್‌ನ ರವಿಕುಮಾರ್, ಮಹಿಳಾ ವಿಭಾಗದ ಶೋಭಾ ನಾಗರಾಜ್, ಮಂಜುನಾಥ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

ಗಮನ ಸೆಳೆದ ಕಾರ್ಯಕ್ರಮ

ಖ್ಯಾತ ಗಾಯಕ ಗೋನಾಸ್ವಾಮಿ ಅವರಿಂದ ಜಾನಪದ ಮತ್ತು ಭಾವ ಗೀತೆಗಳನ್ನು ಹಾಡಿ, ಪ್ರೇಕ್ಷಕರನ್ನು ರಂಜಿಸಿದರು. ಇದಕ್ಕೂ ಸಮ್ಮಿಲನ ಕಾರ್ಯಕ್ರಮದಲ್ಲಿ ಖ್ಯಾತ ಮನೋವೈದ್ಯ ಡಾ.ರವೀಶ್, ಅಭಿಯಂತರರಾದ. ಡಾ.ಸದಾಶಿವೇಗೌಡ, ಕರ್ನಾಟಕ ರಾಜ್ಯ ಇಂಜಿನಿಯರ್ ಅಸೋಸಿಯೇಷನ್ ಅಧ್ಯಕ್ಷ ಡಾ.ದೇವರಾಜು, ಉದ್ಯಮಿ ಡಾ.ಚಂದ್ರಶೇಖರ್, ಹಿರಿಯ ಪತ್ರಕರ್ತ ಜಯರಾಂ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಡಾ.ಲೋಕೇಶ್, ಮಾಜಿ ಮೇಯರ್ ಮೋದಾಮಣಿ ಸೇರಿದಂತೆ ಸಮಾಜದ ಗಣ್ಯರ ಉಪಸ್ಥಿತಿಯಲ್ಲಿ ಸಮ್ಮಿಲನ ಕಾರ್ಯಕ್ರಮ ಜರುಗಿತು.

ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು: ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದಿಂದ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ, ನೀಟ್, ಮ್ಯಾನೇಜ್‌ಮೆಂಟ್ ಕೋಟಾದಡಿ ವಿವಿಧ ವೃತ್ತಿಪರ ಕೋರ್ಸ್‌ಗಳಾದ ವೈದ್ಯಕೀಯ, ಎಂ.ಡಿ, ಎಂ.ಎಸ್. ಬಿ.ಡಿ.ಎಸ್, ಎಂ.ಡಿ.ಎಸ್ ಬಿ.ಇ, ಬಿ.ಟೆಕ್, ಎಂ.ಟೆಕ್. ಎಂ.ಆರ್ಕ್, ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್, ಎಂ.ಬಿ.ಎ, ಎಂ.ಸಿ.ಎ, ಎಲ್.ಎಲ್.ಬಿ. ಆಯುಷ್ ಹಾಗೂ ಬಿ.ಎಸ್ಸಿ ಇನ್ ಅಗ್ರಿಕಲ್ಚರ್, ಅಗ್ರಿಕಲ್ಚರಲ್ ಎಂಜಿನಿಯರಿಂಗ್, ಡೈರಿ ಟೆಕ್ನಾಲಜಿ, ಫಾರೆಸ್ಟ್ರಿ, ವೆಟರ್ನರಿ ಮತ್ತು ಅನಿಮಲ್ ಸೈನ್ಸಸ್, ಫುಡ್ ಟೆಕ್ನಾಲಜಿ, ಬಯೋಟೆಕ್ನಾಲಜಿ, ಫಿಶರೀಸ್, ಸೆರಿಕಲ್ಚರ್. ಹೋಮ್, ಕಮ್ಯೂನಿಟಿ ಸೈನ್ಸಸ್, ಫುಡ್ ನ್ಯೂಟ್ರಿಷನ್ ಅಂಡ್ ಡಯಟೆಟಿಕ್ಸ್, ಬಿ.ಫಾರ್ಮ್, ಎಂ.ಫಾರ್ಮ್, ಫಾರ್ಮಾ-ಡಿ ಹಾಗೂ ಡಿ.ಫಾರ್ಮಾ ಸೇರಿದಂತೆ ಹಲವು ವ್ಯಾಸಂಗಗಳಿಗೆ ಆಯ್ಕೆಯಾದ ಕ್ರಿಶ್ಚಿಯನ್ ವಿದ್ಯಾರ್ಥಿಗಳಿಗೆ ಅರಿವು ಸಾಲ ಯೋಜನೆಯಡಿ ಸಾಲ ಸೌಲಭ್ಯ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು www.kccdcl online. karnataka.gov.inನಲ್ಲಿ ಅರ್ಜಿಯನ್ನು ಕಂಪ್ಯೂಟರ್‌ನಲ್ಲಿ ಭರ್ತಿ ಮಾಡಿ ಪ್ರಿಂಟ್‌ಔಟ್ ಪಡೆದು ಕ್ಯೂಆರ್ ಕೋಡ್ ಹೊಂದಿದ ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಪ್ರಸ್ತುತ ವ್ಯಾಸಂಗದ ಹಿಂದಿನ ವರ್ಷದ ಅಂಕಪಟ್ಟಿ, ಸಿ.ಇಟಿ ಅಡ್ಮಿಷನ್ ಆರ್ಡರ್ ಪ್ರತಿ, ಆಧಾರ್ ಕಾರ್ಡ್, ಫೋಟೋ 4, ಸ್ಟಡಿ ಸರ್ಟಿಫಿಕೇಟ್, ಫೀ ಸ್ಟಕ್ಚರ್, ವಿದ್ಯಾರ್ಥಿಯ ಬ್ಯಾಂಕ್ ಖಾತಾ ವಿವರ ಈ ಎಲ್ಲಾ ದಾಖಲಾತಿಗಳನ್ನು ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ, 1ನೇ ಮಹಡಿ, ಮೌಲಾನ ಆಜಾದ್ ಭವನ, ಶೋಭಾ ಗಾರ್ಡನ್ ಪಕ್ಕ, ಭರತ್ ನಗರ, ಬೆಂಗಳೂರು-ಮೈಸೂರು ರಸ್ತೆ, ಮೈಸೂರು ಕಚೇರಿಗೆ ಸಲ್ಲಿಸಬಹುದು. ಮಾಹಿತಿಗೆ ದೂ.: 0821-2430080.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ...


ದಿ ಮೈಸೂರು ಸಿಟಿ ಗಾಂಧಿನಗರ ಆದಿಕರ್ನಾಟಕ ಅಭಿವೃದ್ಧಿ ಸಂಘದ ವತಿಯಿಂದ ಮೈಸೂರಿನ ಗಾಂಧಿನಗರದಲ್ಲಿರುವ ಸಂಘದ ಸಮುದಾಯ ಭವನದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು. ಈ ಸಂದರ್ಭದಲ್ಲಿ ಮಾಜಿ ಸಚಿವರೂ ಆದ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್, ದಿ ಮೈಸೂರು ಸಿಟಿ ಗಾಂಧಿನಗರ ಆದಿಕರ್ನಾಟಕ ಅಭಿವೃದ್ಧಿ ಸಂಘದ ಸದಸ್ಯ ಮೋಹನ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಕೆ.ವಿಶ್ವರಾಜ್, ಅಧ್ಯಕ್ಷ ಪಿ.ಶ್ರೀಕಂಠಮೂರ್ತಿ, ನಿವೃತ್ತ ಪ್ರಾಧ್ಯಾಪಕರಾದ ಡಿ.ಆನಂದ್, ಉಪಾಧ್ಯಕ್ಷ ಚೆಲುವರಾಜು ಹಾಗೂ ಸಂಘದ ನಿರ್ದೇಶಕರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಸಾಮೂಹಿಕ ಯೋಗಾಭ್ಯಾಸ


ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಯೋಗ ಶಿಕ್ಷಕಿಯರಾದ ಆಶಾದೇವಿ, ಸುಪ್ರಿಯಾ, ಹರಿಶ್ರೀ ಇನ್ನಿತರರು ಸಾಮೂಹಿಕ ಯೋಗಾಭ್ಯಾಸ ನಡೆಸಿದರು.

ಇಂದು ತ್ರೈಮಾಸಿಕ ಜನಸಂಪರ್ಕ ಸಭೆ

ಮೈಸೂರು ಜೂ.22– ವಿ.ವಿ ಮೊಹಲ್ಲಾ ವಿಭಾಗದ ಅಧೀಕ್ಷಕ ಇಂಜಿನಿಯರ್, ಕಾರ್ಯನಿರ್ವಾಹಕ ಇಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಕುಂದು ಕೊರತೆಗಳ ಬಗ್ಗೆ ಒಂದನೇ ತ್ರೈಮಾಸಿಕ ಜನ ಸಂಪರ್ಕ ಸಭೆಯನ್ನು ಜೂ.23 ಮತ್ತು 24 ರಂದು ವಿ.ವಿ ಮೊಹಲ್ಲಾ ಉಪ ವಿಭಾಗ ಕಚೇರಿಗಳಲ್ಲಿ ಏರ್ಪಡಿಸಲಾಗಿದೆ. ಸಭೆಯನ್ನು ಜೂ.23 ರಂದು ಬೆಳಿಗ್ಗೆ 11 ಗಂಟೆಗೆ ಹೂಟಗಳ್ಳಿ ಉಪವಿಭಾಗ ಕಚೇರಿ, ಸಂಜೆ 4 ಗಂಟೆಗೆ ವಿ.ವಿ ಮೊಹಲ್ಲಾ ಉಪವಿಭಾಗ ಕಚೇರಿ, ಜೂ.24 ರಂದು ಬೆಳಿಗ್ಗೆ 11 ಗಂಟೆಗೆ ಕುವೆಂಪುನಗರ ಉಪವಿಭಾಗ ಕಚೇರಿ ಹಾಗೂ ಸಂಜೆ 4 ಗಂಟೆಗೆ ಆರ್.ಕೆ.ನಗರ ಉಪ ವಿಭಾಗ ಕಚೇರಿಯಲ್ಲಿ ಏರ್ಪಡಿಸಲಾಗಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.


ಚಾಮುಂಡೇಶ್ವರಿ ಕ್ಷೇತ್ರದ ವತಿಯಿಂದ ಕೂರ್ಗಳ್ಳಿ ಸರ್ಕಾರಿ ಶಾಲಾ ಮೈದಾನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಈ ವೇಳೆ ಕ್ಷೇತ್ರದ ಅಧ್ಯಕ್ಷ ಪೈಲ್ವಾನ್ ರವಿ, ಹಿರಿಯ ಮುಖಂಡ ಎಸ್.ಆರ್.ಗೋಪಾಲರಾವ್, ಪ್ರಧಾನ ಕಾರ್ಯದರ್ಶಿ ಹೇಮಂತ್ ಅಪ್ಪಾಜಿಗೌಡ, ಕ್ಷೇತ್ರ ಉಪಾಧ್ಯಕ್ಷರಾದ ಸುನೀಲ್, ಹಿನಕಲ್ ಗಣೇಶ್, ಕೂರ್ಗಳ್ಳಿ ರೇವಣ್ಣ, ಕ್ಷೇತ್ರ ಕಾರ್ಯದರ್ಶಿಗಳಾದ ಶರತ್, ರಾಘವೇಂದ್ರ, ಹಿನಕಲ್ ಮಹಾ ಶಕ್ತಿ ಕೇಂದ್ರದ ಪ್ರಧಾನ ಕಾರ್ಯದರ್ಶಿ ನಾರಾಯಣ್, ಮಹಿಳಾ ಮೋರ್ಚಾ ಅಧ್ಯಕ್ಷೆ ಅನಿತಾ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸಂಪ್ರೀತ್ ಕೂರ್ಗಳ್ಳಿ, ಬೂತ್ ಅಧ್ಯಕ್ಷ ರವಿ, ಶಿಕ್ಷಕರ ತಂಡ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನೇಮಕ



ಮೈಸೂರು, ಜೂ. 22– ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರ ಸಭೆ, ಪುರ ಸಭೆಗಳ ಪೌರ ಕಾರ್ಮಿಕ ಮಹಾಸಂಘದ ನಂಜನಗೂಡು ತಾಲೂಕು ಘಟಕದ ಅಧ್ಯಕ್ಷರಾಗಿ ಎನ್.ಮಂಜುನಾಥ್ ಅವರನ್ನು ನೇಮಕ ಮಾಡಲಾಗಿದೆ.

ಮೈಸೂರು ವಾರಿಯರ್ಸ್‌ಗೆ ಮತ್ತೊಂದು ಸೋಲು; ಹುಬ್ಬಳ್ಳಿ ಟೈಗರ್ಸ್ ಶುಭಾರಂಭ



ಅನೀಶ್ವರ್ ಗೌತಮ್-ಮೊಹಮ್ಮದ್ ತಹಾ ಜೊತೆಯಾಟ.

ಮೈಸೂರು, ಜೂ.22(ವಿವಿಹೆಚ್)– ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದ ಹುಬ್ಬಳ್ಳಿ ಟೈಗರ್ಸ್ ತಂಡವು ಅತಿಥೇಯ ಮೈಸೂರು ವಾರಿಯರ್ಸ್ ವಿರುದ್ಧ 7 ವಿಕೆಟ್‌ಗಳ ಸುಲಭ ಗೆಲುವು ದಾಖಲಿಸುವ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ನಿನ್ನೆ ಕೋಸ್ಟಲ್ ಕಿಂಗ್ಸ್ ವಿರುದ್ಧ ನಡೆಯಬೇಕಿದ್ದ ಪಂದ್ಯ ಮಳೆಯಿಂದ ರದ್ದಾಗಿತ್ತು.

ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯೂ ಕ್ರೀಡಾಂಗಣದಲ್ಲಿ ಸೋಮವಾರ ನಡೆದ 'ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ನೀಡಿದ್ದ 161 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ 17.3 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 162ರನ್ ಕಲೆಹಾಕಿ ಗೆದ್ದುಬೀಗಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಅವಕಾಶ ಪಡೆದ ಮೈಸೂರು ಉತ್ತಮ ಆರಂಭ ಪಡೆಯಿತು. ಎಲ್.ಆರ್.ಚೇತನ್ 18(13), ಎಸ್.ಯು.ಕಾರ್ತಿಕ್ 37(25) ಹಾಗೂ ರಿತೇಶ್ ಭಟ್ಕಳ್ 46(28ಎ, 3ಬೌ, 3ಸಿ) 11.1 ಓವರ್‌ಗಳಲ್ಲಿ 102 ರನ್ ಪೇರಿಸಿದರು.

ಈ ಮೂವರ ನಂತರ ಮತ್ಯಾರಿಂದಲೂ ಸ್ಕೋರ್ ಹೆಚ್ಚಿಸುವ ಕೆಲಸ ಆಗಲಿಲ್ಲ. ಕೆ.ಪಿ.ಕಾರ್ತಿಕೇಯ 27(19) ಹೊರತುಪಡಿಸಿ ಮಧ್ಯಮ ಕ್ರಮಾಂಕ ದಿಢೀರ್ ಕುಸಿತ ಕಂಡಿತು. ಮನೋಜ್ ಭಂಡಗೆ 3(7), ಸಾಗರ್ ಗೌತಮ್ 6(6), ಮಧಾವ್ ಬಜಾಜ್ 1(2), ನಾಯಕ ವಿಜಯ್‌ಕುಮಾರ್ ವೈಶಾಖ್ ಹಾಗೂ ಯುವರಾಜ್ ಅರೋರಾ ಗೋಲ್ಡನ್ ಡಕ್ ಆದರು. ಕೊನೆಯಲ್ಲಿ ಬ್ಯಾಟಿಂಗ್ ಆಲ್‌ರೌಂಡರ್ ಕೆ.ಎಸ್.ಲಂಕೇಶ್ 16(13) ಅಲ್ಪ ಹೋರಾಟ ತೋರಿ ತಂಡದ ಮೊತ್ತ ನೂರೈವತ್ತರ ಗಡಿ ದಾಟಿಸಲು ಸಹಕರಿಸಿದರು. ಇದರೊಂದಿಗೆ ಮೈಸೂರು ತಂಡದ 19.2 ಓವರ್‌ಗಳಲ್ಲಿ ಸರ್ವಪತನ ಕಂಡು 161ರನ್ ಗಳಿಸಲಷ್ಟೆ ಶಕ್ತವಾಯಿತು.

ಹುಬ್ಬಳ್ಳಿ ಪರ ಹಾರ್ದಿಕ್ ರಾಜ್ ಹಾಗೂ ಎಲ್.ಆರ್. ಕುಮಾರ್ ತಲಾ 3 ವಿಕೆಟ್ ಪಡೆದು ಮಿಂಚಿದರು. ಶಿಖರ್ ಶೆಟ್ಟಿ ಹಾಗೂ ಮನ್ವಂತ್ ಕುಮಾರ್ ತಲಾ ಒಂದೊಂದು ವಿಕೆಟ್ ಪಡೆದರು.

ಎರಡನೇ ಇನ್ನಿಂಗ್ಸ್ ಆರಂಭಿಸಿದ ಹುಬ್ಬಳ್ಳಿ ಪರ ಪ್ರತೀಶ್ ಹಾಗೂ ಮೊಹಮ್ಮದ್ ತಹಾ ಇನ್ನಿಂಗ್ಸ್ ಆರಂಭಿಸಿದರು. ಪ್ರತೀಶ್ ಹಿಂಗ್ಲೆ ತಾವೆದುರಿಸಿದ ಎರಡನೇ ಎಸೆತದಲ್ಲಿಯೇ ವಿಕೆಟ್ ಒಪ್ಪಿಸಿದರು. ಇವರ ಬಳಿಕ ಬಂದ ಮಯಾಂಕ್ ಅಗರ್ವಾಲ್ 19(11) ಮಿಡ್ ಆನ್‌ಗೆ ಕ್ಯಾಚಿತ್ತು ಹೊರನಡೆದರು.

49 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಹುಬ್ಬಳ್ಳಿಗೆ ತಹಾ ಹಾಗೂ ಅನೀಶ್ವರ್ ಗೌತಮ್ ಆಸರೆಯಾದರು. ತಹಾ 38 ಎಸೆತಗಳಲ್ಲಿ 5 ಬೌಂಡರಿ 3 ಸಿಕ್ಸರ್ ಸಹಿತ 57 ರನ್ ಕಲೆಹಾಕಿ ಔಟಾದರೆ, ಅನೀಶ್ವರ್ 41 ಎಸೆತಗಳಲ್ಲಿ 2 ಬೌಂಡರಿ, 4 ಸಿಕ್ಸರ್ ಸಹಿತ ಅಜೇಯ 60 ರನ್ ಕಲೆಹಾಕಿ ತಂಡಕ್ಕೆ ಗೆಲುವು ತಂದುಕೊಟ್ಟರು. ಇವರಿಗೆ ಸಾಥ್ ನೀಡಿದ ಅಭಿನವ್ ಮನೋಹರ್ ಅಜೇಯ 16(15) ರನ್ ಗಳಿಸಿ ಸ್ಕ್ರೀಜ್‌ನಲ್ಲಿದ್ದರು.

ವಾರಿಯರ್ಸ್ ಪರ ಮಾಧವ್ ಬಜಾಜ್ 2 ವಿಕೆಟ್, ರಿತೇಶ್ ಭಟ್ಕಳ್ ಒಂದು ವಿಕೆಟ್ ಪಡೆದರು.

ನಿಕಿನ್ ಜೋಸ್ ಶತಕ; ಮಿಸ್ಟಿಕ್ಸ್ ಎದುರು ಕಿಂಗ್ಸ್‌ಗೆ 8 ವಿಕೆಟ್ ಜಯ



ಮೈಸೂರು, ಜೂ.22(ವಿವಿಹೆಚ್)– ಕರಾರುವಕ್ಕಾದ ಬೌಲಿಂಗ್ ದಾಳಿ ಹಾಗೂ ಚೇಸಿಂಗ್‌ನಲ್ಲಿ ನಿಕಿನ್ ಜೋಸ್ ಅಮರ ಅಜೇಯ ಶತಕದಾಟದ ಬಲದಿಂದ ಕೋಸ್ಟಲ್ ಕಿಂಗ್ಸ್ ಮಂಗಳೂರು, ಗುಲ್ಬರ್ಗಾ ಮಿಸ್ಟಿಕ್ಸ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿತು.

ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯೂ ಕ್ರೀಡಾಂಗಣದಲ್ಲಿ ಸೋಮವಾರ ನಡೆದ 'ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯ 6ನೇ ಪಂದ್ಯದಲ್ಲಿ ಗುಲ್ಬರ್ಗಾ ನೀಡಿದ್ದ 177ರನ್ ಬೆನ್ನತ್ತಿದ ಮಂಗಳೂರು ತಂಡಕ್ಕೆ ಆರಂಭಿಕ ನಿಕಿನ್ ಜೋಸ್ ಹಾಗೂ ನಾಯಕ ಕರುಣ್ ನಾಯರ್ ಬ್ಯಾಟಿಂಗ್‌ನಲ್ಲಿ ಬಲ ತಂದುಕೊಟ್ಟರು. ಈ ಜೋಡಿ 52 ಎಸೆತಗಳಲ್ಲಿ 96 ರನ್ ಕಲೆಹಾಕಿದರು..

ಕರುಣ್ ನಾಯರ್ 36 ಎಸೆತಗಳಲ್ಲಿ 56ರನ್ ಗಳಿಸಿ ಔಟಾದರೆ, ಜೋಸ್ ಅಜೇಯರಾಗಿ ಉಳಿದು 47 ಎಸೆತಗಳಲ್ಲಿ 7 ಬೌಂಡರಿ ಹಾಗೂ ಭರ್ಜರಿ 8 ಸಿಕ್ಸರ್ ಸಹಿತ 100 ರನ್ ಗಳಿಸಿ ತಂಡವನ್ನು ಗೆಲ್ಲಿಸಿಕೊಟ್ಟರು. ಇದು ಈ ಬಾರಿಯ ಟೂರ್ನಿಯಲ್ಲಿ ದಾಖಲಾದ ಮೊದಲ ಶತಕವೂ ಆಗಿದೆ. ಉಳಿದಂತೆ ಎಂ.ವೆಂಕಟೇಶ್ 9(8) ಹಾಗೂ ಸೂರಜ್ ಅಹುಜಾ ಅಜೇಯ 8(9) ರನ್ ಕಲೆಹಾಕಿದರು. ಇದರೊಂದಿಗೆ 16.3 ಓವರ್‌ಗಳಲ್ಲಿ ಕೇವಲ 2 ವಿಕೆಟ್ ನಷ್ಟಕ್ಕೆ 181ರನ್ ಗಳಿಸಿ ಗೆಲುವಿನ ನಗೆ ಬೀರಿತು. ಮಿಸ್ಟಿಕ್ಸ್ ಪರ ಆದಿತ್ಯಾ ನಾಯರ್ ಒಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಟಾಸ್ ಸೋತು ಇನ್ನಿಂಗ್ಸ್ ಆರಂಭಿಸಿದ ಗುಲ್ಬರ್ಗಾ ಮಿಸ್ಟಿಕ್ಸ್‌ಗೆ ನಾಯಕ ಮನೀಶ್ ಪಾಂಡೆ ಜವಾಬ್ದಾರಿಯುತ ಬ್ಯಾಟಿಂಗ್ ನೆರವಾಯಿತು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ನಿಂತು ಇನ್ನಿಂಗ್ಸ್ ಕಟ್ಟಿದ ಅವರು, ಕೇವಲ 34 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸ್ ಸಹಿತ 70 ರನ್ ಕಲೆಹಾಕಿದರು. ಇವರಿಗೆ ಸಾಥ್ ನೀಡಿದ ತಿಪ್ಪಾ ರೆಡ್ಡಿ 18 ಎಸೆತಗಳಲ್ಲಿ 25 ರನ್ ಗಳಿಸಿ ನಿರ್ಗಮಿಸಿದರು.

ಇನ್ನು ಆರಂಭಿಕರಾಗಿ ಕಣಕ್ಕಿಳಿದ ಬಿ.ಆರ್.ಶರತ್ 14(13), ಲೋಚನ್ ಗೌಡ 8(5), ಪ್ರಖರ್ ಚತುರ್ವೇದಿ 25(20) ರನ್ ಗಳಿಸಿದರೆ, ಮಧ್ಯಮ ಕ್ರಮಾಂಕದಲ್ಲಿ ಮ್ಯಾಕ್ನಿಲ್ 2(5), ಆರವ್ ಮಹೇಶ್ 4(6), ಧ್ರುವ್ ಪ್ರಭಾಕರ್ 22(14) ಹಾಗೂ ಕ್ರಾಂತಿ ಕುಮಾರ್ ಅಜೇಯ 1(2) ರನ್ ಕಲೆಹಾಕಿದರು. ಆ ಮೂಲಕ ಗುಲ್ಬರ್ಗಾ 19.5 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 177 ರನ್ ಗಳಿಸಿತು.

ಮೈಸೂರು ಮಿತ್ರ ಮಂಗಳವಾರ 23 ಜೂನ್ 2026

ಅಂತರಶಿಸ್ತೀಯ ಸಂಶೋಧನೆ ಆರೋಗ್ಯ ಕ್ಷೇತ್ರದ ಭವಿಷ್ಯ ರೂಪಿಸಲಿದೆ

ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಭಿಪ್ರಾಯ

ನಾಗಮಂಗಲ, ಜೂ.22– ಆಧುನಿಕ ಆರೋಗ್ಯ ಕ್ಷೇತ್ರದ ಸಂಕೀರ್ಣ ಸವಾಲುಗಳನ್ನು ಎದುರಿಸಲು ಅಂತರಶಿಸ್ತೀಯ ಸಹಯೋಗ ಮತ್ತು ಅನುವಾದ ಸಂಶೋಧನೆ ಅತ್ಯಗತ್ಯವಾಗಿದ್ದು, ಆರೋಗ್ಯ ವಿಜ್ಞಾನಗಳ ಭವಿಷ್ಯವು ವಿವಿಧ ವಿಭಾಗಗಳ ಜ್ಞಾನ ಮತ್ತು ತಂತ್ರಜ್ಞಾನಗಳ ಸಮನ್ವಯದಲ್ಲಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಪ್ರಾಯಿಸಿದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯ, ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಫಾರ್ ಮಾಲಿಕ್ಯುಲರ್ ಮೆಡಿಸಿನ್ ವತಿಯಿಂದ ತಾಲೂಕಿನ ಬಿಜಿಎಸ್ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ "ಅನುವಾದ ಸಂಶೋಧನೆಗಾಗಿ ಆರೋಗ್ಯ ವಿಜ್ಞಾನಗಳಲ್ಲಿ ಅಂತರಶಿಸ್ತೀಯ ವಿಧಾನಗಳು" ವಿಷಯದ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಐತಿಹಾಸಿಕ ಹಾಗೂ ಸಾಮಾಜಿಕ ಕೊಡುಗೆಗಳನ್ನು ಸ್ಮರಿಸಿದ ರಾಜ್ಯಪಾಲರು ಸುಮಾರು 1800 ವರ್ಷಗಳ ಇತಿಹಾಸ ಹೊಂದಿರುವ ಈ ಮಠವು ಶಿಕ್ಷಣ, ಆರೋಗ್ಯ, ಸಾಮಾಜಿಕ ಸಮಾನತೆ ಹಾಗೂ ರಾಷ್ಟ್ರ ನಿರ್ಮಾಣ ಕ್ಷೇತ್ರಗಳಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿದೆ ಎಂದರು.

71ನೇ ಪೀಠಾಧಿಪತಿಗಳಾಗಿದ್ದ ಪರಮ ಪೂಜ್ಯ ಡಾ.ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಶಿಕ್ಷಣ, ಆರೋಗ್ಯ ಹಾಗೂ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದ ಅವರು, ಪ್ರಸ್ತುತ ಪೀಠಾಧಿಪತಿಗಳಾದ ಜಗದ್ಗುರು ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ದಾರ್ಶನಿಕ ನಾಯಕತ್ವದಲ್ಲಿ ಸಂಸ್ಥೆಯು ಉನ್ನತ ಶಿಕ್ಷಣ, ವೈಜ್ಞಾನಿಕ ಸಂಶೋಧನೆ, ಆರೋಗ್ಯ ಸೇವೆ, ಕೌಶಲ್ಯಾಭಿವೃದ್ಧಿ ಮತ್ತು ಸಮುದಾಯ ಕಲ್ಯಾಣ ಕ್ಷೇತ್ರಗಳಲ್ಲಿ ಮತ್ತಷ್ಟು ಪ್ರಗತಿ ಸಾಧಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂದಿನ ಆರೋಗ್ಯ ಕ್ಷೇತ್ರದಲ್ಲಿ ಕ್ಯಾನ್ಸರ್, ಮಧುಮೇಹ, ಹೃದ್ರೋಗ, ಸಾಂಕ್ರಾಮಿಕ ರೋಗಗಳು ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳಂತಹ ಸವಾಲುಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಏಕಶಿಸ್ತೀಯ ವಿಧಾನಗಳಿಂದ ಪರಿಹಾರ ಸಾಧ್ಯವಿಲ್ಲ. ವೈದ್ಯಕೀಯ ವಿಜ್ಞಾನ, ಜೈವಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಜೈವಿಕ ಮಾಹಿತಿ ವಿಜ್ಞಾನ, ಸಾರ್ವಜನಿಕ ಆರೋಗ್ಯ ಹಾಗೂ ಎಂಜಿನಿಯರಿಂಗ್ ಕ್ಷೇತ್ರಗಳ ಪರಿಣಿತರ ಸಹಯೋ ಗದಿಂದ ಮಾತ್ರ ಪರಿಣಾಮಕಾರಿ ಪರಿಹಾರಗಳನ್ನು ಕಂಡುಹಿಡಿಯಲು ಸಾಧ್ಯ ಎಂದು ಹೇಳಿದರು.

ಕೃತಕ ಬುದ್ಧಿಮತ್ತೆ ಮತ್ತು ದೊಡ್ಡ ದತ್ತಾಂಶ ವಿಶ್ಲೇಷಣೆಯು ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಪರಿವರ್ತನೆ ತರಲಿದ್ದು, ಆರಂಭಿಕ ರೋಗನಿರ್ಣಯ, ಔಷಧ ಅಭಿವೃದ್ಧಿ ಹಾಗೂ ರೋಗ ಮುನ್ನರಿವು ಕ್ಷೇತ್ರಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ.



ಅನುವಾದ ಸಂಶೋಧನೆಗಾಗಿ ಆರೋಗ್ಯ ವಿಜ್ಞಾನಗಳಲ್ಲಿ ಅಂತರಶಿಸ್ತೀಯ ವಿಧಾನಗಳು ವಿಷಯದ ಮೇಲಿನ ಅಂತರರಾಷ್ಟ್ರೀಯ ಸಮ್ಮೇಳನವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಉದ್ಘಾಟಿಸಿದರು.

ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ವಿಜ್ಞಾನಿಗಳು, ವೈದ್ಯರು, ಜೈವಿಕ ತಂತ್ರಜ್ಞಾನ ತಜ್ಞರು, ಸಂಖ್ಯಾಶಾಸ್ತ್ರಜ್ಞರು ಮತ್ತು ನೀತಿ ನಿರೂಪಕರ ಸಾಮೂಹಿಕ ಪ್ರಯತ್ನದಿಂದ ದಾಖಲೆಯ ಅವಧಿಯಲ್ಲಿ ಲಸಿಕೆ ಅಭಿವೃದ್ಧಿಯಾಗಿರುವುದು ಅಂತರಶಿಸ್ತೀಯ ಸಂಶೋಧನೆಯ ಯಶಸ್ವಿ ಉದಾಹರಣೆ ಎಂದು ಅವರು ಹೇಳಿದರು.

ಆಯುರ್ವೇದ, ಯೋಗ ಮತ್ತು ಆಧುನಿಕ ವೈದ್ಯಕೀಯ ವಿಜ್ಞಾನಗಳ ಸಮನ್ವಯದ ಮೂಲಕ ಸಮಗ್ರ ಆರೋಗ್ಯ ಸೇವೆಗೆ ಹೊಸ ಸಾಧ್ಯತೆಗಳು ಮೂಡುತ್ತಿದ್ದು, ಇದು ಆರೋಗ್ಯ ಕ್ಷೇತ್ರವನ್ನು ಇನ್ನಷ್ಟು ಮಾನವೀಯ ಮತ್ತು ಪರಿಣಾಮಕಾರಿಯಾಗಿರಿಸಲಿದೆ. ಹೊಕ್ಕೈಡೋ ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ಅಂತರರಾಷ್ಟ್ರೀಯ ಸಂಸ್ಥೆಗಳ ವಿಜ್ಞಾನಿಗಳು ಹಾಗೂ ಸಂಶೋಧಕರು ಭಾಗವಹಿಸಿರುವುದು ಜಾಗತಿಕ ವೈಜ್ಞಾನಿಕ ಸಹಭಾಗಿತ್ವದ ಮಹತ್ವವನ್ನು ಪ್ರತಿಬಿಂಬಿಸುತ್ತದೆ ಎಂದು ತಿಳಿಸಿದರು.

ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಫಾರ್ ಮಾಲಿಕ್ಯುಲರ್ ಮೆಡಿಸಿನ್ ಕಳೆದ ಒಂದು ದಶಕದಲ್ಲಿ ಬಯೋಮೆಡಿಕಲ್ ಸಂಶೋಧನೆ, ಅನುವಾದ ವೈದ್ಯಕೀಯ, ಕ್ಯಾನ್ಸರ್ ಜೀವಶಾಸ್ತ್ರ, ಮಾಲಿಕ್ಯುಲರ್ ಡಯಾಗ್ನೋಸ್ಟಿಕ್ಸ್ ಹಾಗೂ ಆರೋಗ್ಯ ನಾವೀನ್ಯತೆ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿರುವುದನ್ನು ರಾಜ್ಯಪಾಲರು ಶ್ಲಾಘಿಸಿದರು.

ವೇದಿಕೆಯಲ್ಲಿ ಆದಿಚುಂಚನಗಿರಿ ಮಠಾಧೀಶ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್, ಶಾಸಕ ಎನ್.ಚಲುವರಾಯಸ್ವಾಮಿ, ಪ್ರಾಧ್ಯಾಪಕ ಕೆ.ಎನ್.ಗಣೇಶ್, ಕುಲಪತಿ ಡಾ.ಎಸ್.ಎನ್.ಶ್ರೀಧರ್, ಕುಲಸಚಿವ ಡಾ.ಸಿ.ಕೆ.ಸುಬ್ಬರಾಯ, ಪ್ರಾಧ್ಯಾಪಕ ಕೆ.ಎಸ್.ರಂಗಪ್ಪ, ಜಪಾನ್‌ನ ಪ್ರಾಧ್ಯಾಪಕ ಶಿನ್–ಇಚಿರೊ ನಿಶಿಮುರಾ, ಎಐಎಂಎ ನಿರ್ದೇಶಕ ಡಾ.ಶೋಬಿತ್ ಸೇರಿದಂತೆ ದೇಶ–ವಿದೇಶಗಳ ವಿಜ್ಞಾನಿಗಳು, ಸಂಶೋಧಕರು, ಶಿಕ್ಷಣ ತಜ್ಞರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪ್ರತ್ಯೇಕ ಪ್ರಕರಣ: ಯುವಕರಿಬ್ಬರು ಜಲ ಸಮಾಧಿ

ಹಲಗೂರು: ಪ್ರತ್ಯೇಕ ಪ್ರಕರಣಗಳಲ್ಲಿ ಈಜಲು ನೀರಿಗೆ ಇಳಿದ ಯುವಕರಿಬ್ಬರು ಸಾವನ್ನಪ್ಪಿರುವ ಘಟನೆ ವರದಿಯಾಗಿದೆ. ಸಮೀಪದ ಮುತ್ತತ್ತಿ ಕಾವೇರಿ ನದಿಯಲ್ಲಿ ಈಜಾಡುತ್ತಿದ್ದ ವೇಳೆ ನೀರಿನ ಸುಳಿಗೆ ಸಿಲುಕಿ ಯುವಕನೊಬ್ಬ ಮೃತಪಟ್ಟ ಘಟನೆ ಭಾನುವಾರ ನಡೆದಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿ ತಾಲೂಕಿನ ಮಾದೇಗೌಡನದೊಡ್ಡಿ ಗ್ರಾಮದ ನಿವಾಸಿ ಚಂದ್ರು ಅವರ ಪುತ್ರ ಅರುಣ್ ಕುಮಾರ್ (23) ಮೃತ ವ್ಯಕ್ತಿ. ಅರುಣ್ ಕುಮಾರ್ ಬೆಂಗಳೂರಿನಲ್ಲಿ ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದು, ಜೂನ್ 21ರಂದು ತನ್ನ ಒಂಬತ್ತು ಮಂದಿ ಸ್ನೇಹಿತರೊಂದಿಗೆ ಮುತ್ತತ್ತಿಗೆ ಪ್ರವಾಸಕ್ಕೆ ಬಂದಿದ್ದರು.

ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ಮಧ್ಯಾಹ್ನ ಕಾವೇರಿ ನದಿಯಲ್ಲಿ ಈಜಲು ಇಳಿದಾಗ ಆಕಸ್ಮಿಕವಾಗಿ ನೀರಿನ ಸುಳಿಗೆ ಸಿಲುಕಿ ಮೃತಪಟ್ಟಿದ್ದಾರೆ.

ನುರಿತ ಈಜುಗಾರರ ಸಹಾಯದಿಂದ ಭಾನುವಾರ ರಾತ್ರಿ ಮೃತದೇಹವನ್ನು ನದಿಯಿಂದ ಹೊರತೆಗೆದಿದ್ದಾರೆ. ಈ ಕುರಿತು ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಹಲಗೂರು ಬಳಿ ದುರಂತ



ಅರುಣ್ ಕುಮಾರ್ | ಸೌರಭ್ ಜೈಸ್ವಾಲ್

ಜಲಪಾತದಲ್ಲಿ ಯುವಕ ಸಾವು: ಹಲಗೂರು ಸಮೀಪದ ಗಾಣಾಳು ಜಲಪಾತದಲ್ಲಿ ಈಜಲು ಇಳಿದಿದ್ದ ಯುವಕನೊಬ್ಬ ನೀರಿನ ಮಡುವಿನಲ್ಲಿ ಸಿಲುಕಿ ಮೃತಪಟ್ಟಿದ್ದಾರೆ.

ಮೃತರನ್ನು ಉತ್ತರ ಪ್ರದೇಶದ ವಾರಾಣಸಿ ಮೂಲದ ಚೋಟೆ ಲಾಲ್ ಜೈಸ್ವಾಲ್ ಅವರ ಪುತ್ರ ಸೌರಭ್ ಜೈಸ್ವಾಲ್ (29) ಎಂದು ಗುರುತಿಸಲಾಗಿದೆ. ಅವರು ಬೆಂಗಳೂರಿನ ಬೆಳ್ಳಂದೂರಿನ ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಡೆವಲಪರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.

ಸೌರಭ್ ಜೈಸ್ವಾಲ್ ತನ್ನ ಇಬ್ಬರು ಸ್ನೇಹಿತರೊಂದಿಗೆ ಪ್ರವಾಸಕ್ಕೆಂದು ಹಲ ಗೂರು ಸಮೀಪದ ಗಾಣಾಳು ಜಲಪಾತಕ್ಕೆ ಆಗಮಿಸಿದ್ದರು. ಜಲಪಾತಕ್ಕೆ ಸಾರ್ವಜನಿಕರ ಪ್ರವೇಶ ನಿಷೇಧವಾಗಿದ್ದರೂ, ಗೇಟ್ ಮೇಲಿಂದ ಹಾರಿ ಒಳಗೆ ಪ್ರವೇಶಿಸಿರುವುದಾಗಿ ತಿಳಿದುಬಂದಿದೆ. ಶಕುನಿ ದೊಡ್ಡಿ ಬಳಿ ವಾಹನ ನಿಲ್ಲಿಸಿ ಕಾಲ್ನಡಿಗೆಯಲ್ಲಿ ಜಲಪಾತ ತಲುಪಿದ್ದಾರೆ. ಜಲ ಪಾತದ ನೀರಿನಲ್ಲಿ ಈಜಲು ಇಳಿದ ವೇಳೆ ಸೌರಭ್ ನೀರಿನ ಮಡುವಿನಲ್ಲಿ ಸಿಲುಕಿ ಮುಳುಗಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಪೊಲೀಸರು ಹಾಗೂ ಅಗ್ನಿಶಾಮಕ ದಳ ಶನಿವಾರ ಸಂಜೆ 4 ಗಂಟೆಗೆ ಶೋಧ ಕಾರ್ಯ ಆರಂಭಿಸಿದರು. ರಾತ್ರಿ ಸುಮಾರು 10.30ಕ್ಕೆ ಮೃತದೇಹವನ್ನು ಜಲಪಾತದಿಂದ ಹೊರತೆಗೆದರೂ, ಮುಳ್ಳುಗಿಡಗಳು ಮತ್ತು ಕಲ್ಲುಬಂಡೆಗಳ ನಡುವಿನ ಕಡಿದಾದ ದಾರಿಯಲ್ಲಿ ಮೇಲಕ್ಕೆ ಸಾಗಿಸಲು ಸವಾಲು ಎದುರಾಯಿತು. ಅಂತಿಮವಾಗಿ ರಾತ್ರಿ 2 ಗಂಟೆಗೆ ಮೃತದೇಹವನ್ನು ಮೇಲಕ್ಕೆ ತರಲಾಯಿತು.

ಕಾರ್ಯಾಚರಣೆಯಲ್ಲಿ ಮಂಡ್ಯ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಬಿ.ಎಂ. ರಾಘವೇಂದ್ರ, ಮಳವಳ್ಳಿ ಸಹಾಯಕ ಅಗ್ನಿಶಾಮಕ ಅಧಿಕಾರಿ ಪಿ.ಹೇಮಂತ್ ಕುಮಾರ್, ಹಲಗೂರು ಪಿಎಸ್ಐ ಲೋಕೇಶ್ ಹಾಗೂ ಅಗ್ನಿಶಾಮಕ ಸಿಬ್ಬಂದಿ ನಾಗೇಶ್, ಮೋಹನ್, ದಶರಥ, ನೀಲಕಂಠ, ಪ್ರವೀಣ್ ಬಾಳೇಗೌಡ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಸಾವು

ಹಲಗೂರು: ಎರಡು ಬೈಕ್‌ಗಳ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಬೈಕ್ ಸವಾರ ಚಿಕಿತ್ಸೆ ಫಲಕಾರಿ ಯಾಗದೆ ಸೋಮವಾರ ಮೃತಪಟ್ಟಿದ್ದಾರೆ.



ಕೊನ್ನಾಪುರ ಗ್ರಾಮದ ಲೇಟ್ ಯಾಲಕ್ಕಿಗೌಡರ ಪುತ್ರ ನಾರಾಯಣಗೌಡ (73) ಮೃತಪಟ್ಟವರು.

ಜೂನ್ 19ರಂದು ಕಾರ್ಯ ನಿಮಿತ್ತ ಮಳವಳ್ಳಿಗೆ ತೆರಳಿದ್ದ ನಾರಾಯಣಗೌಡ ಅವರು ಹಲಗೂರು ಕಡೆಗೆ ಬೈಕಿನಲ್ಲಿ ಹಿಂತಿರುಗುತ್ತಿದ್ದ ವೇಳೆ ತೊರೆಕಾಡನಹಳ್ಳಿ ಗ್ರಾಮದ ಬಳಿ ಇರುವ ರಾಮಾಂಜನೇಯ ಹೋಟೆಲ್ ಸಮೀಪ ಹಿಂದಿನಿಂದ ಬಂದ ಮತ್ತೊಂದು ಬೈಕ್ ಡಿಕ್ಕಿ ಹೊಡೆದ ಪರಿಣಾಮ ಅಪಘಾತ ಸಂಭವಿಸಿದೆ.

ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡ ಅವರನ್ನು ತಕ್ಷಣ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಅವರು ಮೃತಪಟ್ಟಿದ್ದಾರೆ.

ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಕೇಗೌಡರ ಪುಸ್ತಕಗಳಿಗೆ ಸೂಕ್ತ ಜಾಗ ಕಲ್ಪಿಸಿ



ಬೆಂಗಳೂರು: ಪದ್ಮಶ್ರೀ ಪುರಸ್ಕೃತ, ಪುಸ್ತಕ ಪ್ರೇಮಿ ಎಂದು ಹೆಸರಾಗಿರುವ ಎಂ.ಅಂಕೇಗೌಡ ಅವರ ಸಂಗ್ರಹದಲ್ಲಿರುವ 20 ಲಕ್ಷಕ್ಕೂ ಹೆಚ್ಚಿನ ಪುಸ್ತಕಗಳಿಗೆ ಸೂಕ್ತ ಜಾಗ ಹುಡುಕಿ, ಸುಸಜ್ಜಿತ ಕಟ್ಟಡ ವ್ಯವಸ್ಥೆ ಮಾಡಬೇಕು ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೆ ಸೂಚನೆ ನೀಡಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಸೋಮವಾರ ಭೇಟಿ ಮಾಡಿದ ಅಂಕೇಗೌಡ ಪುಸ್ತಕಗಳಿಗೆ ಸೂಕ್ತ ವ್ಯವಸ್ಥೆಗೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಶ್ರೀಯುತರನ್ನು ಸಿಎಂ ಸನ್ಮಾನಿಸಿದರು.

ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ 'ಅಂಕೇಗೌಡ ಜ್ಞಾನ ಪ್ರತಿಷ್ಠಾನ'ದ ಮೂಲಕ ಬರೋಬ್ಬರಿ 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ. ಮುಖ್ಯಮಂತ್ರಿಗಳ ಬಳಿ ಮನವಿ ಮಾಡಿದ ಅಂಕೇಗೌಡರು "ದೇಶದ ಅತಿದೊಡ್ಡ ಪರ್ಸನಲ್ ಲೈಬ್ರರಿ ಇದಾಗಿದ್ದು, ನೀವು ಸೂಕ್ತ ಕಟ್ಟಡ ವ್ಯವಸ್ಥೆ ಮಾಡಿದರೆ ಮಕ್ಕಳಿಗೆ ಅರಿವಿನ ತಾಣವಾಗಿ ಮಾರ್ಪಾಡಾಗಲಿದೆ. ಸಂಗ್ರಹದಲ್ಲಿರುವ ಅಪರೂಪದ ಪುಸ್ತಕಗಳು ಅತ್ಯುತ್ತಮ ದಾಖಲೆಗಳು ಎಂದು ಹೇಳಿದರು.

ಇದೇ ವೇಳೆ ತಮ್ಮ ಬಳಿ ಇರುವ ಅಪರೂಪದ ನಾಣ್ಯಗಳು, ಅಂಚೆ ಚೀಟಿಗಳನ್ನು ಮುಖ್ಯಮಂತ್ರಿಯವರಿಗೆ ತೋರಿಸಿ ಅದರ ಬಗ್ಗೆ ವಿವರಣೆ ನೀಡಿದರು. ಅಪರೂಪದ ವಸ್ತುಗಳನ್ನು ಸಿಎಂ ಡಿ.ಕೆ.ಶಿವಕುಮಾರ್ ಅವರು ಕುತೂಹಲದಿಂದ ವೀಕ್ಷಿಸಿದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಇದ್ದರು.

ಖಾಸಗೀಕರಣ ವಿರೋಧಿಸಿ ನೌಕರರ ಪ್ರತಿಭಟನೆ

ಕೆ.ಆರ್.ಪೇಟೆ: ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ನಿಗಮಗಳನ್ನು ಹಾಗೂ ಕೆಪಿಟಿಸಿಎಲ್ ಇಲಾಖೆಯನ್ನು ಖಾಸಗೀಕರಣ ಮಾಡಬಾರದು. ಸರ್ಕಾರಿ ಸ್ವಾಮ್ಯದಲ್ಲಿಯೇ ಮುಂದುವರೆಸಬೇಕು ಎಂದು ಆಗ್ರಹಿಸಿ ತಾಲೂಕು ಕೆಪಿಟಿಸಿಎಲ್ ನೌಕರರ ಯೂನಿಯನ್ ಹಾಗೂ ಚೆಸ್ಕಾಂ ಸಂಸ್ಥೆಯ ನೂರಾರು ನೌಕರರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಕೆಪಿಟಿಸಿಎಲ್ ಕೆ.ಆರ್.ಪೇಟೆ ಉಪವಿಭಾಗದ ಕಾರ್ಯಪಾಲಕ ಇಂಜಿನಿಯರ್ ಶ್ರೀನಿವಾಸನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಿ.ಪುಟ್ಟಸ್ವಾಮಿಗೌಡ, ಜಿಲ್ಲಾ ರೈತ ಸಂಘದ ಮಾಜಿ ಅಧ್ಯಕ್ಷ ಎಂ.ವಿ.ರಾಜೇಗೌಡ ಮತ್ತಿತರರ ನೇತೃತ್ವದಲ್ಲಿ ಪಟ್ಟಣದ ಚೆಸ್ಕಾಂ ವಿಭಾಗೀಯ ಕಚೇರಿಯ ಆವರಣದಿಂದ ಪ್ರತಿಭಟನಾ ಮೆರವಣಿಗೆಯನ್ನು ಆರಂಭಿಸಿದ ನೂರಾರು ವಿದ್ಯುತ್ ನೌಕರರು, ಇಂಜಿನಿಯರ್ಸ್ ಯೂನಿಯನ್ ಪದಾಧಿಕಾರಿಗಳು ಕೇಂದ್ರ ಸರ್ಕಾರವು ಯಾವುದೇ ಕಾರಣಕ್ಕೂ ವಿದ್ಯುತ್ ಇಲಾಖೆಯನ್ನು ಖಾಸಗೀಕರಣಗೊಳಿಸಬಾರದು. ಖಾಸಗೀಕರಣ ಮಾಡಿದರೆ ನೇರವಾಗಿ ರೈತರಿಗೆ ತೀವ್ರ ತೊಂದರೆಯಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನಂತರ ತಹಸೀಲ್ದಾರ್ ಡಾ.ಎಸ್.ಯು. ಅಶೋಕ್ ಅವರಿಗೆ ಮನವಿ ಸಲ್ಲಿಸಿದರು.

ಒಂದನೇ ಪುಟದಿಂದ

ಮ್ಯಾನೇಜ್ಮೆಂಟ್, ಪೇಮೆಂಟ್ ಕೋಟಾ!!

ಸಿಎಂ ಡಿಕೆಶಿ ವಸೂಲಿ ಮಾಡುತ್ತಿದ್ದಾರೆ. ಹೈಕಮಾಂಡ್ ಗೆ ಕೊಡಬೇಕು ಎಂದು ಶಾಸಕರಿಂದ ಹಣ ಪೀಕುತ್ತಿ ರುವ ಮಾಹಿತಿ ಇದೆ. ಮ್ಯಾನೇಜ್‌ಮೆಂಟ್ ಕೋಟಾಕ್ಕೆ ಶೇಕಡ 5%, ಪೇಮೆಂಟ್ ಕೋಟಾಕ್ಕೆ 95% ಸೀಟುಗಳನ್ನು ನಿಗದಿಪಡಿಸಲಾಗಿದೆ ಎಂದು ಅವರು ಹೇಳಿದರು.

ಇಂತಹ ಪೇಮೆಂಟ್ ಸೀಟುಗಳನ್ನು ಪಡೆಯಲು ಯಾರು ಅರ್ಹರಿರುತ್ತಾರೋ ಅಂತಹವರು ಮಾತ್ರ ಮಂತ್ರಿಯಾಗಲು ಸಾಧ್ಯ ಎಂದು ಕುಮಾರಸ್ವಾಮಿ ಅವರು ವ್ಯಂಗ್ಯವಾಡಿದರು. ಹಾಗಾಗಿಯೇ ಹಾಕೆ ಸಂಪುಟ ವಿಸ್ತರಣೆ ವಿಳಂಬವಾಗುತ್ತಿದೆ ಎಂದು ಅವರು ಹೇಳಿದರು. ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವುದಕ್ಕೆ ಸರ್ಕಾರಿ ಮತ್ತು ಮ್ಯಾನೇಜ್ ಮೆಂಟ್ ಕೋಟಾ ಎಂದು ಇರುತ್ತದೆ. ಆ ಬಗ್ಗೆ ನಾನು ಕೇಳಿದ್ದೇನೆ. ಆದರೆ ಕರ್ನಾಟಕದಲ್ಲಿ ಸಂಪುಟ ಸೇರ್ಪಡೆಗೆ ಹೈಕಮಾಂಡ್ ಕೋಟಾ, ಮ್ಯಾನೇಜ್ಮೆಂಟ್ ಕೋಟಾ ಎಂದು ಶುರುವಾಗಿದೆ. ಮಂತ್ರಿ ಆಗಬೇಕಾದರೆ ಕಾಸು ಕೊಡಬೇಕು. ಎಲ್ಲಿಂದ ವಸೂಲಿ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.

ಓಸಿ ನಿಯಮದಿಂದ ಒಮ್ಮೆ ವಿನಾಯಿತಿ

ವಿನಾಯಿತಿ ಪ್ರಮುಖ ಮಾರ್ಗಸೂಚಿಗಳು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿ, ರಾಜ್ಯದಲ್ಲಿನ ಮಹಾನಗರ ಪಾಲಿಕೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ವ್ಯಾಪ್ತಿ ಸೇರಿದಂತೆ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಪ್ರಕಟಿಸಲಾಗಿದೆ.

ಕಟ್ಟಡದ ವಿಸ್ತೀರ್ಣ ಮತ್ತು ಮಿತಿ: 2400 ಚದರ ಅಡಿಗಳವರೆಗೆ (+20% ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ಅಳತೆಯ ನಿವೇಶನಗಳಲ್ಲಿ ನಿರ್ಮಿಸಲಾಗಿರುವ ಜಿ+3 (ಉ+3) ಅಂತಸ್ತಿನ ವಸತಿ ಕಟ್ಟಡಗಳು ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳನ್ನು ಹೊಂದಿರುವ ವಸತಿ ಕಟ್ಟಡಗಳಿಗೆ ಮಾತ್ರ ಈ ವಿನಾಯಿತಿ ಅನ್ವಯಿಸುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ಅವಕಾಶ: ಈ ಆದೇಶ ಹೊರಡಿಸಿದ ದಿನಾಂಕದಿಂದ ಅಂದರೆ ಜೂನ್ 22, 2026 ರಿಂದ ಮುಂದಿನ 15 ದಿನಗಳವರೆಗೆ ಮಾತ್ರ ಹೊಸದಾಗಿ ಶಾಶ್ವತ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ.

ಗ್ರಾಮೀಣ ಪ್ರದೇಶ ಮತ್ತು ರೈತರಿಗೆ ವಿಶೇಷ ಸವಲತ್ತು: ಗ್ರಾಮೀಣ ಭಾಗದ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಸರ್ಕಾರ ಮತ್ತೊಂದು ಪ್ರಮುಖ ನಿರ್ಧಾರ ಕೈಗೊಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ರೈತರ ವಾಸಕ್ಕೆ ಬಳಸುವ ಮನೆಗಳು ಹಾಗೂ ಕೃಷಿ ಪೂರಕ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣಪತ್ರ (OC) ಪಡೆಯುವುದರಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

ರೈತರು ವಾಸಿಸುವ ಮನೆ ಮತ್ತು ತೋಟದ ಮನೆ, ಕೃಷಿ ಉಪಕರಣಗಳನ್ನು ಇಡುವ ಮನೆ, ದನದ ಕೊಟ್ಟಿಗೆ ಹಾಗೂ ರೇಷ್ಮೆ ಗೂಡಿನ ಮನೆಗಳಿಗೆ ವಿನಾಯಿತಿ ನೀಡಲಾಗಿದೆ. ಈ ಆದೇಶದ ಅನ್ವಯ ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ಸಾರ್ವಜನಿಕರಿಗೆ ವಿದ್ಯುತ್ ಸಂಪರ್ಕ ನೀಡಲು ಅನುಸರಿಸಬೇಕಾದ ಸಾಮಾನ್ಯ ಮಾರ್ಗಸೂಚಿಗಳನ್ನು ಇಂಧನ ಇಲಾಖೆಯು ಪ್ರತ್ಯೇಕವಾಗಿ ಶೀಘ್ರದಲ್ಲೇ ಹೊರಡಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಯುವತಿ ತಂದೆ–ತಾಯಿಯೊಂದಿಗೆ ವಿಷ ಸೇವಿಸಿ ಆತ್ಮಹತ್ಯೆ

ಆ ಎರಡೂ ಕುಟುಂಬಗಳ ನಿರ್ಧಾರದಂತೆ ಜೂ.25 ಮತ್ತು 26ರಂದು ರಕ್ಷಿತಾ ವಿವಾಹ ನಿಗದಿಯಾಗಿತ್ತು. ಆದರೆ, ಉಲ್ಲಾಸ್‌ಗೌಡ ಯುವತಿಗೆ ಪದೇ ಪದೆ ಕರೆ ಮಾಡಿ, ಆಕೆಯ ವಿವಾಹಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದ. ಅಲ್ಲದೆ, ತನ್ನನ್ನೇ ಮದುವೆಯಾಗುವಂತೆ ಪೀಡಿಸುತ್ತಿದ್ದನು. ವಿಷಯ ತಿಳಿದ ಇದರಿಂದ ಆಘಾತಗೊಂಡ ರಕ್ಷಿತಾ ಪೋಷಕರು ಗ್ರಾಮದ ಮುಖಂಡರ ಗಮನಕ್ಕೆ ತಂದು ನ್ಯಾಯ ಪಂಚಾಯ್ತಿ ಮಾಡಿಸಿದ್ದಾರೆ. ಕಳೆದ 10 ದಿನದಿಂದ ಎರಡು ಸಮುದಾಯದ ಮುಖಂಡರು ರಾಜಿ ಪಂಚಾಯಿತಿ ಮಾಡಿ, ಯಾವುದೇ ಕಾರಣಕ್ಕೂ ಯುವತಿಗೆ ಕಿರುಕುಳ ನೀಡುವುದನ್ನು ಮುಂದುವರೆಸಬಾರದೆಂದು ತಾಕೀತು ಮಾಡಿದ್ದಾರೆ.

ಇದಕ್ಕೆ ಸಮ್ಮತಿಸಿದ್ದ ಉಲ್ಲಾಸ್‌ಗೌಡ, ಭಾನುವಾರ ಮತ್ತೆ ಕರೆ ಮಾಡಿ ಮದುವೆ ತಿರಸ್ಕರಿಸುವಂತೆ ಹೇಳಿದ್ದಾನೆ. ನನ್ನ ಮಾತು ಧಿಕ್ಕರಿಸಿ ಮದುವೆ ಕಾರ್ಯ ಮುಂದುವರೆಸಿದರೆ ಮದುವೆ ಮಂಟಪಕ್ಕೆ ಬಂದು ಎಲ್ಲರಿಗೂ ವಿಷಯ ಹೇಳುವುದಾಗಿ ಬೆದರಿಕೆ ಹಾಕಿದ್ದಾನೆ. ಮದುವೆಗೆ ಕೇವಲ ನಾಲ್ಕು ದಿನ ಇದ್ದಾಗಲೇ ಮತ್ತೆ ಬೆದರಿಕೆ ಹಾಕಿದ್ದನ್ನು ಗಂಭೀರವಾಗಿ ತೆಗೆದುಕೊಂಡ ರಕ್ಷಿತಾ ಕುಟುಂಬ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದೆ.

ರಾತ್ರಿಯೂ ನ್ಯಾಯ ಪಂಚಾಯ್ತಿ: ಭಾನುವಾರ ರಾತ್ರಿವರೆಗೂ ರಾಜಿ ಪಂಚಾಯಿತಿ ಮಾಡಿ, ಯುವಕನಿಗೆ ಗ್ರಾಮದ ಮುಖಂಡರು ಬುದ್ದಿ ಹೇಳಿದ್ದಾರೆ. ಹಾಗಾಗಿ ಎರಡೂ ಕುಟುಂಬದ ಸದಸ್ಯರು ತಮ್ಮ ತಮ್ಮ ಮನೆಗೆ ಹಿಂದಿರುಗಿದ್ದಾರೆ.



ಸ್ಥಳಕ್ಕೆ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿ ಪರಿಶೀಲಿಸಿದರು.

ಹೊಸ ಮನೆಯಲ್ಲೇ ವಿಷ ಸೇವನೆ: ಶಿವಣ್ಣ ಅವರಿಗೆ ಹಳೆ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಹಳೆ ಮನೆಯಿದ್ದು, ಗ್ರಾಮದ ಹೊರಗೆ ಹೊಸ ಮನೆ ನಿರ್ಮಿಸಿದ್ದಾರೆ. ಗೃಹ ಪ್ರವೇಶಕ್ಕೆ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಬ್ಲಾಕ್‌ಮೇಲ್, ಕಿರುಕುಳ, ಬೆದರಿಕೆಯಿಂದ ಜಿಗುಪ್ಸೆಗೊಂಡು ಕುಟುಂಬ ಸಾಯಲು ನಿರ್ಧರಿಸಿದ್ದಾರೆ. ಭಾನುವಾರ ರಾತ್ರಿ ಹಳೆ ಮನೆಯಿಂದ ಹೊಸ ಮನೆಗೆ ಬಂದಿದ್ದಾರೆ. ಅಲ್ಲಿ ಡೆತ್‌ನೋಟ್ ಬರೆದು ಮಂಚದ ಮೇಲೆ ಇಟ್ಟಿದ್ದಾರೆ. ಬಳಿಕ ವಿಷ ಸೇವಿಸಿ ಮೂವರು ಮಲಗಿದ್ದಾರೆ.

ಮದುವೆ ಸಂಭ್ರಮದ ಮನೆಯಲ್ಲಿ ನಾಪತ್ತೆ

ಮದುವೆ ಸಂಭ್ರಮದಲ್ಲಿರಬೇಕಾದ ಶಿವಣ್ಣ ಕುಟುಂಬ ಸದಸ್ಯರು ಬೆಳಗ್ಗೆ 11.30 ಗಂಟೆಯಾದರೂ ಹಳೆ ಮನೆ ಬಳಿ ಕಾಣಿಸಲಿಲ್ಲ ಸಂಬಂಧಿಕರು ಹಾಗೂ ಗ್ರಾಮಸ್ಥರು ಅನುಮಾನ ಗೊಂಡು ಹಳೆ ಮನೆ ಒಳಗೆ ಹೋಗಿ ನೋಡಿದಾಗ ಅಲ್ಲಿ ಯಾರು ಇರಲಿಲ್ಲ. ಬಳಿಕ ಗ್ರಾಮದ ಹೊರಭಾಗದಲ್ಲಿರುವ ಹೊಸ ಮನೆಗೆ ಹೋಗಿ ನೋಡಿದರೆ ಮೂವರು ಮೃತಪಟ್ಟಿರುವುದು ಕಂಡು ಬಂದಿದೆ. ಶಿವಣ್ಣ ಮತ್ತು ನಾಗರತ್ನ ಅವರು ರೂಮ್‌ನಲ್ಲಿ ನೆಲದ ಮೇಲೆ ಮಲಗಿರುವ ಸ್ಥಿತಿಯಲ್ಲಿದ್ದರೆ, ರಕ್ಷಿತ ಮೃತದೇಹ ಅದೇ ರೂಮಿನ ಅಟ್ಯಾಚ್ ಬಾತ್‌ರೂಮ್ ಬಾಗಿಲ ಬಳಿ ಬಿದ್ದಿತ್ತು. ಮಂಚದ ಮೇಲೆ ಡೆತ್‌ನೋಟ್ ಪತ್ತೆಯಾಗಿದೆ. ವಿಷಯ ತಿಳಿಯುತ್ತಿದ್ದಂತೆ ಗ್ರಾಮಸ್ಥರು, ಮೃತರ ಸಂಬಂಧಿಕರು ಹೊಸ ಮನೆಯತ್ತ ದೌಡಾಯಿಸಿ, ಮುಮ್ಮಲ ಮರುಗಿದ್ದಾರೆ.

ಸ್ಥಳಕ್ಕೆ ಎಸ್ಪಿ ಭೇಟಿ: ವಿಷಯ ತಿಳಿಯುತ್ತಿದ್ದಂತೆ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಘಟನಾ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಈ ವೇಳೆ ಡಿವೈಎಸ್ಪಿ ಧರ್ಮೇಂದ್ರ, ತಿ.ನರಸೀಪುರ ಠಾಣೆಯ ಇನ್ಸ್‌ಪೆಕ್ಟರ್ ಧನಂಜಯ, ಸಬ್‌ಇನ್ಸ್‌ಪೆಕ್ಟರ್ ಮಲ್ಲೇಶ್, ಪಿಎಸ್ಐ ಮಹದೇವ ಹಾಗೂ ಇನ್ನಿತರರು ಘಟನೆ ಸಂಬಂಧ ಮಾಹಿತಿ ನೀಡಿದರು.

ಶವಗಳ ಸ್ಥಳಾಂತರಕ್ಕೆ ವಿರೋಧ: ಎಸ್ಪಿಯವರು ಪರಿಶೀಲಿಸಿ ಮನೆ ಒಳಗಿಂದ ಹೊರಗೆ ಬರುತ್ತಿದ್ದಂತೆ ನೆರೆದಿದ್ದ ಉದ್ರಿಕ್ತ ಗ್ರಾಮಸ್ಥರು ಡೆತ್‌ನೋಟ್ ಆಧಾರದಲ್ಲಿ ಆರೋಪಿ ಉಲ್ಲಾಸ್‌ಗೌಡನನ್ನು ಬಂಧಿಸಬೇಕು. ಮೂವರ ಸಾವಿಗೆ ಕಾರಣನಾದ ಆರೋಪಿಯನ್ನು ಬಂಧಿಸುವವರೆಗೂ ಮೃತದೇಹ ಸ್ಥಳಾಂತರ ಮಾಡದಂತೆ ಬಿಗಿಪಟ್ಟು ಹಾಕಿದರು. ಗ್ರಾಮಸ್ಥರ ಮನವೊಲಿಸಲು ಪೊಲೀಸರು ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಸುತ್ತಮುತ್ತಲಿನ ಗ್ರಾಮಸ್ಥರೂ ಸ್ಥಳಕ್ಕೆ ಆಗಮಿಸಿ ಅಮಾಯಕರ ಸಾವಿಗೆ ಕಾರಣನಾದ ಆರೋಪಿಯನ್ನು ಬಂಧಿಸಬೇಕು. ಪೊಲೀಸರು ಒತ್ತಡಕ್ಕೆ ಒಳಗಾಗದೆ ಮೃತರ ಸಾವಿಗೆ ನ್ಯಾಯ ಒದಗಿಸಿಕೊಡಬೇಕು ಎಂದು ಆಗ್ರಹಿಸಿದರು.

ಭರವಸೆ ಬಳಿಕ ಮೃತದೇಹ ಸ್ಥಳಾಂತರ: ಸ್ಥಳ ಮಹಜರು ಬಳಿಕ, ಪೊಲೀಸರು ಆರೋಪಿಯನ್ನು ಬಂಧಿಸುವುದಾಗಿ ಭರವಸೆ ನೀಡಿದರು. ಈ ವೇಳೆ ಆರೋಪಿ ಕುಟುಂಬದವರು ರಾಜಕೀಯ ಪ್ರಭಾವವುಳ್ಳವರಾಗಿದ್ದು, ಪೊಲೀಸರು ಅದಕ್ಕೆ ಜಗ್ಗದೆ ನ್ಯಾಯ ಕೊಡಿಸಬೇಕು ಎಂದು ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಪೊಲೀಸರು ಆರೋಪಿಯನ್ನು ಬಂಧಿಸುವುದಾಗಿ ಭರವಸೆ ನೀಡಿದರು. ಆ ಬಳಿಕವಷ್ಟೇ ಮೃತ ದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಮೈಸೂರಿನ ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ಸ್ಥಳಾಂತರಿಸಲು ಅವಕಾಶ ನೀಡಿದರು.

ಅಣ್ಣನಂತೆ ಇದ್ದವ, ನಮ್ಮ ಸಾವಿಗೆ ಕಾರಣನಾದ...

ಉಲ್ಲಾಸ್‌ಗೌಡ, ರಕ್ಷಿತ ಬೇರೆ ಬೇರೆ ಸಮುದಾಯದವರಾಗಿದ್ದು, ಉಲ್ಲಾಸ್‌ಗೌಡನನ್ನು ರಕ್ಷಿತ ಅಣ್ಣನಂತೆ ಭಾವಿಸಿ, ಹಾಗೆಯೇ ನಡೆದುಕೊಳ್ಳುತ್ತಿದ್ದಳು. ಪ್ರೀತಿಸುವ ವಿಚಾರವನ್ನು ಉಲ್ಲಾಸ್‌ಗೌಡ ಹೇಳಿಕೊಂಡಿರಲಿಲ್ಲ. 3 ತಿಂಗಳ ಹಿಂದೆ ಯುವತಿಗೆ ವಿವಾಹ ನಿಶ್ಚಯವಾದ ಬಳಿಕವೂ ಚೆನ್ನಾಗಿಯೇ ಇದ್ದ ಉಲ್ಲಾಸ್‌ಗೌಡ, ಕಳೆದ 15 ದಿನದಿಂದ ನನ್ನನ್ನೇ ಮದುವೆಯಾಗು ಎಂದು ಪೀಡಿಸಲಾರಂಭಿಸಿದ್ದಾನೆ. ಅಲ್ಲದೆ, ರಕ್ಷಿತಾಳೊಂದಿಗೆ ವಿವಾಹ ನಿಶ್ಚಯವಾಗಿದ್ದ ಯುವಕನ ಮೊಬೈಲ್‌ಗೆ ರಕ್ಷಿತಾಳಿಗೆ ತಾನು ಮಾಡಿದ್ದ ಮೆಸೇಜ್, ಆಕೆ ಯೊಂದಿಗೆ ತೆಗೆಸಿಕೊಂಡಿದ್ದ ಫೋಟೋವನ್ನು ಕಳುಹಿಸಿ ಮದುವೆ ಮುರಿದು ಬೀಳಲೆಂದು ಸಂಚು ನಡೆಸಿದ್ದಾನೆ. ಇದರಿಂದ ಕಳೆದ 10 ದಿನದಿಂದ ರಾಜೀ ಮಾಡಿ, ಬುದ್ಧಿ ಹೇಳಲಾಗಿತ್ತು. ಭಾನುವಾರವೂ ಮದುವೆ ನಿಶ್ಚಯವಾಗಿದ್ದ ಯುವಕನಿಗೆ ರಕ್ಷಿತಾ ಬಗ್ಗೆ ಅಶ್ಲೀಲವಾಗಿ ಮಾತನಾಡಿ, ಕೆಲ ಫೋಟೋ ಕಳುಹಿಸಿದ್ದಾನೆ. ಇದರಿಂದ ವಿವಾಹವಾಗಬೇಕಾಗಿದ್ದ ಯುವಕನ ಮನೆಯವರು ಬಂದು ಈ ಬಗ್ಗೆ ಮಾತುಕತೆ ನಡೆಸಿದ್ದಾರೆ. ಅವರು ವಾಪಸ್ಸಾದ ನಂತರ ಉಲ್ಲಾಸ್‌ಗೌಡ, ಮುಂದುವರಿಸಿದರೆ ಮದುವೆ ಮಂಟಪಕ್ಕೆ ನುಗ್ಗಿ ಮದುವೆ ನಿಲ್ಲಿಸಿಯೇ ತೀರುವುದಾಗಿ ಬೆದರಿಕೆ ಹಾಕಿದ್ದಾನೆ. ಇದರಿಂದ ಆಘಾತಕ್ಕೊಳಗಾದ ಕುಟುಂಬ ಆತ್ಮಹತ್ಯೆಗೆ ಶರಣಾಗಿದೆ ಎಂದು ಮೃತ ಶಿವಣ್ಣ ಸಂಬಂಧಿಕರು ಆರೋಪಿಸಿದ್ದಾರೆ.

ತಿ.ನರಸೀಪುರ ತಾಲೂಕಿನ ಕೆಂಪಯ್ಯನಹುಂಡಿ ಗ್ರಾಮದಲ್ಲಿ ವಿಷ ಸೇವಿಸಿ ಒಂದೇ ಕುಟುಂಬದ ಮೂವರು(ತಂದೆ, ತಾಯಿ, ಮಗಳು) ಆತ್ಮಹತ್ಯೆ ಮಾಡಿಕೊಂಡ ಸಂಬಂಧ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಈ ವೇಳೆ ಡೆತ್‌ನೋಟ್ ಪತ್ತೆಯಾಗಿದೆ. ಪ್ರಕರಣ ಸಂಬಂಧ ರಕ್ಷಿತಾ, ಉಲ್ಲಾಸ್‌ಗೌಡನನ್ನು ಲವ್ ಮಾಡುವ ವೇಳೆ ಕೆಲ ಫೋಟೋಗಳನ್ನು ತೆಗೆದುಕೊಂಡಿದ್ದಾರೆ. ನಂತರದ ದಿನಗಳಲ್ಲಿ ರಕ್ಷಿತಾ, ಉಲ್ಲಾಸ್‌ಗೆ ನಿನ್ನೊಂದಿಗೆ ಮದುವೆಯಾಗಲು ಇಷ್ಟವಿಲ್ಲ. ಬೇರೆಯವರೊಂದಿಗೆ ಮದುವೆಯಾಗುತ್ತೇನೆ ಎಂದು ತಿಳಿಸಿದ್ದರೂ ಬಿಡದ ಉಲ್ಲಾಸ್‌ಗೌಡ ಮದುವೆಯಾಗುವುದಿದ್ದರೆ ನನ್ನೊಂದಿಗೆ ಮದುವೆಯಾಗಬೇಕು. ಬೇರೆಯವರನ್ನು ಮದುವೆಯಾಗಲು ಬಿಡುವುದಿಲ್ಲ ಎಂದು ಒತ್ತಾಯಿಸಿದ್ದರಿಂದ ಎರಡೂ ಕುಟುಂಬಗಳ ನಡುವೆ ಭಾನುವಾರ ರಾಜಿ ಪಂಚಾಯ್ತಿ ನಡೆಸಿ, ಉಲ್ಲಾಸ್‌ಗೆ ಎಚ್ಚರಿಕೆ ನೀಡಿ ಕಳುಹಿಸಲಾಗಿತ್ತು. ಆದರೂ ಉಲ್ಲಾಸ್‌ಗೌಡ ತಾನು ರಕ್ಷಿತಾಳೊಂದಿಗೆ ಇದ್ದ ಫೋಟೋಗಳನ್ನು ಆಕೆಯ ಮದುವೆಯಾಗಲಿದ್ದ ವರನಿಗೆ ಕಳುಹಿಸಿದ್ದಾನೆ. ಇದರಿಂದ ಮನನೊಂದು ರಕ್ಷಿತ ಹಾಗೂ ಆಕೆಯ ತಂದೆ–ತಾಯಿ ತಮ್ಮ ಮನೆಯಲ್ಲಿ 'ನಮ್ಮ ಸಾವಿಗೆ ಉಲ್ಲಾಸ್ ಗೌಡ ಹಾಗೂ ಆತನ ಕುಟುಂಬದವರೇ ಕಾರಣ' ಎಂದು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದೇವೆ.

– ಮಲ್ಲಿಕಾರ್ಜುನ ಬಾಲದಂಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ಡೆತ್‌ನೋಟ್‌ನಲ್ಲಿ ರೋಧನ

ನಾನು ಕಳುಹಿಸಿರುವ ಮೆಸೇಜ್, ಫೋಟೋವನ್ನು ಮದುವೆಯಾಗುವ ಹುಡುಗನಿಗೆ ಕಳುಹಿಸಿ ಬ್ಲಾಕ್‌ಮೇಲ್ ಮಾಡಿ ನನಗೆ ಮಾನಸಿಕ ಕಿರುಕುಳ ನೀಡಿರುವ ಉಲ್ಲಾಸ್‌ಗೌಡನೇ ನಮ್ಮ ಸಾವಿಗೆ ಕಾರಣ. ಆತನಿಗೆ ಶಿಕ್ಷೆ ಕೊಡಿಸಿ. ನಾವು ಮೂರು ಜನ ಸಾವಿಗೀಡಾಗಲು ಉಲ್ಲಾಸ್‌ಗೌಡ ಕಾರಣ. ನಮ್ಮ ಹೊಸ ಮನೆಯ ಗೃಹ ಪ್ರವೇಶ ನಿಲ್ಲಿಸಿದ್ದೀಯಾ, ಒಡಹುಟ್ಟಿದವ ಎಂದು ತಿಳಿದು ನಿನಗೆ ಅನ್ನ ಹಾಕಿದ್ದೆ. ಆದರೆ, ನೀನು ದ್ರೋಹ ಬಗೆದಿದ್ದೀಯಾ, ನಮ್ಮ ಸಾವಿನ ನಂತರ ನೀನು ಸುಖವಾಗಿ ಇರಲು ಸಾಧ್ಯವಿಲ್ಲ. ಈಗಿನ ಸ್ಥಿತಿಯಲ್ಲಿ ನೀನು ಏನು ಇಲ್ಲದಂತೆ ಇದ್ದೀಯೋ, ಮುಂದೆ ಅದಕ್ಕಿಂತಲೂ ಹೆಚ್ಚಾಗಿ ಕಷ್ಟ ಅನುಭವಿಸುತ್ತೀಯಾ ನೋಡ್ಕೋ. ನಮ್ಮ ಸಾವಿನ ನಂತರ ನೀನು ನೆಮ್ಮದಿಯಾಗಿ ಜೀವನ ನಡೆಸಲು ಸಾಧ್ಯವೇ ಇಲ್ಲ.

ಜೀತಪದ್ಧತಿ ಜೀವಂತ; ಬಾಲ ಕಾರ್ಮಿಕರು ಸೇರಿ 18 ಮಂದಿ ರಕ್ಷಣೆ

ಪೊಲೀಸರು ಬಂಧಿಸಿದ್ದಾರೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ (ಡಿಎಲ್‌ಎಸ್‌ಎ) ನೇತೃತ್ವದಲ್ಲಿ ಈ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು. ಸದರಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ಹಿರಿಯ ಸಿವಿಲ್ ನ್ಯಾಯಾಧೀಶ ನಾಗರಾಜ ಸಿದ್ದಪ್ಪ ಅಂಕಸ ದೊಡ್ಡಿ, ತಿ.ನರಸೀಪುರ ತಹಸೀಲ್ದಾರ್ ಸುರೇಶಾಚಾರ್, ಬನ್ನೂರು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸತೀಶ್, ಕಾರ್ಮಿಕ ಇಲಾಖೆ ಅಧಿಕಾರ ಟಿ.ವಿ.ಲಕ್ಷ್ಮೀಶ್ ನೇತೃತ್ವದಲ್ಲಿ ಸೋಮವಾರ ಬೆಳಗ್ಗೆ ಈ ಇಟ್ಟಿಗೆ ತಯಾರಿಕಾ ಕಾರ್ಖಾನೆಗಳ ಮೇಲೆ ದಾಳಿ ನಡೆಸಲಾಯಿತು.

ಮುತ್ತಣ್ಣ ಮತ್ತು ಜ್ಯೋತಿ ದಂಪತಿ ತಮಿಳುನಾಡು ಮೂಲದವರಾಗಿದ್ದು, ಹಲವು ವರ್ಷಗಳಿಂದ ಬೇವಿನಹಳ್ಳಿಯಲ್ಲಿ ನೆಲೆಸಿದ್ದಾರೆ. ಈ ದಂಪತಿಗೆ ಮುಂಗಡ ವಾಗಿ 75 ಸಾವಿರ ರೂ. ನೀಡಿದ್ದ ಇಟ್ಟಿಗೆ ಕಾರ್ಖಾನೆ ಮಾಲೀಕ, ಸುಮಾರು 7 ವರ್ಷಗಳಿಂದ ಬಲವಂತದಿಂದ ದುಡಿಮೆ ಮಾಡಿಸುತ್ತಿದ್ದ ಎನ್ನಲಾಗಿದೆ. ಈ ದಂಪತಿಗೆ ವಾರಕ್ಕೆ ಕೇವಲ ತಲಾ 1 ಸಾವಿರ ಕೂಲಿ ನೀಡಲಾಗುತ್ತಿತ್ತು ಎನ್ನಲಾಗಿದೆ. ಈ ದಂಪತಿಯನ್ನು ಕೂಡಿ ಹಾಕಿ ಬಲವಂತವಾಗಿ ದುಡಿಸಿಕೊಳ್ಳುತ್ತಿರುವ ಬಗ್ಗೆ ಐಜೆಎಂ ಸಂಸ್ಥೆ ಹಾಗೂ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಮಾಹಿತಿ ಲಭ್ಯವಾಗಿ ಆ ಮೂಲಕ ಕಾರ್ಯಾಚರಣೆ ನಡೆಸಲಾಗಿದೆ.

ಈ ದಂಪತಿಯ ಇಬ್ಬರು ಮಕ್ಕಳ ಪೈಕಿ ಒಬ್ಬನಿಂದಲೂ ಕೆಲಸ ಮಾಡಿಸಲಾಗುತ್ತಿತ್ತು. ಎರಡು ತಿಂಗಳ ಹಿಂದೆ ಇಟ್ಟಿಗೆ ಕಾರ್ಖಾನೆಯಿಂದ ಈ ದಂಪತಿ ತಪ್ಪಿಸಿಕೊಂಡಿದ್ದು, ಗ್ರಾಮದಲ್ಲೇ ಇದ್ದ ಮಕ್ಕಳಿಗೆ ಬೆದರಿಕೆ ಹಾಕುವ ಮೂಲಕ ಕಾರ್ಖಾನೆಯವರು ದಂಪತಿಯನ್ನು ಪತ್ತೆಮಾಡಿ ಕರೆತಂದು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ಈ ದಂಪತಿ ಪ್ರಕರಣದಿಂದ ಉಳಿದ ಕಾರ್ಮಿಕರು ಜೀತಪದ್ಧತಿಯಡಿ ದುಡಿಯುತ್ತಿರುವುದು ಬೆಳಕಿಗೆ ಬಂದಿದೆ ಎಂದು ಎನ್ನಲಾಗಿದೆ.

ಆರೋಪಿಗಳಾದ ಗಿರೀಶ್, ಮಹದೇವು, ಯತಿರಾಜ್ ಅವರನ್ನು ಬಂಧಿಸಿದ್ದು, ಈ ಮೂವರ 35ರಿಂದ 40 ವರ್ಷದ ವಯೋಮಾನದವರು. ಎಸ್‌ಸಿ ಎಸ್‌ಟಿ ಕಾಯ್ದೆಯಡಿ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ಈ ಮೂವರು ಸದ್ಯ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ವಶದಲ್ಲಿದ್ದಾರೆ. ಈ ಸಂಬಂಧ ತಿ.ನರಸೀಪುರ ತಹಸೀಲ್ದಾರ್ ಅವರ ನೀಡಿದ ದೂರಿನನ್ವಯ ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೋಮವಾರ ಬೆಳಗ್ಗೆ 11ಕ್ಕೆ ಬೇವಿನಹಳ್ಳಿ ಹೊರವಲಯದ ಇಟ್ಟಿಗೆ ಕಾರ್ಖಾನೆಗಳಿಗೆ ಭೇಟಿ ನೀಡಿ, ವಿಚಾರಣೆ ನಡೆಸಲಾಯಿತು. ಈ ವೇಳೆ ಬಲವಂತವಾಗಿ ತಮ್ಮನ್ನು ದುಡಿಸಿಕೊಳ್ಳುತ್ತಿದ್ದಾರೆ ಎಂದು ಕಾರ್ಮಿಕರು ತಿಳಿಸಿದರು. ಮುತ್ತಣ್ಣ ಮತ್ತು ಜ್ಯೋತಿ ದಂಪತಿಗೆ ನಿನ್ನೆ ರಾತ್ರಿ ಹಲ್ಲೆ ಮಾಡಿದ್ದರು. ಇದರಿಂದ ಅವರು ಗಾಯಗೊಂಡಿದ್ದಾರೆ. ಇವರು ತಮಿಳುನಾಡು ಮೂಲದ ಬುಡಕಟ್ಟು ಸಮುದಾಯದವರು. ಬಹುತೇಕ ಎಲ್ಲಾ ಕಾರ್ಮಿಕರು ತಮಿಳುನಾಡು ಮೂಲದವರೇ. ಆದರೆ ಹಲವು ವರ್ಷಗಳಿಂದ ಅದೇ ಗ್ರಾಮದಲ್ಲಿ ನೆಲೆಸಿದ್ದಾರೆ ಎಂದು ತಿಳಿದುಬಂದಿದೆ. ರಕ್ಷಣೆ ಮಾಡಿರುವ ಕಾರ್ಮಿಕರಿಗೆ ಕಾನೂನಿನಡಿ ಜಿಲ್ಲಾಡಳಿತದಿಂದ ಪುನರ್ವಸತಿ ಕಲ್ಪಿಸಲು ಕ್ರಮ ವಹಿಸಲಾಗುವುದು.

–ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ, ಸದಸ್ಯ ಕಾರ್ಯದರ್ಶಿಗಳು, ಡಿಎಲ್‌ಎಸ್‌ಎ, ಮೈಸೂರು.

ಮುತ್ತಣ್ಣ ಮತ್ತು ಜ್ಯೋತಿ ದಂಪತಿ ಮೂಲಕ ಉಳಿದ ಕಾರ್ಮಿಕರ ಬಗ್ಗೆಯೂ ಮಾಹಿತಿ ಲಭ್ಯವಾಯಿತು. ಈ ದಂಪತಿಗೆ ತೀವ್ರತರ ಹಲ್ಲೆ ನಡೆಸಲಾಗಿದೆ. ಸದರಿ ಇಟ್ಟಿಗೆ ಕಾರ್ಖಾನೆಗಳಲ್ಲಿ ಬಾಲ ಕಾರ್ಮಿಕರು ಇದ್ದಾರೆಯೇ ಎಂದು ಪರಿಶೀಲನೆ ಮಾಡಲು ಹೋಗಿದ್ದೆವು. ಈ ವೇಳೆ ಈ ಕಾರ್ಖಾನೆಗಳಲ್ಲಿ ಜೀತಪದ್ಧತಿ ಇರುವುದು ತಿಳಿದುಬಂದಿತು. ಆಗ ಶುಕ್ರವಾರದಿಂದ ಮಾಹಿತಿ ಕಲೆ ಹಾಕಲು ಪ್ರಾರಂಭ ಮಾಡಿದೆವು. ಬಳಿಕ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ ಸಂಬಂಧಿಸಿದ ಇಲಾಖೆಗಳಿಗೆ ಈ ಸಂಬಂಧ ಮಾಹಿತಿ ನೀಡಿದೆವು. ಆ ಬಳಿಕ ಇಂದು ಕಾರ್ಯಾಚರಣೆ ನಡೆಸಲಾಗಿದೆ. ಮುತ್ತಣ್ಣ ಮತ್ತು ಜ್ಯೋತಿ ದಂಪತಿ ಹಲ್ಲೆಯಿಂದ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

–ಶ್ರೀನಿವಾಸ್, ಕಾರ್ಯನಿರ್ವಾಹಕ ನಿರ್ದೇಶಕರು, ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ.

ಮೈಸೂರಿನ ಐವರು ಬಿಇಓಗಳಿಗೆ ಗಾಯ; ಚಾಲಕ ಸಾವು

ಚಾಲಕ ಆನಂದ್ ಮೃತದೇಹವನ್ನು ಹೊರಗೆ ತರಲು ಹರಸಾಹಸ ಮಾಡಿದ್ದಾರೆ. ಕಟ್ಟರ್‌ನಿಂದ ವಾಹನದ ಬಾಗಿಲನ್ನು ಕತ್ತರಿಸಿ, ಕೊನೆಗೆ ಹೊರಗೆ ತೆಗೆದಿದ್ದಾರೆ.

ಸ್ಥಳಕ್ಕೆ ಅಧಿಕಾರಿಗಳ ದೌಡು: ರಸ್ತೆ ಅಪಘಾತದಲ್ಲಿ ಐವರು ಬಿಇಓಗಳು ಗಾಯಗೊಂಡಿರುವ ಸುದ್ದಿ ತಿಳಿಯುತ್ತಿದ್ದಂತೆ ಚನ್ನಪಟ್ಟಣ, ರಾಮನಗರದಿಂದ ಶಿಕ್ಷಣ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬಂದು ಗಾಯಾಳು ಅಧಿಕಾರಿಗಳ ಆರೋಗ್ಯ ವಿಚಾರಿಸಿದರು. ಅಲ್ಲದೆ, ಮೈಸೂರಿಂದ ಆಯುಕ್ತರ ಸಭೆಗೆ ತೆರಳುತ್ತಿದ್ದ ಶಿಕ್ಷಣ ಇಲಾಖೆಯ ಇನ್ನಿತರ ಅಧಿಕಾರಿಗಳು ಗಾಯಾಳುಗಳಿದ್ದ ಆಸ್ಪತ್ರೆಗೆ ಬಂದು ನೆರವಿಗೆ ಮುಂದಾದರು.

ವಿಷಾದ ವ್ಯಕ್ತಪಡಿಸಿದ ಶಿಕ್ಷಕರು: ಮೈಸೂರು ಜಿಲ್ಲೆಯ ವಿವಿಧ ವಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಅಪ ಘಾತದಲ್ಲಿ ಗಾಯಗೊಂಡಿರುವುದಕ್ಕೆ ಮೈಸೂರು ನಗರ ಮತ್ತು ಜಿಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘದ ಸದಸ್ಯರು ಹಾಗೂ ಶಿಕ್ಷಕ ವೃಂದ ಆತಂಕ ವ್ಯಕ್ತಪಡಿಸಿದೆ. ಅಲ್ಲದೆ, ಎಲ್ಲರೂ ಶೀಘ್ರಗುಣ ಮುಖರಾಗಿ ಬರಲೆಂದು ಹಾರೈಸುತ್ತಿದ್ದಾರೆ. ಈ ಸಂಬಂಧ ಚನ್ನಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಎರಡು ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡದೆ ತೊಂದರೆ

ದಲಿತ ಚಳವಳಿ ನವನಿರ್ಮಾಣ ವೇದಿಕೆ ಅಧ್ಯಕ್ಷ ಆರೋಪ

ಮೈಸೂರು,ಜೂ.22(ಜಿಎ)– ಮೈಸೂರು ವಿಶ್ವವಿದ್ಯಾಲಯವು ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಎಸ್‌ಸಿ, ಎಸ್‌ಟಿ ವಿಶೇಷ ಘಟಕದಿಂದ ಶಿಷ್ಯವೇತನ ನೀಡದೆ ತೊಂದರೆ ಮಾಡುತ್ತಿದ್ದು, ಸರ್ಕಾರ ಕೂಡಲೇ ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಂಡು, ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ದಲಿತ ಚಳವಳಿ ನವ ನಿರ್ಮಾಣ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಹರಿಹರ ಆನಂದ ಸ್ವಾಮಿ ಆಗ್ರಹಿಸಿದರು.


ಆನಂದ ಸ್ವಾಮಿ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2026–27ನೇ ಸಾಲಿನ ಶಿಷ್ಯವೇತನಕ್ಕೆ 96 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅವರಲ್ಲಿ ಕೇವಲ 21 ಮಂದಿಗೆ ಮಾತ್ರ ಶಿಷ್ಯವೇತನ ಮಂಜೂರು ಮಾಡಲಾಗುವುದು ಎಂದು ಕುಲಪತಿಗಳು ಹೇಳುತ್ತಿದ್ದಾರೆ. ಈ ತಾರತಮ್ಯದ ವಿರುದ್ಧ ಕಳೆದ ಏಳು ದಿನಗಳಿಂದ ವಿದ್ಯಾರ್ಥಿಗಳು ಧರಣಿ ನಡೆಸುತ್ತಿದ್ದರೂ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ಹೀಗೆಯೇ ಮುಂದುವರಿದರೆ ವೇದಿಕೆಯಿಂದ ವಿದ್ಯಾರ್ಥಿಗಳಿಗೆ ಬೆಂಬಲ ನೀಡಿ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಅಹಿಂದ ಜವರಪ್ಪ, ಸೋಮಯ್ಯ ಮಲೆಯೂರು, ಕೆ.ಆರ್.ಗೋಪಾಲಕೃಷ್ಣ, ವೇದಿಕೆ ಸಂಚಾಲಕ ಸತೀಶ್ ಇದ್ದರು.

ಆರ್.ರಘು ಕೌಟಿಲ್ಯಗೆ ಅಭಿನಂದನೆ...


ನೂತನ ವಿಧಾನಪರಿಷತ್ ಸದಸ್ಯರಾದ ಆರ್.ರಘು ಕೌಟಿಲ್ಯ ಅವರಿಗೆ ಮಾಜಿ ಉಪ ಮೇಯರ್, ಯುವ ಬಿಜೆಪಿ ಮುಖಂಡ ವಿ.ಶೈಲೇಂದ್ರ ಕುಮಾರ ಅವರು ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಬೃಹತ್ ಭಾವಚಿತ್ರ ನೀಡಿ, ಅಭಿನಂದಿಸಿದರು. ಈ ವೇಳೆ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಗಿರೀಶ್, ಯುವ ಮುಖಂಡರಾದ ವಿಶ್ವಪ್ರಸಾದ್, ವಾಜಮಂಗಲ ಮಹದೇವು, ಅಮಿತ್‌ರಾಜ್, ಗಣೇಶ್, ಇತರ ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

ಅಂತರ ರಾಷ್ಟ್ರೀಯ ಯೋಗ ದಿನಾಚರಣೆ...


ಶ್ರೀ ಜೈನ್ ಎಜುಕೇಶನ್ ಸೊಸೈಟಿ ವತಿಯಿಂದ ಮಹಾವೀರ ವಿದ್ಯಾಮಂದಿರ ಶಾಲೆಯಲ್ಲಿ ಅಂತರ ರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ವಿವಿಧ ಯೋಗಾಸನಗಳು, ಪ್ರಾಣಾಯಾಮ ಅಭ್ಯಾಸ ಮಾಡಿದರು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಆಹ್ವಾನ


ಜೂ.26ರಂದು ನಡೆಯಲಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ರಾಯಚೂರು ಸಂಸದ, ಮೈಸೂರಿನ ಮಾಜಿ ಜಿಲ್ಲಾಧಿಕಾರಿ ಜಿ.ಕುಮಾರ್ ನಾಯಕ್ ಅವರನ್ನು ಭೇಟಿ ಮಾಡಿ ಆಹ್ವಾನಿಸಲಾಯಿತು. ಮೈಸೂರು ತಾಲೂಕು ನಾಯಕರ ಸಂಘದ ಅಧ್ಯಕ್ಷ ಉದ್ಬೂರು ಮಹದೇವಸ್ವಾಮಿ, ಹೊಸಕೋಟೆ ಮಂಜಣ್ಣ, ಜಯಪುರ ರಂಗಸ್ವಾಮಿ, ಇಲವಾಲ ಕೃಷ್ಣಪ್ಪ, ಶಂಕರಣ್ಣ ಇನ್ನಿತರರು ಉಪಸ್ಥಿತರಿದ್ದರು.

ಮಾಜಿ ಸಂಸದ ಪ್ರತಾಪ್ ಸಿಂಹ ಹುಟ್ಟುಹಬ್ಬ ಆಚರಣೆ...


ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಆಯುಷ್ಯ, ಆರೋಗ್ಯ ಮತ್ತು ರಾಜಕೀಯವಾಗಿ ಹೆಚ್ಚಿನ ಅಧಿಕಾರ ದೊರಕಲಿ ಎಂದು ಪ್ರಾರ್ಥಿಸಿ, ಸಿಹಿ ಹಂಚಿ ಸಂಭ್ರಮಿಸಲಾಯಿತು. ಈ ವೇಳೆ ಬಿಜೆಪಿ ಹಿರಿಯ ಮುಖಂಡರಾದ ಟೆನ್ನಿಸ್ ಗೋಪಿ, ಆರ್.ಪರಮೇಶ್‌ಗೌಡ, ಚೇತನ್‌ಗೌಡ, ಬ್ರಹ್ಮಚಾರ್, ರವಿ, ರಾಜೇಶ್, ವಿನೋದ್, ಸುರೇಂದ್ರ, ಸುಣ್ಣದಕೇರಿ ನಂದೀಶ್, ಉಮೇಶ್, ಮಹದೇವ್ ಮದಕರಿ, ಹಂಚ್ಯಾ ರವಿಕುಮಾರ್, ಮಾಧುರಾಜ್ ಮಡಿವಾಳ್, ಕೃಷ್ಣಮೂರ್ತಿ ಇದ್ದರು.

ಮುಂದಿನ ದಿನಗಳಲ್ಲಿ ಆಡಳಿತ ನಡೆಸಲಿವೆ ತುಳಿತಕ್ಕೊಳಗಾದ ವರ್ಗಗಳು

ಮುಂದಿನ ಯುಗ ಮಹಿಳಾ ಪರ್ವವಾಗಲಿದೆ: ಮಾಜಿ ಅಡ್ವೋಕೇಟ್ ಜನರಲ್ ಪ್ರೊ.ರವಿವರ್ಮಕುಮಾರ್ ಅಭಿಮತ

ಮೈಸೂರು,ಜೂ.22(ಎಂಟಿವೈ)– ವಿಶ್ವದಾದ್ಯಂತ ಈ ಹಿಂದೆ ತುಳಿತಕ್ಕೆ ಒಳಗಾಗಿದ್ದ ವರ್ಗಗಳು ಮುಂಬರುವ ವರ್ಷಗಳಲ್ಲಿ ಆಡಳಿತ ನಡೆಸುವ ವರ್ಗವಾಗಿ ಮಾರ್ಪಾಡಾಗಲಿದೆ. ಮುಂದಿನ ಯುಗ ಮಹಿಳಾ ಪರ್ವವಾಗಲಿದೆ ಎಂದು ಮಾಜಿ ಅಡ್ವೋಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಮೈಸೂರು ಲೇಡೀಸ್ ಅಸೋಸಿಯೇಷನ್ ಬೆಳ್ಳಿಹಬ್ಬದ ಅಂಗವಾಗಿ ಆಯೋಜಿಸಿದ್ದ 'ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಸಮಾವೇಶ'ದಲ್ಲಿ ಮಾತನಾಡಿದ ಅವರು, ಕಾಲ ಬದಲಾಗುತ್ತಿದೆ. ವಿಶ್ವದ ಎಲ್ಲೆಡೆ ಈ ಹಿಂದೆ ಶೋಷಣೆ, ತುಳಿತಕ್ಕೊಳಗಾಗಿದ್ದ ಸಮುದಾಯ ಆಳ್ವಿಕೆ ಮಾಡುವ ವರ್ಗವಾಗಿ ಬದಲಾಗುವ ಕಾಲ ಬರುತ್ತಿದೆ ಎಂದರು.

ಈ ಹಿಂದೆ ಮಹಿಳೆಯರಿಗೆ ಶಿಕ್ಷಣ, ರಾಜಕೀಯ ಹಕ್ಕು ನೀಡದೆ ಶೋಷಣೆ ಮಾಡಲಾಗಿತ್ತು. ಆದರೆ, ಇದೀಗ ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ. ದೇಶದಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಪ್ರಸ್ತಾಪವಿದೆ. ಈ ಮೀಸಲಾತಿ ಜಾರಿಯಾದರೆ ಮುಂದಿನ ದಿನಗಳಲ್ಲಿ ಮಹಿಳೆಯರು ಆಡಳಿತ ನಡೆಸುವುದು ಖಚಿತ. ಮುಂದಿನ ಯುಗ ಮಹಿಳೆಯರದ್ದಾಗಿದೆ. ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯಲ್ಲಿ ಕಪ್ಪು ಜನರು, ಬಿಳಿ ಜನ ರನ್ನು ಸೋಲಿಸಿ ಗೋಲ್ ಬಾರಿಸುತ್ತಿದ್ದಾರೆ. ಇದನ್ನು ಗಮನಿಸಿದರೆ ಬದಲಾವಣೆ ಖಚಿತವಾಗಿ ಶೋಷಿತ ವರ್ಗಗಳು ಅಧಿಕಾರ ನಡೆಸಲಿದ್ದಾರೆ ಎಂದರು.

ಮಹಿಳಾ ಸಬಲೀಕರಣದ ಅವಶ್ಯಕತೆ ಇದೆ. ಅಪ್ಪ ಅನಿಷ್ಟಗಳು ಮಹಿಳೆಯರನ್ನು ದೌರ್ಜನ್ಯಕ್ಕೀಡು ಮಾಡುತ್ತಿವೆ. ಗಂಡು–ಹೆಣ್ಣು ನಡುವಿನ ತಾರತಮ್ಯ ನೀಗಿಸಲು ಸಂವಿಧಾನದಲ್ಲಿ ಮಾರ್ಗೋಪಾಯ ಅನುಸರಿಸಬೇಕಾಗಿದೆ. ಈ ಹಿಂದೆ ಮಹಿಳೆಯರನ್ನು ಶಿಕ್ಷಣ ವಂಚಿತರನ್ನಾಗಿಸಲಾಗಿತ್ತು. ಅಂತಹ ಸಂದರ್ಭದಲ್ಲಿ ಪ್ರಪ್ರಥಮವಾಗಿ ಮಹಿಳೆಯರಿಗೆ, ವಿಧವೆಯರಿಗೆ ಜ್ಯೋತಿ ಬಾಪುಲೆ, ಸಾವಿತ್ರಿ ಬಾಪುಲೆ ಅವರು ಶಾಲೆ ಸ್ಥಾಪಿಸಿದರು. ಇದನ್ನು ಗಮನಿಸಿದ ಬ್ರಿಟಿಷರು ಭಾರತದಲ್ಲಿ ದಲಿತರು, ಮಹಿಳೆಯರು ಹಾಗೂ ಶೂದ್ರರಿಗೆ ಶಿಕ್ಷಣ ನೀಡದೇ ಇರುವ ವ್ಯವಸ್ಥೆಯನ್ನು ಗಮನಿಸಿ, ಸಾರ್ವತ್ರಿಕ ಶಿಕ್ಷಣ ನೀಡಲು ಮುಂದಾದರು. ಆ ನಂತರ ಮಹಿಳೆಯರಿಗೆ ಶಿಕ್ಷಣ ದೊರೆಯುವಂತಾಯಿತು ಎಂದು ತಿಳಿಸಿದರು.


ಮೈಸೂರಿನ ಕಲಾಮಂದಿರದಲ್ಲಿ ನಡೆದ ಮಹಿಳಾ ಸಬಲೀಕರಣಕ್ಕಾಗಿ ಮಹಿಳಾ ಸಮಾವೇಶದಲ್ಲಿ ಮಾಜಿ ಜನರಲ್ ಅಡ್ವೋಕೇಟ್ ಪ್ರೊ.ರವಿವರ್ಮ ಕುಮಾರ್ ಮಾತನಾಡಿದರು.

ನಾನು 55 ವರ್ಷದಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ. ನೂರಾರು ಸಂಘ ಸಂಸ್ಥೆ ಹುಟ್ಟು ಹಾಕಿದ್ದೇನೆ. ಆದರೆ ಕೆಲವು ಸಂಘಟನೆ ಹೊರತುಪಡಿಸಿ, ಉಳಿದವು ಕೆಲವೇ ವರ್ಷದಲ್ಲಿ ಅಸ್ತಿತ್ವ ಕಳೆದುಕೊಂಡಿವೆ. ಮೈಸೂರು ಲೇಡೀಸ್ ಅಸೋಸಿಯೇಷನ್ 25 ವರ್ಷಗಳಿಂದ ಉತ್ತಮ ಕಾರ್ಯನಿರ್ವಹಿಸುತ್ತಾ ಬಂದಿರುವುದು ಶ್ಲಾಘನೀಯ. ಇಂದಿನ ಡಿಜಿಟಲ್ ಯುಗದಲ್ಲಿ ಫಿಸಿಕಲ್ ಆಗಿ ಕಾರ್ಯಕ್ರಮ ಆಯೋಜಿಸುವುದೇ ಸವಾಲು. ಈ ಸಂಘಟನೆಯ ಸೇವೆ ಮುಂದುವರೆಸಲಿ ಎಂದು ಆಶಿಸಿದರು.

ಇದಕ್ಕೂ ಮುನ್ನ ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಅಬಲೆಯರನ್ನು ಸಬಲೆಯರನ್ನಾಗಿ ಮಾಡುವ ನಿಟ್ಟಿನಲ್ಲಿ ಮಹಿಳಾ ಸಂಘಟನೆಗಳು ಕಾರ್ಯಕ್ರಮ ರೂಪಿಸಬೇಕು. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಿಂದಲೂ ಮಹಿಳೆಯರು ಮುಂದೆ ಬರುತ್ತಿದ್ದಾರೆ. ಮಹಿಳಾ ಮೀಸಲಾತಿ ತರುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಕ್ರಮ ಕೈಗೊಳ್ಳಲಿದೆ. ಶೇ.33ರಷ್ಟು ಮೀಸಲಾತಿ ಜಾರಿಗೆ ಬಂದರೆ ವಿಧಾನಸಭೆಯಲ್ಲಿ 80 ಮಂದಿ ಮಹಿಳಾ ಶಾಸಕರು ಇರುತ್ತಾರೆ. ಪ್ರಸ್ತುತ 224 ಶಾಸಕರಲ್ಲಿ 12 ಮಂದಿ ಮಹಿಳಾ ಶಾಸಕರಿದ್ದಾರೆ. ಮಹಿಳೆಯರಿಗೆ ತಾಳ್ಮೆ, ಬುದ್ಧಿವಂತಿಕೆ ಹೆಚ್ಚಾಗಿರುವುದರಿಂದ ಉತ್ತಮವಾಗಿ ಆಡಳಿತ ನಿಭಾಯಿಸಬಲ್ಲರು. ಗೃಹಲಕ್ಷ್ಮಿ ಯೋಜನೆಯಲ್ಲಿ ಮಹಿಳೆಯರಿಗೆ ನೀಡುತ್ತಿರುವ ಎರಡು ಸಾವಿರ ರೂ.ನಿಂದ ಇಡೀ ಕುಟುಂಬ ನಿರ್ವಹಿಸುತ್ತಿದ್ದಾರೆ. ಮಹಿಳೆಯರನ್ನು ತಾಯಿ ಸ್ಥಾನದಲ್ಲಿ ನೋಡುತ್ತೇವೆ. ಅವರು ಎಲ್ಲಾ ಕ್ಷೇತ್ರದಲ್ಲೂ ಮುಂದೆ ಬರಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಗೀತಾ ಮಹದೇವಪ್ರಸಾದ್, ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ವಕೀಲರಾದ ಸುಮನ ಅವರನ್ನು ಸನ್ಮಾನಿಸಲಾಯಿತು. ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ಲೇಡೀಸ್ ಅಸೋಸಿಯೇಷನ್ ಅಧ್ಯಕ್ಷೆ ಮಲ್ಲಿಗೆ ವೀರೇಶ್, ಉಪಾಧ್ಯಕ್ಷೆ ಪವಿತ್ರ ಮಲ್ಲಿಕಾರ್ಜುನ್, ಪೂರ್ಣಿಮಾ ರಮೇಶ್, ಪುಷ್ಪಾ ನಾಗರಾಜ್, ವಿದ್ಯಾ ಶಿವಕುಮಾರ್, ಚಂದ್ರಕಲಾ ಶಿವರಾಜ್ ಇನ್ನಿತರರು ಪಾಲ್ಗೊಂಡಿದ್ದರು.

ಸಮಾವೇಶದಲ್ಲಿ ಗಾಯಕ ನಾಗೇಶ್ ಕಂದೇಗಾಲ ಮತ್ತು ತಂಡದಿಂದ ಗೀತ ಗಾಯನ ಕಾರ್ಯಕ್ರಮ ಜರುಗಿತು. ರಂಗೋಲಿ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಬೆಂಕಿ ರಹಿತ ಅಡುಗೆ ಸ್ಪರ್ಧೆ, ಭಾರತೀಯ ಸಾಂಪ್ರದಾಯಿಕ ಮಧುಮಗಳ ಸ್ಪರ್ಧೆ, ಗೀತಗಾಯನ ಸ್ಪರ್ಧೆ, ಲಕ್ಕಿ ಲೇಡಿ ಸ್ಪರ್ಧೆ ನಡೆಸಿದ ಬಳಿಕ ಬಹುಮಾನ ವಿತರಿಸಲಾಯಿತು.

> "ಚೈಲ್ಡ್ ಅಬ್ಯೂಸ್, ಚೈಲ್ಡ್ ಮ್ಯಾರೇಜ್, ಚೈಲ್ಡ್ ಲೇಬರ್ ಇವು ಶೋಷಣೆಯ ಮುಖಗಳೇ ಆಗಿವೆ. ಶಿಕ್ಷಣ ಇಲ್ಲದಿದ್ದರೆ ನರಕ್ಕಾ ಮಾನಸಿಕ ಖಾಯಿಲೆ, ಕುಡಿತ ಚಟದಿಂದಲೂ ಮಹಿಳೆಯರ ಮೇಲೆ ದೌರ್ಜನ್ಯ ಎಗ್ಗಿಲ್ಲದೆ ನಡೆಯುತ್ತಿದೆ. ಮನೆಯಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರಿಗೆ ದಿಗ್ಬಂಧನ ಹಾಕಲಾಗಿದೆ. ವಿಧವೆಯರಿಗೆ ಅವಕಾಶ ನಿರಾಕರಿಸಲಾಗಿತ್ತು. ಪುರುಷ ಪ್ರಧಾನ ಸಮಾಜದಲ್ಲಿ ವರದಕ್ಷಿಣೆ, ಭ್ರೂಣ ಹತ್ಯೆ, ಮರ್ಯಾದೆ ಹತ್ಯೆಯಂತಹ ಕೃತ್ಯ ಮಹಿಳೆಯರನ್ನು ಹತ್ತಿಕ್ಕುವಂತಾಗಿದೆ.
> –ಪ್ರೊ.ರವಿವರ್ಮಕುಮಾರ್

ಅರ್ಜಿ ಆಹ್ವಾನ

ಮೈಸೂರು: ತಾಲೂಕಿನ ತೋಟಗಾರಿಕೆ ಇಲಾಖೆ ವತಿಯಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ವಿವಿಧ ಯೋಜನೆಗಳಡಿ ಸಹಾಯಧನ ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ Hydrophonics ಘಟಕ, ಅಣಬೆ ಉತ್ಪಾದನೆ ಘಟಕ ಸ್ಥಾಪಿಸಲು ಹಾಗೂ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಘಟಕ ಅಳವಡಿಕೆಗೆ ಎಲ್ಲಾ ವರ್ಗದ ರೈತರಿಗೆ ಶೇ.90ರ ಸಹಾಯಧನವಿರುತ್ತದೆ. ತಾಳೆ ಬೆಳೆ ಅಭಿವೃದ್ಧಿ ಯೋಜನೆಯಡಿ ಹೊಸ ತೋಟ ಅಭಿವೃದ್ಧಿಪಡಿಸಲು ಹಾಗೂ ತೋಟಗಳ ನಿರ್ವಹಣೆಗೆ ಸಹಾಯಧನ ನೀಡಲಾಗುತ್ತದೆ.

ಮಾವು, ಸಪೋಟ, ಸೀಬೆ ತೋಟದ ಬೆಳೆಗಳಾದ ತೆಂಗು, ಕೋಕೋ, ಗೇರು ಹೂವಿನ ಬೆಳೆಗಳಾದ ಮಲ್ಲಿಗೆ, ಗುಲಾಬಿ, ಸಂಬಾರು ಬೆಳೆಗಳಾದ ಕಾಳುಮೆಣಸು, ಜಾಯಿಕಾಯಿ, ವಿಳ್ಳೆದೆಲೆ ಹೊಸ ಪ್ರದೇಶ ವಿಸ್ತರಣೆಗೆ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ, ಸೋಲಾರ್ ಪಂಪ್‌ಸೆಟ್ ಅಳವಡಿಕೆಗೆ, ಹವಾಮಾನ ಮುನ್ಸೂಚನಾ ಘಟಕ) ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕಕ್ಕೆ ಸಹಾಯಧನ ಹಾಗೂ ಪರಿಕರಗಳನ್ನು ವಿತರಣೆ ಮಾಡಲಾಗುತ್ತದೆ. ಆಸಕ್ತರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಜಿಪಂ, ಮೈಸೂರು ತಾಲೂಕು ಕರ್ಜನ್ ಪಾರ್ಕ್ ಇಲ್ಲಿಗೆ ಅರ್ಜಿ ಸಲ್ಲಿಸಬಹುದೆಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ

ಧರ್ಮಸ್ಥಳದಲ್ಲಿ ಆಣೆ–ಪ್ರಮಾಣಕ್ಕೆ ಹಿರಿಯರ ವಿರೋಧ

ಇಂದು ದೆಹಲಿಯಲ್ಲಿ ವರಿಷ್ಠರ ಭೇಟಿ ಆಗ್ತೇವೆ: ಆರ್. ಅಶೋಕ್

ಬೆಂಗಳೂರು: ಕಳೆದ ವಾರ ನಡೆದ ವಿಧಾನಪರಿಷತ್ ಚುನಾವಣೆಯಲ್ಲಿ ಶಾಸಕರು ಅಡ್ಡ ಮತದಾನ ಮಾಡಿದ್ದಾರೆ ಎಂಬ ಆರೋಪದ ಬಗ್ಗೆ ಹೈಕಮಾಂಡ್‌ಗೆ ವರದಿ ಸಲ್ಲಿಸಲು ನಾಳೆ ದೆಹಲಿಗೆ ತೆರಳುತ್ತಿರುವುದಾಗಿ ವಿಪಕ್ಷನಾಯಕ ಆರ್ ಅಶೋಕ್ ತಿಳಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಜೊತೆಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಭೇಟಿ ಮಾಡುವುದಾಗಿ ಅವರು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಡ್ಡಮತದಾನ ಮಾಡಿದವರು ಯಾರು ಎಂಬುದನ್ನು ತಿಳಿಯಲು ಮಂಜುನಾಥನ ಸನ್ನಿಧಿಯಲ್ಲಿ ಆಣೆ– ಪ್ರಮಾಣ ಮಾಡಿಸಲು ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯನ್ನು ಬಿ.ವೈ. ವಿಜಯೇಂದ್ರ ಪ್ರಸ್ತಾಪಿಸಿದ್ದಾರೆ. ಆದರೆ ಪಕ್ಷದ ಹಲವು ಹಿರಿಯ ನಾಯಕರು ರಾಜಕೀಯ ಉದ್ದೇಶಗಳಿಗಾಗಿ ಪವಿತ್ರ ಸ್ಥಳವನ್ನು ಬಳಸದಂತೆ ಸಲಹೆ ನೀಡಿದ್ದಾರೆ ಎಂದು ಅಶೋಕ ಹೇಳಿದರು.



ನಾಲ್ಕು ದಿನಗಳ ಹಿಂದೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರೊಂದಿಗೆ ಅಪಾಯಿಂಟ್ಮೆಂಟ್ ಕೋರಿದ್ದೇವೆ. ಅವರು ನಾಳೆ ಮಧ್ಯಾಹ್ನ ನಮಗೆ ಸಮಯ ನೀಡಿದ್ದಾರೆ. ವಿಧಾನ ಪರಿಷತ್ತಿನ ಚುನಾವಣೆಯ ಸಮಯದಲ್ಲಿ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿದ ಬಗ್ಗೆ ವಿಜಯೇಂದ್ರ ಮತ್ತು ನಾನು ಅವರಿಗೆ ವಿವರಿಸುತ್ತೇವೆ ಎಂದು ಅವರು ಹೇಳಿದರು.

ನಮ್ಮ ಇಬ್ಬರೂ ಅಭ್ಯರ್ಥಿಗಳು ಗೆದಿದ್ದಾರೆ. ಆದರೆ ಅಡ್ಡ ಮತದಾನ ಕೆಲವು ಶಾಸಕರು ಬಿಜೆಪಿಗೆ ದ್ರೋಹ ಮಾಡಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಅವರು ಯಾರೆಂದು ನಾವು ಗುರುತಿಸಬೇಕಾಗಿದೆ. ಈ ವಿಷಯದ ಬಗ್ಗೆ ತನಿಖೆ ನಡೆಸಲು ಒಂದು ಸಮಿತಿಯನ್ನು ರಚಿಸಲಾಗಿದ್ದು, ಇಂದು ಅಥವಾ ನಾಳೆಯೊಳಗೆ ಅದು ತನ್ನ ವರದಿಯನ್ನು ಸಲ್ಲಿಸುವ ನಿರೀಕ್ಷೆಯಿದೆ. ನಾವು ವರದಿಯನ್ನು ಕೇಂದ್ರ ನಾಯರಿಗೆ ಸಲ್ಲಿಸುತ್ತೇವೆ ಎಂದು ಅವರು ಹೇಳಿದರು.

ಪಕ್ಷದ ಹೈಕಮಾಂಡ್ ಅಸಮಾಧಾನಗೊಂಡು ನಮ್ಮನ್ನು ಕರೆಸುತ್ತಿದೆ ಎಂಬ ಹೇಳಿಕೆಗಳನ್ನು ತಳ್ಳಿಹಾಕಿದ ಅಶೋಕ್, ಆ ರೀತಿಯದ್ದೇನೂ ಇಲ್ಲ. ನಾವು ಅಪಾಯಿಂಟ್ಮೆಂಟ್ ಕೋರಿದ್ದೇವೆ; ಅವರು ನಮಗೆ ಕರೆ ಮಾಡಿಲ್ಲ. ಇಂತಹ ಘಟನೆ ನಡೆದಿರುವುದು ಇದೇ ಮೊದಲಲ್ಲ. ರಾಜ್ಯದಲ್ಲಿ ಹಲವು ಬಾರಿ ಅಡ್ಡ ಮತದಾನ ನಡೆದಿದೆ" ಎಂದು ಹೇಳಿದರು.

ಗುರುವಾರ ನಡೆದ ಏಳು ವಿಧಾನ ಪರಿಷತ್ತಿನ ಚುನಾವಣೆಗಳಲ್ಲಿ ಆಡಳಿತಾರೂಢ ಕಾಂಗ್ರೆಸ್ ಐದು ಸ್ಥಾನಗಳನ್ನು ಗೆದ್ದರೆ, ಬಿಜೆಪಿ ಎರಡು ಸ್ಥಾನಗಳನ್ನು ಪಡೆದುಕೊಂಡಿತು. ಜೆಡಿಎಸ್ ಸ್ಪರ್ಧಿಸಿದ ಏಕೈಕ ಸ್ಥಾನವನ್ನು ಗೆಲ್ಲುವಲ್ಲಿ ವಿಫಲವಾಯಿತು. ಫಲಿತಾಂಶಗಳು ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಅಡ್ಡ ಮತದಾನ ಮಾಡಿದ್ದಾರೆ ಎಂದು ಸೂಚಿಸಿವೆ, ಆಡಳಿತ ಪಕ್ಷವು 151 ಮತಗಳನ್ನು ಗಳಿಸಿದೆ – ನಿರೀಕ್ಷಿತ 140 ಕ್ಕಿಂತ 11 ಹೆಚ್ಚು ಎಂದು ಮೂಲಗಳು ತಿಳಿಸಿವೆ. ಅಡ್ಡ ಮತದಾನಕ್ಕೆ ಕಾರಣರಾದವರನ್ನು ಪಕ್ಷ ಗುರುತಿಸಿದೆಯೇ ಎಂದು ಕೇಳಿದಾಗ, ಅಶೋಕ ಅವರು ಅನುಮಾನಗಳಿವೆ ಆದರೆ ಯಾವುದೇ ದೃಢೀಕರಣವಿಲ್ಲ ಎಂದು ಹೇಳಿದರು.

"ಎಲ್ಲವೂ ಹೊರಬರುತ್ತದೆ. ಕೆಲವರು ಇದನ್ನು ಅಭಿವೃದ್ಧಿಯ ಹಿತಾಸಕ್ತಿಯಿಂದ ಮಾಡಲಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ಇದರಲ್ಲಿ ಕುದುರೆ ವ್ಯಾಪಾರ ನಡೆದಿದೆ, ಆದರೂ ಇದನ್ನು ಅಭಿವೃದ್ಧಿ ಎಂದು ಬಿಂಬಿಸಲಾಗುತ್ತಿದೆ ಯಾರ ಅಭಿವೃದ್ಧಿ ಕ್ಷೇತ್ರವು ಅಭಿವೃದ್ಧಿಯಲ್ಲ, ಅದು ವೈಯಕ್ತಿಕ ಅಭಿವೃದ್ಧಿಯಾಗಿದೆ. ಅಡ್ಡ ಮತದಾನದಲ್ಲಿ ಭಾಗಿಯಾಗಿರುವವರನ್ನು ಸುಮ್ಮನೆ ಬಿಡುವುದಿಲ್ಲ ಶಿಸ್ತು ಕ್ರಮವನ್ನು ಎದುರಿಸಬೇಕಾಗುತ್ತದೆ ಎಂದರು.

ಅರುಣರಾಗ ಕ್ರಿಯೇಷನ್ಸ್‌ನಿಂದ ಮರೆಯದ ನೆನಪು ಸಂಗೀತ ಸಂಜೆ

ಮೈಸೂರು, ಜೂ. 22– ಅರುಣರಾಗ ಕ್ರಿಯೇಷನ್ಸ್ ವತಿಯಿಂದ ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ನೆನಪಿನಲ್ಲಿ ಮೈಸೂರು ಬಿಲ್ಡರ್ ಅಸೋಸಿಯೇಷನ್ ಸಭಾಂಗಣದಲ್ಲಿ ಮರೆಯದ ನೆನಪು ಸಂಗೀತ ಸಂಜೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಖ್ಯಾತ ನಟಿ ಭವ್ಯಾ ಅವರು ತಾವು ನಾಯಕಿಯಾಗಿ ಡಾ.ವಿಷ್ಣುವರ್ಧನ್ ಅವರೊಂದಿಗೆ ಅಭಿನಯಿಸಿದ ಸೂಪರ್ ಹಿಟ್ ಚಿತ್ರ 'ನೀ ಬರೆದ ಕಾದಂಬರಿ'ಯ 'ನೀ ಮೀಟಿದ ನೆನಪೆಲ್ಲವೂ ಎದೆತುಂಬಿ ಹಾಡಾಗಿದೆ.. ಹಾಡಿಗೆ ಗಾಯಕ ಗುರುರಾಜ್ ಜೊತೆ ಧ್ವನಿಗೂಡಿಸಿ, ಸಭಿಕರ ಅಪಾರ ಮೆಚ್ಚುಗೆಗೆ ಪಾತ್ರರಾದರು. ಅವರಿಗೆ ಅರುಣರಾಗ ಕ್ರಿಯೇಷನ್ಸ್ ಸಂಸ್ಥಾಪಕಿ ಡಾ.ರೇಖಾ ಅರುಣ್ 'ಸಾಥ್' ನೀಡಿದರು.

ನಂತರ ಭವ್ಯಾ ಮಾತನಾಡಿ, ಸಾಂಸ್ಕೃತಿಕ ನಗರಿ ಮೈಸೂರಿಗೆ ಬರೋದೆ ಖುಷಿಯ ಸಂಗತಿ. ಅದರಲ್ಲೂ ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಜನ್ಮದಿನದ ಅಂಗವಾಗಿ ಏರ್ಪಡಿಸಿರುವ ಸಂಗೀತ ಸಂಜೆಯಲ್ಲಿ ನಾನು ಅಭಿನಯಿಸಿದ ಗೀತೆಗಳನ್ನು ಹಾಡುತ್ತಿರುವುದು ಶ್ಲಾಘನೀಯ ಎಂದರು.


ರಮೇಶ್ ಧನ್ನೂರ್, ಎಸ್. ಶಿವಣ್ಣ, ಜಾರ್ಜ್ ಪ್ರಭಾಕರ್, ಶಶಿಧರ್ ಕೋಟೆ, ಎಸ್.ರಾಜಲಕ್ಷ್ಮಿ ಹಾಗೂ ಮೋಹನರಾಜ್ ಶೆಟ್ಟಿ ಅವರಿಗೆ ಅರುಣರಾಗ ಕಲಾಭೂಷಣ ಪ್ರಶಸ್ತಿಯನ್ನು ನಟಿ ಭವ್ಯಾ ಪ್ರದಾನ ಮಾಡಿದರು.


ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಬೈರಿ ಮಾತನಾಡಿ, ಭವ್ಯಾ ಅವರ ಮೂಲ ಹೆಸರು ಭಾರತಿದೇವಿ. ಮೊದಲ ಹಾಗೂ ಕೊನೆಯ ಅಕ್ಷರ ತೆಗೆದುಕೊಂಡು ಭವ್ಯಾ ಎಂಬ ಹೆಸರನ್ನು ನಿರ್ದೇಶಕರು ನೀಡಿದರು. ಇದರೊಂದಿಗೆ ಕನ್ನಡ ಚಲನಚಿತ್ರ ರಂಗದಲ್ಲಿ ಭವ್ಯವಾಗಿ ಬೆಳೆದರು ಎಂದರು.

ಇದೇ ವೇಳೆ ಸಂಗೀತ ಕಲಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಗಾಯಕ ಶಶಿಧರ್‌ಕೋಟೆ, ಪ್ರೊಡಕ್ಷನ್ ಕಂಟ್ರೋಲರ್ ಎಸ್.ಶಿವಣ್ಣ, ತಬಲಾ ವಾದಕ ರಮೇಶ್ ಧನ್ನೂರು, ರಂಗಭೂಮಿ ಕಲಾವಿದ ಮೋಹನ್‌ರಾಜ್ ಶೆಟ್ಟಿ, ವೀಣಾ ವಿದುಷಿ ಎಸ್.ರಾಜಲಕ್ಷ್ಮಿ, ಹಿರಿಯ ಗಾಯಕ ಜಾರ್ಜ್ ಪ್ರಭಾಕರ್ ಅವರಿಗೆ ಅರುಣರಾಗ ಕಲಾಭೂಷಣ ಪ್ರಶಸ್ತಿ ನೀಡಲಾಯಿತು. ಕನ್ನಡ– ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಚಿತ್ರ ನಿರ್ಮಾಪಕ ಎಸ್.ಎ.ಶ್ರೀನಿವಾಸ್, ರೈಲ್ವೆ ಇಲಾಖೆ ಅಧಿಕಾರಿ ವಿಜಯ್‌ಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಯಾಗಿದ್ದರು. ನಂತರ ಡಾ.ರೇಖಾ ಅರುಣ್ ನೇತೃತ್ವದಲ್ಲಿ ಕರೋಕೆ ಗಾಯನ ಕಾರ್ಯಕ್ರಮ ನಡೆಯಿತು. ಕನ್ನಡ, ತೆಲುಗು, ತಮಿಳು, ಹಿಂದಿ ಚಿತ್ರಗೀತೆಗಳನ್ನು ಹಾಡಲಾಯಿತು. ಸಮಿಉಲ್ಲಾ ನಿರೂಪಿಸಿದರು.

ದೇಶ – ವಿದೇಶ

ಮದುವೆ ಸಂಭ್ರಮಾಚರಣೆ ವೇಳೆ ಗುಂಡು ತಗುಲಿ ವ್ಯಕ್ತಿ ಸಾವು

ಕಾನ್ಪುರ: ಉತ್ತರ ಪ್ರದೇಶದ ಫತೇಪುರ ಜಿಲ್ಲೆಯಲ್ಲಿ ನಡೆದ ಮದುವೆ ಸಂಭ್ರಮಾಚರಣೆ ವೇಳೆ ಆಕಸ್ಮಿಕವಾಗಿ ಗುಂಡು ತಗುಲಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ದಿವಾನ್ ಕಾ ಪೂರ್ವದಿಂದ ಮದುವೆ ಮೆರವಣಿಗೆ ತೆರಳಿದ್ದ ವೇಳೆ ಈ ಘಟನೆ ನಡೆದಿದೆ.



ಮೃತ ವ್ಯಕ್ತಿಯನ್ನು ಬಾಂದಾ ಜಿಲ್ಲೆಯ ನಿವಾಸಿ ಧೀರಜ್ ಕೇವತ್ (50) ಎಂದು ಗುರುತಿಸಲಾಗಿದೆ. ಹರಿಪಾಲ್, ರಾಹುಲ್, ಜಗತ್‌ಪಾಲ್ ಹಾಗೂ ಕಮ್ತಾ ಎಂಬವರು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರಾತ್ರಿ 12.30ರ ಸುಮಾರಿಗೆ ದಾಳಿ ಕುರಿತು ಮಾಹಿತಿ ಬಂದಿದ್ದು, ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು ಎಂದು ಪೊಲೀಸ್ ವರಿಷ್ಠಾಧಿಕಾರಿ ಅಭಿಮನ್ಯು ಮಂಗ್ಲಿಕ್ ತಿಳಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಹತ್ತಿರದ ಜಮೋಹೆ ಗ್ರಾಮದ ನಿವಾಸಿ ಸುಮಿತ್ ತಿವಾರಿ ಅಲಿಯಾಸ್ ಪಪ್ಪು (45) ಪರವಾನಗಿ ಹೊಂದಿದ್ದ ಬಂದೂಕಿನೊಂದಿಗೆ ಮದುವೆಗೆ ಬಂದಿದ್ದರು ಎಂದು ತಿಳಿದುಬಂದಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಗಾಜಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದ್ದಾರೆ

ರಾಜೀನಾಮೆ ನೀಡುವೆ: ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಘೋಷಣೆ

ಲಂಡನ್: ಬ್ರಿಟನ್ ಪ್ರಧಾನ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಕೀರ್ ಸ್ಟಾರ್ಮರ್ ಸೋಮವಾರ ಘೋಷಿಸಿದ್ದಾರೆ. ಲೇಬರ್ ಪಕ್ಷದ ನಾಯಕ ಕೀರ್ ಅವರು ಭಾರಿ ಬಹುಮತದೊಂದಿಗೆ ಜಯ ಸಾಧಿಸಿ, 2024ರ ಜುಲೈ 5ರಂದು ಅಧಿಕಾರಕ್ಕೇರಿದ್ದರು.



10 ಡೌನಿಂಗ್ ಸ್ಟ್ರೀಟ್‌ನಲ್ಲಿ ಮಾತನಾಡಿರುವ ಸ್ಟಾರ್ಮರ್, ನಾನು ಪ್ರೀತಿಸುವ ದೇಶವನ್ನು ಮುಂಚೂಣಿಗೆ ತರುವ ಉದ್ದೇಶದ ಸಲುವಾಗಿಯೇ ಪ್ರತಿಯೊಂದು ನಿರ್ಧಾರ ಕೈಗೊಂಡಿದ್ದೆ. ಅದೇ ಕಾರಣಕ್ಕಾಗಿ ಇದೀಗ ರಾಜೀನಾಮೆ ನೀಡಲಿದ್ದೇನೆ ಎಂದು ಹೇಳಿದ್ದಾರೆ. ದೇಶದಲ್ಲಿ ಸ್ಟಾರ್ಮರ್ ಅವರ ಜನಪ್ರಿಯತೆ ಕುಸಿಯುತ್ತಾ ಸಾಗಿದೆ. ಅದೇ ಹಿನ್ನೆಲೆಯಲ್ಲಿ, ಗ್ರೇಟರ್ ಮ್ಯಾಂಚೆಸ್ಟರ್‌ನ ಮಾಜಿ ಮೇಯರ್ ಆಂಡಿ ಬರ್ನ್‌ಹ್ಯಾಮ್ ಅವರು ಲೇಬರ್ ಪಕ್ಷದ ನಾಯಕತ್ವಕ್ಕಾಗಿ ಸ್ಟಾರ್ಮರ್‌ಗೆ ಸವಾಲೊಡ್ಡಿದ್ದರು. ಕಳೆದವಾರ ನಡೆದ ವಿಶೇಷ ಚುನಾವಣೆಯಲ್ಲಿ ಬರ್ನ್‌ಹ್ಯಾಮ್ ಅವರು ಸ್ಟಾರ್ಮರ್ ಎದುರು ಮುನ್ನಡೆ ಸಾಧಿಸಿದ್ದರು. ಇದು, ರಾಜೀನಾಮೆ ನಿರ್ಧಾರಕ್ಕೆ ಉತ್ತೇಜನ ನೀಡಿದೆ. ಸುಗಮವಾಗಿ ಅಧಿಕಾರ ಹಸ್ತಾಂತರ ಸಾಧ್ಯವಾಗುವಂತೆ ಸಾಧ್ಯವಿರುವ ಎಲ್ಲ ಕ್ರಮವನ್ನೂ ಅನುಸರಿಸುವುದಾಗಿ ಪ್ರಧಾನಿ ಹೇಳಿದ್ದಾರೆ. ಲೇಬರ್ ಪಕ್ಷದ ನೂತನ ಮುಖ್ಯಸ್ಥರ ಆಯ್ಕೆ ಪ್ರಕ್ರಿಯೆಯು ಜುಲೈ 9ರಂದು ಆರಂಭವಾಗಲಿದ್ದು, ಸೆಪ್ಟೆಂಬರ್‌ನಲ್ಲಿ ಉತ್ತರಾಧಿಕಾರಿ ಆಯ್ಕೆಯಾಗುವವರೆಗೆ ಪ್ರಧಾನಿಯಾಗಿ ಮುಂದುವರಿಯುವೆ ಎಂದು ತಿಳಿಸಿದ್ದಾರೆ.

ಬಿಹಾರದ ಮೋಸ್ಟ್ ವಾಂಟೆಡ್ ಎನ್‌ಕೌಂಟರ್

ಪಾಟ್ನಾ: ಬಿಹಾರದ ಮೋಸ್ಟ್ ವಾಂಟೆಡ್ ಅಪರಾಧಿಯಾಗಿದ್ದ ಲಾಲನ್ ಸಿಂಗ್ ಅಲಿಯಾಸ್ ಲಲ್ಲನ್ ಪೊಲೀಸರ ಎನ್‌ಕೌಂಟರ್‌ನಲ್ಲಿ ಮೃತಪಟ್ಟಿದ್ದಾನೆ. ಉತ್ತರ ಪ್ರದೇಶದ ಸಹಾರನ್‌ಪುರದಲ್ಲಿ ಜೂನ್ 21ರ ಮಧ್ಯರಾತ್ರಿ ಈ ಘಟನೆ ನಡೆದಿದೆ.



ಹಲವು ಗಂಭೀರ ಪ್ರಕರಣಗಳಲ್ಲಿ ಆರೋಪಿ ಯಾಗಿದ್ದ ಲಾಲನ್ ಸಿಂಗ್‌ನನ್ನು ಹುಡುಕಿಕೊಟ್ಟವರಿಗೆ ಪೊಲೀಸರು 1.25 ಲಕ್ಷ ರೂ ಬಹುಮಾನ ಘೋಷಿಸಿದ್ದರು. ಉತ್ತರ ಪ್ರದೇಶ ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ತಂಡಕ್ಕೆ ಸರ್ಸಾವ–ನಕುರ್ ರಸ್ತೆಯಲ್ಲಿ ಲಾಲನ್ ಸಿಂಗ್ ಹಾಗೂ ಆತನ ಸಹಚರರು ಸಿಕ್ಕಿಬಿದ್ದಿದ್ದಾರೆ. ಈ ವೇಳೆ ಎರಡೂ ಕಡೆಯಿಂದ ಗುಂಡಿನ ಚಕಮಕಿ ನಡೆದಿದೆ.

ಗುಂಡಿನ ದಾಳಿಯಲ್ಲಿ ಲಾಲನ್ ಸಿಂಗ್ ಗಂಭೀರವಾಗಿ ಗಾಯಗೊಂಡಿದ್ದ. ತಕ್ಷಣವೇ ಆತನನ್ನು ಸರ್ಸಾವಾ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿತ್ತು. ಬಳಿಕ ಹೆಚ್ಚಿನ ಚಿಕಿತ್ಸೆಗೆ ಸಹಾರನ್‌ಪುರ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ. ಲಾಲನ್‌ಸಿಂಗ್ ಬಿಹಾರದ ಸಮಸ್ತಿಪುರ ಜಿಲ್ಲೆಯ ಆನಂದಗೋಲ್ವಾದ ನಿವಾಸಿ. ಆತ ಹಲವು ವರ್ಷಗಳಿಂದ ಉತ್ತರ ಪ್ರದೇಶ, ಬಿಹಾರದಲ್ಲಿ ನಡೆದ ಅಪರಾಧ ಪ್ರಕರಣಗಳಲ್ಲಿ ಅಪರಾಧಿಯಾಗಿದ್ದ.

ಕಾಂಗೋದಲ್ಲಿ 1,000 ಗಡಿ ದಾಟಿದ ಎಬೋಲಾ ಪೀಡಿತರ ಸಂಖ್ಯೆ; 254 ಮಂದಿ ಸಾವು

ಕಿನ್ಶಾಸಾ: ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಎಬೋಲಾ ವೈರಸ್‌ನ ಅಟ್ಟಹಾಸ ಮುಂದುವರಿದಿದ್ದು, ದೇಶದಲ್ಲಿ ದೃಢಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ 1,003ಕ್ಕೆ ಏರಿಕೆಯಾಗಿದೆ ಎಂದು ಸರ್ಕಾರ ತಿಳಿಸಿದೆ. ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಇದುವರೆಗೆ ಒಟ್ಟು 254 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇದಕ್ಕೂ ಮುನ್ನ ಸರ್ಕಾರ ಬಿಡುಗಡೆ ಮಾಡಿದ್ದ ಅಧಿಕೃತ ಮಾಹಿತಿಯಲ್ಲಿ ಎಬೋಲಾ ಪ್ರಕರಣಗಳ ಸಂಖ್ಯೆ 956 ಆಗಿದ್ದು, ಸಾವಿನ ಸಂಖ್ಯೆ 247 ಆಗಿತ್ತು. ಆದರೆ, ಕೇವಲ 24 ಗಂಟೆಗಳ ಅವಧಿಯಲ್ಲಿ ಹೊಸ ಪ್ರಕರಣಗಳು ಪತ್ತೆಯಾಗುವುದರೊಂದಿಗೆ ಒಟ್ಟು ಪೀಡಿತರ ಸಂಖ್ಯೆ ಸಾವಿರದ ಗಡಿ ದಾಟಿದೆ. ಪೂರ್ವ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದ ಬುನಿಯಾದಲ್ಲಿ ಎಬೋಲಾ ಸೋಂಕಿನಿಂದ ಮೃತಪಟ್ಟಿರಬಹುದು ಎಂದು ಶಂಕಿಸಲಾದ ಮಗುವಿನ ಶವಪೆಟ್ಟಿಗೆಯನ್ನು ಆರೋಗ್ಯ ಕಾರ್ಯಕರ್ತರು ವೈಯಕ್ತಿಕ ರಕ್ಷಣಾ ಸಾಧನಗಳನ್ನು ಧರಿಸಿ ಅಂತ್ಯಸಂಸ್ಕಾರಕ್ಕಾಗಿ ಕೊಂಡೊಯ್ಯುತ್ತಿರುವುದು ಕಂಡುಬಂದಿದೆ.



ಕೋಚಿಂಗ್ ಸೆಂಟರ್‌ನಲ್ಲಿ ಅಗ್ನಿ ಅವಘಡ; 15 ವಿದ್ಯಾರ್ಥಿಗಳ ಸಾವು

ಲಖನೌ: ಉತ್ತರಪ್ರದೇಶದ ಅಲಿಗಂಜ್‌ನಲ್ಲಿರುವ 3 ಅಂತಸ್ತಿನ ವಾಣಿಜ್ಯ ಕಟ್ಟಡವೊಂದರಲ್ಲಿ ಭಾರಿ ಅಗ್ನಿ ದುರಂತ ಸಂಭವಿಸಿದ್ದು, ಕನಿಷ್ಠ 15 ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ ಎಂದು ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ತಿಳಿಸಿದ್ದಾರೆ. ಅಲಿಗಂಜ್ ಪೊಲೀಸ್ ಠಾಣಾ ವ್ಯಾಪ್ತಿಯ ಉಷಾ ಮೆಹ್ತಾ ಮಾರ್ಗದಲ್ಲಿರುವ ಕಟ್ಟಡದಲ್ಲಿ ಮಧ್ಯಾಹ್ನ 3 ಗಂಟೆಗೆ ಬೆಂಕಿ ಕಾಣಿಸಿಕೊಂಡ ಬಗ್ಗೆ ಮಾಹಿತಿ ಸಿಕ್ಕಿತು ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದ್ದಾರೆ. ಮಾಹಿತಿ ಸಿಕ್ಕ ತಕ್ಷಣ ಪೊಲೀಸರು ಸೇರಿದಂತೆ ಡಿಸಿಎಂ ಬ್ರಜೇಶ್ ಪಾಠಕ್ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಬೆಂಕಿ ಕಾಣಿಸಿಕೊಂಡ ತಕ್ಷಣ ಹಲವು ವಿದ್ಯಾರ್ಥಿಗಳು ಕಟ್ಟಡದಿಂದ ಹೊರಬರುವಲ್ಲಿ ಯಶಸ್ವಿಯಾದರೆ, ಅನೇಕರು ಒಳಗೆ ಸಿಲುಕಿಕೊಂಡಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಕಟ್ಟಡದಲ್ಲಿದ್ದ ಕೋಚಿಂಗ್ ಸೆಂಟರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಆರಂಭಿಕ ವರದಿಗಳು ಹೇಳಿದ್ದವಾದರೂ, ಅದು ಕೋಚಿಂಗ್ ಸೆಂಟರ್ ಅಲ್ಲ, ಬದಲಿಗೆ 'ಅನಿಮೇಷನ್ ಸೆಂಟರ್' ಎಂದು ಪಾಠಕ್ ನಂತರ ಸ್ಪಷ್ಟಪಡಿಸಿದ್ದಾರೆ. ದಟ್ಟವಾದ ಹೊಗೆಯಿಂದಾಗಿ ರಕ್ಷಣಾ ಕಾರ್ಯಾಚರಣೆ ಸವಾಲಾಗಿ ಪರಿಣಮಿಸಿದ್ದರಿಂದ, ಅಗ್ನಿಶಾಮಕ ಸಿಬ್ಬಂದಿ ಪಕ್ಕದ ಕಟ್ಟಡದ ಗೋಡೆಯನ್ನು ಒಡೆದು ಅದರ ಮೂಲಕ ಈ ಕಟ್ಟಡದ ಒಳಗೆ ಪ್ರವೇಶಿಸಿದ್ದರು ಎಂದು ಅವರು ಹೇಳಿದ್ದಾರೆ.



ಮೈಸೂರು ಮಿತ್ರ ಮಂಗಳವಾರ 23 ಜೂನ್ 2026

ವನ್ಯಜೀವಿ–ಮಾನವ ಸಂಘರ್ಷ ಸಮಸ್ಯೆ ಪರಿಹಾರಕ್ಕೆ ರಾಜ್ಯ ಸರ್ಕಾರ ಸ್ಪಂದಿಸುತ್ತಿಲ್ಲ

ಭಾರತೀಯ ಕಿಸಾನ್ ಸಂಘದ ರಾಷ್ಟ್ರೀಯ ಅಧ್ಯಕ್ಷ ಕೆ.ಸಾಯಿ ರೆಡ್ಡಿ ಗುರುತರ ಆರೋಪ



ಭಾರತೀಯ ಕಿಸಾನ್ ಸಂಘದ ನಾಯಕರು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮಡಿಕೇರಿ, ಜೂ.22–ಜಿಲ್ಲೆಯಲ್ಲಿ ವನ್ಯಜೀವಿ ಮಾನವ ಸಂಘರ್ಷ ಸಮಸ್ಯೆ ಪರಿಹಾರಕ್ಕೆ ರಾಜ್ಯ ಸರಕಾರ ಸ್ಪಂದಿಸದ ಪರಿಣಾಮ ವರ್ಷದಲ್ಲಿ 17 ಮಂದಿ ಜೀವ ಕಳೆದು ಕೊಂಡಿದ್ದಾರೆ. ತಕ್ಷಣವೇ ರಾಜ್ಯ ಸರಕಾರ ರೈತರು ಮತ್ತು ಬೆಳೆಗಾರರ ನೆರವಿಗೆ ಧಾವಿಸಬೇಕು ಎಂದು ಭಾರತೀಯ ಕಿಸಾನ್ ಸಂಘ ಆಗ್ರಹಿಸಿದೆ.

ಭಾರತೀಯ ಕಿಸನ್ ಸಂಘದ ರಾಷ್ಟ್ರೀಯ ಅಧ್ಯಕ್ಷ ಕೆ.ಸಾಯಿರೆಡ್ಡಿ, ಜಿಲ್ಲೆಯಲ್ಲಿ ಕಾಡಾನೆ, ಮಂಗಗಳು, ಹುಲಿ ಸಹಿತ ವನ್ಯಜೀವಿ ಮಾನವ ಸಂಘರ್ಷ ಕಂಡು ಬರುತ್ತಿದೆ. ಪರಿಣಾಮವಾಗಿ ಕೃಷಿ ಫಸಲು ನಾಶದ ಜೊತೆಯಲ್ಲಿಯೇ ಮಾನವ ಜೀವಹಾನಿ ಪ್ರಕರಣಗಳು ಹೆಚ್ಚಾಗುತ್ತಿದೆ. ಇದಕ್ಕೆ ಪರಿಹಾರ ಸೂಚಿಸಬೇಕಾದ ರಾಜ್ಯ ಸರ್ಕಾರ ಯಾವುದೇ ಸ್ಪಂದನೆ ನೀಡುತ್ತಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

ರಾಮನಗರ ಬಿಡದಿ ಬಳಿ ರಾಜ್ಯ ಸರ್ಕಾರ ರೈತರ ಫಲವತ್ತಾದ ಭೂಮಿಯನ್ನು ವಶಕ್ಕೆ ಪಡೆದು ಅಲ್ಲಿ ಟೌನ್ ಶಿಪ್(ನಗರೀಕರಣ) ಯೋಜನೆ ಜಾರಿಗೆಗೆ ನಮ್ಮ ಸಂಘದ ತೀವ್ರ ವಿರೋಧವಿದೆ. ರಾಜ್ಯದಲ್ಲಿ ಮುಖ್ಯ ಮಂತ್ರಿಯಾಗಿ ಅಧಿಕಾರಕ್ಕೆ ಬಂದಿರುವ ಡಿ.ಕೆ.ಶಿವಕುಮಾರ್ ಅವರು ರೈತರ ಪರ ಇದ್ದಾರೆ ಎಂದು ಭಾವಿಸಲಾಗಿತ್ತು. ಆದರೆ ರಾಜ್ಯ ಸರಕಾರ ಮತ್ತು ನೂತನ ಮುಖ್ಯಮಂತ್ರಿಗಳು ಕೂಡ ರೈತರ ಹಿತ ಕಾಪಾಡಲು ವಿಫಲವಾಗಿದ್ದಾರೆ ಎಂದು ಆರೋಪಿಸಿದರು.

ವರದಿಗೆ ಸ್ಪಂದನೆ ಇಲ್ಲ: ಕಾಫಿ ರಾಷ್ಟ್ರೀಯ ಪಾನೀಯ ಆಂದೋಲನ ಸಮಿತಿ ಸಂಚಾಲಕ ಮಾಚಿಮಾಡ ರವೀಂದ್ರ ಮಾತನಾಡಿ, ನಾಗರಹೊಳೆ ವನ್ಯಜೀವಿ ವಲಯ, ವಿರಾಜಪೇಟೆ, ಮಡಿಕೇರಿ, ಸೋಮವಾರಪೇಟೆ ವನ್ಯಜೀವಿ ವಲಯ ಒಳಗೊಂಡಂತೆ 899 ಕಿ.ಮೀ. ಅರಣ್ಯದಂಚಿನ ಪ್ರದೇಶಗಳಲ್ಲಿ ಕಾಡಾನೆ ಹಾವಳಿ ವಿಪರೀತವಾಗಿದೆ. ಈ ಕುರಿತು ಶಿವಮೊಗ್ಗ, ಹಾಸನ, ಕೊಡಗು ಹಾಗೂ ದಕ್ಷಿಣ ಕನ್ನಡದಲ್ಲಿ ಅಧ್ಯಯನ ನಡೆಸಿ, ಭಾರತೀಯ ಕಿಸಾನ್ ಸಂಘ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕ್ರಮಗಳ ಕುರಿತು 4 ತಿಂಗಳ ಹಿಂದೆ ಜಿಲ್ಲಾಡಳಿತ ಮತ್ತು ಅರಣ್ಯ ಇಲಾಖೆಗೆ ವರದಿ ನೀಡಿತ್ತು. ಆದರೆ ಇಂದಿಗೂ ಜಿಲ್ಲಾಡಳಿತ, ಅರಣ್ಯ ಇಲಾಖೆ ಆ ಬಗ್ಗೆ ಯಾವುದೇ ಕ್ರಮ ತೆಗೆದು ಕೊಳ್ಳಲು ಮುಂದಾಗಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಫಾರ್ಮರ್ಸ್ ಪ್ರೊಡ್ಯೂಸರ್ ಆರ್ಗನೈಜೇಷನ್ ಸಂಘಟನೆ ಸಂಚಾಲಕ ಡಿ.ವಾಸುದೇವ್ ರಾವ್, ಭಾರತೀಯ ಕಿಸಾನ್ ಸಂಘದ ಸೋಮವಾರಪೇಟೆ ತಾಲೂಕು ಅಧ್ಯಕ್ಷ ಭಗವಾನ್ ಮಾತನಾಡಿದರು.

ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ಎಂ.ಕೆ.ಪ್ರದೀಪ್ ಭೀಮಯ್ಯ, ಸೋಮವಾರಪೇಟೆ ತಾಲೂಕು ಕಾರ್ಯದರ್ಶಿ ಪ್ರಸಾದ್ ಸುದ್ದಿಗೋಷ್ಠಿಯಲ್ಲಿದ್ದರು.

ತ್ಯಾಜ್ಯ ವಿಲೇವಾರಿಗೆ ಮಳೆ ಕಾರಣ ಬೇಕಿಲ್ಲ

ದಿಶಾ ಸಭೆಯಲ್ಲಿ ನಗರಸಭೆ ಪೌರಾಯುಕ್ತರಿಗೆ ಸಂಸದರ ಕಟ್ಟುನಿಟ್ಟಿನ ಸೂಚನೆ



ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ದಿಶಾ ಸಮಿತಿ ಸಭೆಯ ಅಧ್ಯಕ್ಷತೆಯನ್ನು ಸಂಸದ ಯದುವೀರ್ ವಹಿಸಿದ್ದರು.

ಮಡಿಕೇರಿ, ಜೂ.22–ನಗರದಲ್ಲಿ ತ್ಯಾಜ್ಯ ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಸಂಬಂಧ ಮಳೆ ಮತ್ತಿತರೆ ಯಾವುದೇ ಕಾರಣ ನೀಡಬೇಡಿ ಎಂದು ಸಂಸದ ಯದುವೀರ್ ನಗರಸಭೆ ಪೌರಾಯುಕ್ತರಿಗೆ ತಾಕೀತು ಮಾಡಿದ್ದಾರೆ

ನಗರದ ಜಿ.ಪಂ. ಸಭಾಂಗಣದಲ್ಲಿ ನಡೆದ ದಿಶಾ ಸಮಿತಿ ಸಭೆಯ ಆರಂಭದಲ್ಲೇ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಸಂಬಂಧ ಚರ್ಚೆಗೆ ಬಂದಾಗ ಈಗಾಗಲೇ ಈ ಬಗ್ಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಮಳೆ ಮತ್ತಿತರ ಕಾರಣ ನೀಡದೆ ಕೆಲಸ ಆಗಬೇಕು. ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದೆ. ಬೇರೆ ಬೇರೆ ಜಿಲ್ಲೆಯಲ್ಲಿ ಯಾವ ರೀತಿ ತ್ಯಾಜ್ಯ ವಿಲೇವಾರಿ ಮಾಡುತ್ತಾರೆ. ಅದನ್ನು ಸಹ ಗಮನಿಸಿ ಅದರಂತೆ ಕ್ರಮವಹಿಸಬೇಕು ಎಂದು ನಿರ್ದೇಶನ ನೀಡಿದರು. ಸಂಸದರ ಈ ಮಾತಿಗೆ ಬೆಂಬಲ ವ್ಯಕ್ತಪಡಿಸಿದ ವಿಧಾನಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ಹಾಗೂ ಸುಜಾ ಕುಶಾಲಪ್ಪ ಅನುಪಾಲನಾ ವರದಿಯಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ಯಾವುದೇ ಸಬೂಬು ನೀಡುವಂತಿಲ್ಲ ಎಂದಾಗ, ಈ ಕುರಿತು ಸದಸ್ಯರಾದ ಡಾ.ನವೀನ್ ಕುಮಾರ್, ಆರ್.ಕೆ.ಚಂದ್ರು, ನಾಗೇಶ್ ಕುಂದಲ್ಪಾಡಿ, ಕಾಂತಿ ಸತೀಶ್ ಸಹ ಧ್ವನಿಗೂಡಿಸಿದರು.

ಜಿಲ್ಲೆಯ ಹೋಂಸ್ಟೇ ಮತ್ತು ರೆಸಾರ್ಟ್‌ಗಳಲ್ಲಿ ಕಸವನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಕೇರಳ ಮತ್ತು ಅಸ್ಸಾಂನಲ್ಲಿ ತ್ಯಾಜ್ಯವನ್ನು ಸರಿಯಾದ ನಿರ್ವಹಣೆ ಮಾಡಲಾಗುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಯಥೇಚ್ಛವಾಗಿ ಕಂದಾಯ ಬರುತ್ತಿದ್ದರೂ ಸರಿಯಾದ ನಿರ್ವಹಣೆ ಕಾಣುತ್ತಿಲ್ಲ ಎಂದು ಸುಜಾ ಕುಶಾಲಪ್ಪ ಅತೃಪ್ತಿ ವ್ಯಕ್ತ ಪಡಿಸಿದರು. ಗ್ರಾ.ಪಂ ಮಟ್ಟದಲ್ಲಿ ಶೇ.100ರಷ್ಟು ಕಸ ವಿಲೇವಾರಿಗೆ ಒತ್ತು ನೀಡಲಾಗಿದೆ. ಅಗತ್ಯವಿರುವ ಕಡೆಗಳಲ್ಲಿ ಡಸ್ಟ್‌ಬಿನ್ ಇಡಲಾಗಿದೆ ಎಂದು ಜಿ.ಪಂ ಸಿಇಒ ಆನಂದ್ ಪ್ರಕಾಶ್ ಮೀನಾ ಹೇಳಿದಾಗ ಅಧಿಕಾರಿಗಳು ಶ್ರದ್ಧೆ ಹಾಗೂ ಬದ್ಧತೆಯಿಂದ ಕೆಲಸ ಮಾಡಿದಲ್ಲಿ ಸುಲಲಿತವಾಗಿ ಕರ್ತವ್ಯ ನಿರ್ವಹಿಸಬಹುದಾಗಿದೆ. ಆದರೆ ಅಧಿಕಾರಿಗಳು ಕಥೆ ಹೇಳುವುದನ್ನು ಬಿಡಬೇಕು. ನಾವು ಕಥೆ ಕೇಳಿಕೊಂಡು ಹೋಗಲು ಬಂದಿಲ್ಲ. ಫಲಿತಾಂಶ ಅತಿ ಮುಖ್ಯ ಎಂದು ಭೋಜೇಗೌಡ ಕಿಡಿಕಾರಿದರು. ಕಸದ ವಿಲೇವಾರಿ ಬಗ್ಗೆ ಸಾಕಷ್ಟು ಚರ್ಚೆಯಾಗಿದ್ದನ್ನು ನೋಡಿದ ಸಂಸದರು, ಕಸದ ವಿಚಾರಗಳು ಮುಂದಿನ ಸಭೆಗೆ ಬರ ಬಾರದು. ಈ ಬಗ್ಗೆ ಯೋಜನೆ ರೂಪಿಸಿ ವರದಿ ನೀಡುವಂತೆ ತಾಕೀತು ಮಾಡಿದರು.

ಕ್ರಮದ ಎಚ್ಚರಿಕೆ: ಜಲಜೀವನ್ ಮಿಷನ್ ಯೋಜನೆ ಸಂಬಂಧಿಸಿದಂತೆ ಮಾಹಿತಿ ನೀಡಿದ ಕಾರ್ಯಪಾಲಕ ಎಂಜಿನಿಯರ್ ಭಾಸ್ಕರ್ ಜಲಜೀವನ್ ಮಿಷನ್‌ಯಡಿ ಪ್ರತಿ ಮನೆಗೂ ನಲ್ಲಿ ನೀರು ಪೂರೈಸುವತ್ತ ಗಮನಹರಿಸಲಾಗಿದೆ. ಈ ಯೋಜನೆಗೆ ಸಂಬಂಧಿಸಿದಂತೆ ಸ್ಥಳೀಯ ಪ್ರತಿನಿಧಿಗಳನ್ನು ಆಹ್ವಾನಿಸಿ ಮಾಹಿತಿ ನೀಡಬೇಕು. ಕಾಮಗಾರಿ ಪೂರ್ಣಗೊಂಡ ನಂತರ ಸ್ಥಳೀಯರಿಗೆ ಮಾಹಿತಿ ನೀಡಬೇಕು ಎಂದು ಭೋಜೇಗೌಡ ಆಗ್ರಹಿಸಿದರು. ಕೇಂದ್ರ ಸರ್ಕಾರ ಅಮೃತ್ 2.0 ಯೋಜನೆಗೆ ಸಂಬಂಧಿಸಿದಂತೆ ಶೇ.10 ರಷ್ಟು ಪ್ರಗತಿ ಸಾಧಿಸಿಲ್ಲ. ಕಾಮಗಾರಿ ಪೂರ್ಣಗೊಂಡ ಮೇಲೆ ಪಂಚನಾಮೆ ಆಗಬೇಕು. ಆದರೆ ಇದು ಯಾವುದೇ ಕೆಲಸ ಆಗಿಲ್ಲ ಈ ಬಗ್ಗೆ ಸಮಗ್ರ ತನಿಖೆಯಾಗಬೇಕು ಎಂದು ಕುಂದಲ್ಪಾಡಿ ಒತ್ತಾಯಿಸಿದರು.

ತಾಪಂ ಇಒಗಳು ಎಲ್ಲಾ ಗ್ರಾಪಂಗಳಿಗೂ ಭೇಟಿ ನೀಡಿ ಈ ಯೋಜನೆಯ ಸೌಲಭ್ಯವನ್ನು ಅರ್ಹರಿಗೆ ಪರಿಣಾಮಕಾರಿಯಾಗಿ ತಲುಪಿಸಬೇಕು. ಜಲಜೀವನ್ ಮಿಷನ್ ಯೋಜನೆ ಪ್ರಗತಿಗೆ ಸಂಬಂಧಿಸಿದಂತೆ ಮುಂದಿನ ಸಭೆಯಲ್ಲಿ ಸರಿಯಾದ ರೀತಿಯಲ್ಲಿ ಮಾಹಿತಿ ನೀಡಬೇಕು. ಇಲ್ಲದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಹೆಚ್ಚುವರಿ ಡಿಸಿ ಸಹನಾ ಎಸ್.ಹಾದಿಮನಿ, ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆ ವ್ಯಾಪ್ತಿಗೆ ಸಂಬಂಧಿಸಿದ ಮಾಹಿತಿ ನೀಡಿದರು.

ಆರೋಗ್ಯವು ಉತ್ತಮವಾಗಿರಲು ಯೋಗದಿಂದ ಸಾಧ್ಯ



ಪುರಭವನದಲ್ಲಿ ಆಯೋಜಿಸಿದ್ದ ಯೋಗ ಪ್ರದರ್ಶನದಲ್ಲಿ ನಿರತರಾಗಿರುವ ಯೋಗಪಟುಗಳು

ವಿರಾಜಪೇಟೆ: ಯೋಗ ಅಭ್ಯಾಸ ಮಾಡುವುದರಿಂದ ಮನುಷ್ಯನ ಖಾಯಿಲೆಗಳು ದೂರವಾಗಲಿದೆ ಹಾಗೂ ಆರೋಗ್ಯವು ಉತ್ತಮವಾಗಿರಲು ಸಾಧ್ಯವಾಗುತ್ತದೆ ಎಂದು ಮಲಯಾಳಿ ಮಹಿಳಾ ಅಸೋಸಿಯೇಷನ್ ಅಧ್ಯಕ್ಷೆ ಶೀಭಾ ಪೃಥ್ವಿನಾಥ್ ಹೇಳಿದ್ದಾರೆ.

ಕೊಡಗು ಮಲಯಾಳಿ ಮಹಿಳಾ ಅಸೋಸಿಯೇಷನ್ ಪಟ್ಟಣದ ಪುರಭವನದಲ್ಲಿ ಆಯೋಜಿಸಿದ್ದ ಯೋಗ ಪ್ರದರ್ಶನದಲ್ಲಿ ಮಾತನಾಡಿ, ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಮಹಿಳೆಯರಿಗಾಗಿ ಆಯೋಜಿಸಿದ್ದ ಉಚಿತ ಯೋಗ ತರಬೇತಿಯಲ್ಲಿ ತರಬೇತಿ ಪಡೆದ 32 ಮಂದಿ ಸದಸ್ಯರು ಯೋಗ ಪ್ರದರ್ಶನ ಮಾಡಿದ್ದಾರೆ. ಸಂಘಟನೆ ವತಿಯಿಂದ ಸಮಾಜ ಸೇವೆಯಂಥ ವಿವಿಧ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಮಲಯಾಳಿ ಮಹಿಳಾ ಅಸೋಸಿಯೇಷನ್ ಕಾರ್ಯದರ್ಶಿ ಎಂ.ಪಿ. ಪುಷ್ಪಲತ ಶಿವಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಆಡಳಿತ ಮಂಡಳಿಯ ಸ್ಮಿತಾ ಸಂತೋಷ್, ಖಜಾಂಚಿ ಶ್ರೀಕಲ ಮಾತನಾಡಿದರು, ಸಲಹಾ ಸಮಿತಿ ಸದಸ್ಯರಾದ ಸಿ.ಕೆ.ಪೃಥ್ವಿನಾಥ್, ಶ್ರೀದೇವಿ ಸಂತೋಷ್, ಉಮಾವತಿ, ಪದ್ಮಾವತಿ, ಶ್ರೀಜ ಬಾಬು, ಜೀಶ, ರಾಖೀ ಸಜೀವನ್, ಸಂಧ್ಯಾಗೋಪಾಲ್ ಉಪಸ್ಥಿತರಿದ್ದರು.

ಅನನ್ಯ ನಿಧನ



ನಾಪೋಕ್ಲು: ಸಮೀಪದ ಹೊದ್ದೂರು ಗ್ರಾಮದ ನಿವಾಸಿ ಪಿ.ವಿ. ಪುತ್ರಿ ಅನನ್ಯ (25) ಅನಾರೋಗ್ಯದಿಂದ ಸೋಮವಾರ ನಿಧನರಾದರು.

ಮೃತರು ತಂದೆ ಶ್ರೀ ಭಗವತಿ ದೇವಾಲಯದ ಅರ್ಚಕ ಪಿ.ವಿ.ರವಿಕುಮಾರ್, ತಾಯಿ ಎಸ್ ರಾಧಾ ಸಹೋದರ ಅರ್ಪಿತ್‌ರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಹೊದ್ದೂರು ಗ್ರಾಮದ ವಾಟೆಕಾಡು ಹಿಂದೂ ರುದ್ರಭೂಮಿಯಲ್ಲಿ ನೆರವೇರಿತು.

ಗದ್ದೆಹಳ್ಳದಲ್ಲಿ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭ



ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಆಂಗ್ಲ ಮಾಧ್ಯಮದ ಎಲ್‌ಕೆಜಿ ತರಗತಿಯನ್ನು ಶಾಸಕ ಡಾ.ಮಂತರ್‌ಗೌಡ ಉದ್ಘಾಟಿಸಿದರು.

ಸುಂಟಿಕೊಪ್ಪ, ಜೂ.22– ಸರಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಗರಿಷ್ಠವಾಗಿ ಬೆಳೆಯಲು ಶಿಕ್ಷಕರ ಪಾತ್ರ ಮಹತ್ವದಾಗಿರುತ್ತದೆ ಎಂದು ಶಾಸಕ ಡಾ.ಮಂತರ್‌ಗೌಡ ಹೇಳಿದ್ದಾರೆ.

ಗದ್ದೆಹಳ್ಳದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಆಂಗ್ಲ ಮಾಧ್ಯಮದ ಎಲ್‌ಕೆಜಿ ತರಗತಿ ಪ್ರಾರಂಭೋತ್ಸವವನ್ನು ನೆರವೇರಿಸಿ ಮಾತನಾಡಿದ ಅವರು, ಸರಕಾರಿ ಶಾಲೆ ಮತ್ತು ಖಾಸಗಿ ಶಾಲೆಗಳ ನಡುವೆ ಹೋಲಿಕೆ ಮಾಡುವುದು ಸರಿಯಲ್ಲ. ಪ್ರಸ್ತುತ ಕಾಲಘಟ್ಟದಲ್ಲಿ ಆಂಗ್ಲ ಭಾಷೆಯ ಕಲಿಕೆ ಅನಿವಾರ್ಯವಾಗಿದ್ದು, ಈ ನಿಟ್ಟಿನಲ್ಲಿ ಸರಕಾರವು ಆಂಗ್ಲ ಮಾಧ್ಯಮ ಭಾಷಾ ತರಗತಿಗಳಿಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು. ಶಾಲೆಯ ಅಭಿವೃದ್ಧಿ ಕಾಮಗಾರಿಗಳಿಗಾಗಿ 5 ಲಕ್ಷ ರೂ. ಶಾಸಕರ ಅನುದಾನದಿಂದ ನೀಡುವುದಾಗಿ ಘೋಷಣೆ ಮಾಡಿದರು.

ಗದ್ದೆಹಳ್ಳ ಸರಕಾರಿ ಶಾಲೆಗೆ ಸೇರಿದ ಮೈದಾನವನ್ನು ಟರ್ಫ್ ಮೈದಾನವನ್ನಾಗಿ ಪರಿವರ್ತನೆಗೊಳಿಸಬೇಕೆಂಬ ಆಮ್ಮೆಟ್ಟಿ ಫುಟ್ಬಾಲ್ ಕ್ಲಬ್ ಬೇಡಿಕೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ 2 ಶಾಲೆಗಳ ಶಾಲಾಭಿವೃದ್ಧಿ ಸಮಿತಿಯಲ್ಲಿ ನಿರ್ಧಾರವಾಗಿ ಸರಕಾರದ ಅನುಮತಿ ಪಡೆಯಬೇಕಾಗಿದೆ. ಆದರೆ ಸಂಜೆ ವೇಳೆ ಮಾತ್ರ ಕ್ಲಬ್ ಮತ್ತು ಸಾರ್ವ ಜನಿಕರಿಗೆ ಮೈದಾನ ಒದಗಿಸಲಾಗುವುದು. ಯಾವುದೇ ಅನ್ಯ ಚಟುವಟಿಕೆಗಳಿಗೆ ಮೈದಾನವನ್ನು ದುರ್ಬಳಕೆ ಮಾಡಬಾರದು. ಈ ಬಗ್ಗೆ ಸಮಿತಿಗಳ ಸಭೆಯ ಬಳಿಕ ಮುಂದು ವರೆಯೋಣ ಎಂದು ಹೇಳಿದರು.

ಸುಂಟಿಕೊಪ್ಪ ಗ್ರೇಡ್ 1 ಗ್ರಾಪಂ ಮಾಜಿ ಅಧ್ಯಕ್ಷ ಪಿ.ಆರ್. ಸುನಿಲ್‌ಕುಮಾರ್ ಮಾತನಾಡಿ, ಶಾಲೆಗೆ ಅತ್ಯವಶ್ಯಕವಾಗಿ ತಡೆಗೋಡೆ ಮತ್ತು ಶೌಚಾಲಯ ನಿರ್ಮಿಸಿ ಕೊಡಬೇಕೆಂದು ಮನವಿ ಮಾಡಿದರೆ, ಮುಂದಿನ ವರ್ಷ ಶಾಲೆ ಬೆಳ್ಳಿ ಮಹೋತ್ಸವವನ್ನು ಆಚರಿಸುತ್ತಿದ್ದು ಗ್ರಾಮಸ್ಥರು ಸಕಲ ಸಹಕಾರವನ್ನು ನೀಡುವ ಮೂಲಕ ಅದ್ಧೂರಿಯಾಗಿ ಸಮಾರಂಭವನ್ನು ಆಯೋಜಿಸಲು ಚಿಂತಿಸಲಾಗಿದೆ ಎಂದು ಗ್ರಾಪಂ. ಮಾಜಿ ಅಧ್ಯಕ್ಷ ಕೆ.ಇ.ಕರೀಂ ತಿಳಿಸಿದರು. ಠಾಣಾಧಿಕಾರಿ ಮೋಹನ್ ರಾಜ್, ಯಂಕನ ಗಿರೀಶ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿ.ಜಿ.ಲೋಕೇಶ್, ಹೆಚ್.ಯು ರಫೀಕ್ ಖಾನ್, ಪಿ.ಆರ್.ಸುಕುಮಾರ್ ಮಾತನಾಡಿದರು.

ಅಧ್ಯಕ್ಷತೆಯನ್ನು ಪ್ರಾಥಮಿಕ ಶಾಲಾ ಎಸ್‌ಡಿಎಂಸಿ ಅಧ್ಯಕ್ಷೆ ಸಕೀನ ವಹಿಸಿದ್ದರು. ಗ್ರಾ.ಪಂ.ಮಾಜಿ ಅಧ್ಯಕ್ಷೆ ಶಿವಮ್ಮ ಮಹೇಶ್, ಮಾಜಿ ಸದಸ್ಯೆ ಗೀತಾ, ಯಂಕನ ಶ್ರೀರಾಮ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷೆ ಸೌಭಾಗ್ಯ, ಎಸ್‌ಡಿಎಂಸಿ ಅಧ್ಯಕ್ಷ ರಶೀದ್, ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ವೈ.ಸಿ.ಕುಮಾರ್, ಸುಂಟಿಕೊಪ್ಪ ಗದ್ದೆಹಳ್ಳ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಹೇಮಾವತಿ ಮತ್ತಿತರರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಡಿಸಿಯಿಂದ ವಿದ್ಯಾರ್ಥಿವೇತನ ವಿತರಣೆ



ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಿದ ಜಿಲ್ಲಾಧಿಕಾರಿ ಶ್ರೀರೂಪ.

ಚಾಮರಾಜನಗರ, ಜೂ.22– ಜಿಲ್ಲಾಧಿಕಾರಿ ಶ್ರೀರೂಪ ಇಂದು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ ವಿವಿಧ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ವತಿಯಿಂದ ನೀಡುವ 10 ಸಾವಿರ ರೂ.ಗಳ ವಿದ್ಯಾರ್ಥಿವೇತನ ವಿತರಿಸಿದರು.

ನಗರದ ಜಿಲ್ಲಾಧಿಕಾರಿಗಳ ಕೊಠಡಿಯಲ್ಲಿಂದು ಚಾಮರಾಜನಗರದಲ್ಲಿ ಶಾಖಾ ಕಚೇರಿ ಹೊಂದಿರುವ ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ಸಂಸ್ಥೆಯಲ್ಲಿ ಸದಸ್ಯರಾಗಿರುವ ತಲಾ 8 ಪೋಷಕರ ಮಕ್ಕಳಿಗೆ ಮುಂದಿನ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡುವ ಸಲುವಾಗಿ ನೀಡಲಾಗುವ ವಿದ್ಯಾರ್ಥಿವೇತನ ಹಾಗೂ ಪ್ರಮಾಣಪತ್ರಗಳನ್ನು ವಿತರಿಸಿ ಶುಭ ಹಾರೈಸಿದರು.

ಇದೇ ವೇಳೆ ಜಿಲ್ಲಾಧಿಕಾರಿ ಶ್ರೀರೂಪ ಅವರು ವಿದ್ಯಾರ್ಥಿಗಳೊಂದಿಗೆ ಆತ್ಮೀಯವಾಗಿ ಮಾತನಾಡಿ ಮುಂದಿನ ಹಂತದ ಶೈಕ್ಷಣಿಕ ವಿದ್ಯಾಭ್ಯಾಸದ ಬಗ್ಗೆ ಮಕ್ಕಳನ್ನು ವಿಚಾರಿಸಿದರು. ಭವಿಷ್ಯದಲ್ಲಿ ಏನು ಆಗಬೇಕೆಂಬ ಉದ್ದೇಶ ಹಾಗೂ ಗುರಿಗಳನ್ನು ಹೊಂದಿದ್ದೀರಿ ಎಂದು ಮಕ್ಕಳನ್ನು ಕೇಳಿದರು. ಇದಕ್ಕುತ್ತರಿಸಿದ ಮಕ್ಕಳು ಉನ್ನತ ವಿದ್ಯಾಭ್ಯಾಸ ಪಡೆಯಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿದರು.

ಬಳಿಕ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ವತಿಯಿಂದ ಸಂಸ್ಥೆಯಲ್ಲಿ ಸದಸ್ಯರಾಗಿರುವ ಪೋಷಕರ ಮಕ್ಕಳನ್ನು ಶೈಕ್ಷಣಿಕವಾಗಿ ಉತ್ತೇಜಿಸುವ ಸಲುವಾಗಿ ಕಳೆದ ಮೂರು ವರ್ಷಗಳಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ರೂಪದಲ್ಲಿ ಆರ್ಥಿಕ ನೆರವು ನೀಡಲಾಗುತ್ತಿದೆ ಎಂದರು.

ಮುಂದಿನ ದಿನಗಳಲ್ಲಿ ಪಿಯುಸಿ ಪರೀಕ್ಷೆಯಲ್ಲಿಯೂ ಹೆಚ್ಚಿನ ಅಂಕ ಪಡೆದ ಮಕ್ಕಳಿಗೂ ವಿದ್ಯಾರ್ಥಿವೇತನ ನೀಡಲು ನಗರದ ಗ್ರಾಮೀಣ ಕೂಟ ಸಂಸ್ಥೆ ಇಚ್ಚಿಸಿದೆ. ವಿದ್ಯಾರ್ಥಿವೇತನವನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ಸದ್ಬಳಕೆ ಮಾಡಿಕೊಳ್ಳಬೇಕು. ಮಕ್ಕಳು ಉನ್ನತ ವ್ಯಾಸಂಗ ಪಡೆದು ಉತ್ತಮ ಜೀವನ ಕಟ್ಟಿಕೊಳ್ಳಬೇಕು. ಆ ಮೂಲಕ ಮಕ್ಕಳು ತಂದೆತಾಯಿಗಳಿಗೆ ಹಾಗೂ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಜಿಲ್ಲಾಧಿಕಾರಿ ಶೀರೂಪ ಅವರು ಕಿವಿಮಾತು ಹೇಳಿದರು.

ಅಪೂರ್ವ (ಶೇ.98.56), ಸಿಂಚನಾ (ಶೇ.94.88), ತೇಜಸ್ವಿನಿ (ಶೇ.94.24), ಅರ್ಪಿತಾ (ಶೇ.94), ಮಾನಸ (ಶೇ.93.44), ಇಂದುಶ್ರೀ (ಶೇ.91), ಆಶಾ (ಶೇ.90.56) ಹಾಗೂ ಹೇಮಲತಾ (ಶೇ.89.28) ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಾಗಿದ್ದಾರೆ.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಶಿರಸ್ತೇದಾರರಾದ ರಂಗರಾಜು, ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ಸಂಸ್ಥೆಯ ವಲಯ ವ್ಯವಸ್ಥಾಪಕರಾದ ಕೃಷ್ಣ, ಲೋಕೇಶ್, ಶಾಖಾ ವ್ಯವಸ್ಥಾಪಕರಾದ ದಿಲೀಪ್‌ಕುಮಾರ್, ವಿದ್ಯಾರ್ಥಿಗಳ ಪೋಷಕರು, ಇತರರು ಇದೇ ಸಂದರ್ಭದಲ್ಲಿ ಇದ್ದರು.

ಇದಕ್ಕೂ ಮೊದಲು ಕ್ರೆಡಿಟ್ ಆಕ್ಸಿಸ್ ಇಂಡಿಯಾ ಫೌಂಡೇಷನ್ (ಗ್ರಾಮೀಣ ಕೂಟ) ಸಂಸ್ಥೆಯ ವತಿಯಿಂದ ಜಿಲ್ಲಾಡಳಿತ ಭವನ ಆವರಣದಲ್ಲಿ ಗಿಡನೆಟ್ಟು ನೀರೆರೆಯಲಾಯಿತು.

ಚಾಮರಾಜನಗರದಲ್ಲಿ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಬೈಕ್ ರ‍್ಯಾಲಿ



ಮಾದಕ ವಸ್ತುಗಳ ಜಾಗೃತಿ ಮೂಡಿಸುವ ಬೈಕ್ ರ‍್ಯಾಲಿಗೆ ಪೊಲೀಸ್ ಅಧಿಕಾರಿಗಳು ಚಾಲನೆ ನೀಡಿದರು.

ಚಾಮರಾಜನಗರ: ಮಾದಕ ವಸ್ತುಗಳ ಸೇವನೆ ಹಾಗೂ ವ್ಯಸನದ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಚಾಮರಾಜ ನಗರ ಜಿಲ್ಲಾ ಪೊಲೀಸ್ ಇಲಾಖೆ ವತಿ ಯಿಂದ ಸೋಮವಾರ ನಗರದಲ್ಲಿ ಬೈಕ್ ರ‍್ಯಾಲಿ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಿಂದ ಆರಂಭವಾದ ರ‍್ಯಾಲಿಗೆ ಎ.ಎಸ್.ಪಿ. ಶಶಿಧರ್ ಹಾಗೂ ಡಿವೈಎಸ್ಪಿ ಸ್ನೇಹರಾಜ್ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು. ಬಳಿಕ ಬೈಕ್ ರ‍್ಯಾಲಿ ನಗರದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ಮಾದಕ ವ್ಯಸನದ ವಿರುದ್ಧ ಜಾಗೃತಿ ಮೂಡಿಸಿತು.

ಮಾದಕ ವಸ್ತುಗಳ ಸೇವನೆಗೆ ಯುವ ಜನತೆ ಸೇರಿದಂತೆ ವಿವಿಧ ವರ್ಗದ ಜನರು ಬಲಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಮಾದಕ ವ್ಯಸನಗಳಿಂದ ವ್ಯಕ್ತಿ, ಕುಟುಂಬ ಹಾಗೂ ಸಮಾಜದ ಮೇಲೆ ದುಷ್ಪರಿಣಾಮ ಉಂಟಾಗುವುದರಿಂದ ಇಂತಹ ಚಟಗಳಿಂದ ದೂರವಿರುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಅಗತ್ಯವಾಗಿದೆ ಎಂದು ಅಧಿಕಾರಿಗಳು ಹೇಳಿದರು.

ಡಿವೈಎಸ್ಪಿ ಸ್ನೇಹರಾಜ್ ಮಾತನಾಡಿ, ಯುವಕರು ಮಾದಕ ವ್ಯಸನಗಳಿಗೆ ಒಳಗಾಗದಂತೆ ಜಾಗೃತಿ ಮೂಡಿಸುವುದು ಪೊಲೀಸ್ ಇಲಾಖೆಯ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿದೆ. ಈ ನಿಟ್ಟಿನಲ್ಲಿ ಬೈಕ್ ರ‍್ಯಾಲಿ ಸೇರಿದಂತೆ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ರ‍್ಯಾಲಿಯ ವೇಳೆ ಪೊಲೀಸ್ ಸಿಬ್ಬಂದಿಗಳು ಮಾದಕ ವ್ಯಸನ ವಿರೋಧಿ ಸಂದೇಶಗಳನ್ನು ಒಳಗೊಂಡ ಪ್ಲೇಕಾರ್ಡ್‌ಗಳನ್ನು ಪ್ರದರ್ಶಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು. ಕಾರ್ಯಕ್ರಮದಲ್ಲಿ ಸಂಚಾರಿ ಪೊಲೀಸ್ ಠಾಣೆಯ ಹನುಮಂತ್ ಉಪ್ಪಾರ್, ಪಟ್ಟಣ ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸೇರಿದಂತೆ ಜಿಲ್ಲಾ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

ಶಾಲಾ ಮಕ್ಕಳಿಗೆ ಶಾಲಾ ಬ್ಯಾಗ್, ನೋಟ್ ಪುಸ್ತಕ ವಿತರಣೆ



ಗುಂಡ್ಲುಪೇಟೆ, ಜೂ.22– ತಾಲೂಕಿನ ಹೊನ್ನ ಶೆಟ್ಟರಹುಂಡಿ ಗ್ರಾಮದ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಾನಿಗಳಾದ ಸಂತೋಷ್ ಹಾಗೂ ರಾಜೇಶ್ ಅವರು ಕೊಡುಗೆಯಾಗಿ ನೀಡಿದ ಒಂದು ಲಕ್ಷ ಮೌಲ್ಯದ ಶಾಲಾಬ್ಯಾಗ್ ಹಾಗೂ ನೋಟ್‌ಬುಕ್‌ಗಳನ್ನು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ವಿತರಣೆ ಮಾಡಿದರು.

ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಎಸ್.ಮಹೇಶ್, ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್.ಸ್ವಾಮಿ, ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಸತೀಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಮನು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಶೋಭಾ, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳಾದ ಶಿವಸ್ವಾಮಿ, ಸಹಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ನಾಯಕ ಜನಾಂಗ ಶಿಕ್ಷಣಕ್ಕೆ ಆದ್ಯತೆ ನೀಡಿ

ರಾಜವೀರ ಮದಕರಿ ನಾಯಕ ಪುತ್ಥಳಿಗಳು ಮತ್ತು ನೂತನವಾಗಿ ನಿರ್ಮಿಸಿರುವ ಮಹಾದ್ವಾರ ಉದ್ಘಾಟನೆ ಪೂಜಾ ಹೋಮ, ಪುಟಾಣಿ ಮಕ್ಕಳ ಹಾಲರವೆ, ಮಂಟೆಸ್ವಾಮಿ ದೇವರ ಮೆರವಣಿಗೆಗೆ ಚಾಲನೆ ನೀಡಿದ ಸಂದರ್ಭ.



ಚಾಮರಾಜನಗರ: ನಾಯಕ ಜನಾಂಗದವರು ತಮ್ಮ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡಿ ಅವರ ಭವಿಷ್ಯ ಉಜ್ವಲಗೊಳಿಸಬೇಕು ಎಂದು ದಾವಣಗೆರೆಯ ಹರಿಹರ ತಾಲೂಕಿನ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಪೀಠದ ಪ್ರಸನ್ನನಂದ ಪುರಿ ಸ್ವಾಮೀಜಿ ಸಲಹೆ ನೀಡಿದರು.

ನಗರದ ರಾಮಸಮುದ್ರದ ನಾಯಕರ ಬಡಾವಣೆಯಲ್ಲಿ ಶ್ರೀಆಂಜನೇಯಸ್ವಾಮಿ, ಶ್ರೀಮಹರ್ಷಿ ವಾಲ್ಮೀಕಿ, ರಾಜವೀರ ಮದಕರಿ ನಾಯಕ ಪುತ್ಥಳಿಗಳು ಮತ್ತು ನೂತನವಾಗಿ ನಿರ್ಮಿಸಿರುವ ಮಹಾದ್ವಾರ ಉದ್ಘಾಟನೆ ಪೂಜಾ ಹೋಮ, ಪುಟಾಣಿ ಮಕ್ಕಳ ಹಾಲುರವೆ, ಮಂಟೆಸ್ವಾಮಿ ದೇವರ ಮೆರವಣಿಗೆ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯ ಸರ್ಕಾರ ಪರಿಶಿಷ್ಟ ಪಂಗಡ ಜನಾಂಗಕ್ಕೆ ಹೆಚ್ಚಿನ ಮೀಸಲಾತಿ ಸೌಲಭ್ಯ ಕಲ್ಪಿಸಬೇಕೆಂದು ಇತ್ತೀಚಿಗೆ ಸಚಿವ ಜಾರಕಿಹೊಳಿ ನೇತೃತ್ವದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸಂಪರ್ಕ ಮಾಡಿ ಮನವಿ ಸಲ್ಲಿಸಿದ್ದೇವೆ. ಕೂಡಲೇ ಸರ್ಕಾರ ಮೀಸಲಾಯಿ ಸೌಲಭ್ಯ ಜಾರಿ ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಐದು ಸಾವಿರಕ್ಕೂ ಹೆಚ್ಚು ಭಕ್ತಾದಿಗಳಿಗೆ ಅನ್ನದಾಸೋಹ ನಡೆಯಿತು. ಈ ವೇಳೆ ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜಿಲ್ಲಾ ಸರ್ಕಾರಿ ನೌಕರ ಸಂಘದ ನಿರ್ದೇಶಕ ಚಂದ್ರಶೇಖರ್, ನಗರಸಭೆ ಮಾಜಿ ಅಧ್ಯಕ್ಷ ಸುರೇಶ್, ಮಾಜಿ ಉಪಾಧ್ಯಕ್ಷ ಸುಧಾ, ಮುಖಂಡರಾದ ಜಯಸುಂದರ್, ಬುಲೆಟ್ ಚಂದ್ರು, ವಿರಾಟ್ ಶಿವು ಸೇರಿದಂತೆ ಇತರರು ಹಾಜರಿದ್ದರು.

ಹುಲಿ ದಾಳಿಗೆ 4 ಮೇಕೆಗಳು ಬಲಿ



ಚಾಮರಾಜನಗರ: ಹುಲಿ ದಾಳಿಯಿಂದ 4 ಮೇಕೆಗಳು ಸಾವನ್ನಪ್ಪಿರುವ ಘಟನೆ ತಾಲೂಕಿನ ಸಿದ್ದಲಿಂಗಪುರದ ಸಮೀಪ ನಡೆದಿದೆ.

ಗ್ರಾಮದ ಶಿವಣ್ಣ ಶೆಟ್ಟಿ ಎಂಬುವರಿಗೆ ಸೇರಿದ 4 ಮೇಕೆಗಳು ಹುಲಿ ದಾಳಿಗೆ ಬಲಿಯಾಗಿವೆ. ಎಂದಿನಂತೆ ಶಿವಣ್ಣ ಶೆಟ್ಟಿ ಮತ್ತು ಅವರ ಮಗ ಶೇಷಣ್ಣ ತಮ್ಮ 55 ಮೇಕೆಗಳನ್ನು ತಮ್ಮದೆ ಜಮೀನಿಗೆ ಮೇಯಿಸಲು ಕರೆ ತಂದಿದ್ದರು.

ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಸಮೀಪವೇ ಇರುವ ಕರಿಕಲ್ಲು ಕ್ವಾರಿಯಿಂದ ಹುಲಿಯೊಂದು ದಾಳಿಯಿಟ್ಟು 4 ಮೇಕೆಗಳನ್ನು ಕೊಂದು ಹಾಕಿದೆ. ಹುಲಿಯನ್ನು ಕಂಡ ಶೇಷಣ್ಣ ಕೂಗಾಡಿದ್ದಾರೆ. ಕೂಡಲೇ ಹುಲಿ ಮೇಕೆಗಳನ್ನು ಬಿಟ್ಟು ಕಲ್ಲು ಕ್ವಾರಿಯತ್ತ ಪರಾರಿಯಾಗಿದೆ. ಹುಲಿ ದಾಳಿಯಿಂದ 4 ಮೇಕೆಗಳು ಮೃತಪಟ್ಟಿದ್ದು 60 ಸಾವಿರಕ್ಕೂ ಹೆಚ್ಚು ನಷ್ಟವಾಗಿದೆ.

ಘಟನೆಯಿಂದ ಸಿದ್ದಲಿಂಗಪುರ ಹಾಗೂ ಸುತ್ತಲಿನ ಗ್ರಾಮಗಳ ಜನರು ಆತಂಕಗೊಂಡಿದ್ದಾರೆ. ಹುಲಿ ದಾಳಿ ವಿಷಯ ತಿಳಿದ ಚಾಮರಾಜನಗರ ಪ್ರಾದೇಶಿಕ ವಲಯಾರಣ್ಯದ ಅರಣ್ಯ ರಕ್ಷಕರಾದ ಕೃಷ್ಣಮೂರ್ತಿ, ಶೇಷಾದ್ರಿ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು.

ಹುಲಿ, ಚಿರತೆ ಹಾವಳಿಯಿಂದ ಖುಷ್ಕಿ ಹಾಗೂ ಪಂಪ್‌ಸೆಟ್ ಜಮೀನುಗಳಿಗೆ ಹೋಗಿ ಬರಲು ಭಯವಾಗುತ್ತಿದೆ. ದನಗಾಹಿಗಳು ಜಾನುವಾರುಗಳನ್ನು ಮೇಯಿಸಲು ಆತಂಕಗೊಂಡಿದ್ದಾರೆ. ಅರಣ್ಯ ಇಲಾಖೆಯವರು ಕಾರ್ಯಾಚರಣೆ ನಡೆಸಿ ಹುಲಿ, ಚಿರತೆಗಳನು ಸೆರೆ ಹಿಡಿಯಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಸ್ಕೌಟ್ ಕಾರ್ಯಕ್ರಮ ವಿಸ್ತರಿಸಿ: ಸಿಎಂ ಡಿ.ಕೆ. ಶಿವಕುಮಾರ್ ಸಲಹೆ

ಉದ್ಯೋಗಿಗಳಾಗುವುದಕ್ಕಿಂತ ಉದ್ಯೋಗದಾತರಾಗುವುದು ನಿಮ್ಮ ಗುರಿಯಾಗಲಿ



ಬೆಂಗಳೂರು, ಜೂ.22: ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಸ್ಕೌಟ್ ಕಾರ್ಯಕ್ರಮವನ್ನು 3 ವರ್ಷಗಳಿಗೆ ಸೀಮಿತಗೊಳಿಸದೇ, ಇದನ್ನು ಹೆಚ್ಚಿನ ಅವಧಿಗೆ ವಿಸ್ತರಿಸಿ" ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಮತ್ತು ಬ್ರಿಟಿಷ್ ಕೌನ್ಸಿಲ್ ಸಹಯೋಗದೊಂದಿಗೆ ಅತ್ಯುತ್ತಮ ಪ್ರತಿಭಾವಂತ ಪದವಿಪೂರ್ವ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾದ SCOUT-2.0 ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಚಾಲನೆ ನೀಡಿ ಮಾತನಾಡಿದರು.

ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಭೇಟಿ ಮಾಡಿರುವುದಕ್ಕೆ ಸಂತೋಷವಾಗಿದೆ. ಕರ್ನಾಟಕ ಎಂದರೆ ಬೆಂಗಳೂರು ಮಾತ್ರವಲ್ಲ. ಚಾಮರಾಜನಗರದಿಂದ ಬೀದರ್‌ವರೆಗೆ ಎಲ್ಲಾ ಗ್ರಾಮೀಣ ಪ್ರದೇಶದವರೆಗೆ ಎಲ್ಲಾ ಭಾಗದ ವಿದ್ಯಾರ್ಥಿಗಳು ಇದ್ದಾರೆ. ಎಲ್ಲಾ ವಿವಿಗಳು ಈ ಜವಾಬ್ದಾರಿ ವಹಿಸಿಕೊಂಡಿರುವುದು ಸಂತೋಷದ ವಿಚಾರ. ಬ್ರಿಟೀಷರು ಇಲ್ಲಿ ಆಳ್ವಿಕೆ ಮಾಡಿದ್ದರೂ ಅವರೊಂದಿಗೆ ಈ ಸಹ ಯೋಗ ಹಳೆಯದಾಗಿದೆ ಎಂದರು.

ಜ್ಞಾನಗಳು, ಆಲೋಚನೆಗಳ ವಿನಿಮಯ ಮುಂದುವರಿಸುತ್ತಿದ್ದೇವೆ. ಈ ಕಾರ್ಯಕ್ರಮದ ಮೂಲಕ ಕರ್ನಾಟಕ ಸರ್ಕಾರದ ಜೊತೆಗೆ ಕೈಜೋಡಿಸಿರುವ ಕೌನ್ಸಿಲ್‌ಗೆ ಧನ್ಯವಾದ ತಿಳಿಸುತ್ತೇನೆ. ನಾನು ಆಯ್ಕೆಯಲ್ಲಿ ಶಿಕ್ಷಣತಜ್ಞ, ಶಿಕ್ಷಣ ಎಲ್ಲರಿಗೂ ಅತಿ ಮುಖ್ಯವಾದುದು. ಈ ವಿದ್ಯಾರ್ಥಿಗಳು ನಮ್ಮ ರಾಯಭಾರಿಗಳು. ನಾಯಕರುಗಳನ್ನು ತಯಾರು ಮಾಡುವವನೇ ನಿಜವಾದ ನಾಯಕ. ಇಲ್ಲಿರುವ ವಿದ್ಯಾರ್ಥಿಗಳು ನಾಯಕರುಗಳೇ. ನೀವೆಲ್ಲರೂ ಸರಿಯಾದ ಹಾದಿಯಲ್ಲಿದ್ದೀರಿ. ನೀವು ಕರ್ನಾಟಕದ ಪ್ರತಿನಿಧಿಯಾಗಿದ್ದು, ನಿಮ್ಮ ಭವಿಷ್ಯ ಬದಲಿಸಿ ಕೊಳ್ಳಲು ಇದು ಉತ್ತಮ ಅವಕಾಶವಾಗಿದೆ ಎಂದರು.

ಕರ್ನಾಟಕ ಹಾಗೂ ಬೆಂಗಳೂರು ಪ್ರತಿಭಾನ್ವಿತರ ಕೇಂದ್ರ. ಇಡೀ ವಿಶ್ವ ನಮ್ಮ ಕಡೆ ನೋಡುತ್ತಿದೆ. ಕರ್ನಾಟಕದ ಮೂಲಕ ಭಾರತವನ್ನು ನೋಡಲಾಗುತ್ತಿದೆ. ನೀವು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಎಂದು ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ನಮ್ಮ ಕಾಲದಲ್ಲಿ ನಾವು ಕಷ್ಟಪಟ್ಟು ಓದಬೇಕಿತ್ತು. ಈಗ ಎಲ್ಲಾ ಮಾಹಿತಿ ನಿಮ್ಮ ಬೆರಳತುದಿಯಲ್ಲಿವೆ. ಈಗ ಶಿಕ್ಷಕರು ವಿದ್ಯಾರ್ಥಿಗಳಿಂದಲೇ ಪಾಠ ಮಾಡಿಸುವ ಮಟ್ಟಿಗೆ ಕಾಲ ಬದಲಾವಣೆಯಾಗಿದೆ. ಪ್ರತಿಯೊಬ್ಬರು ಸಮರ್ಥರು, ನೀವೆಲ್ಲರೂ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಮಾಡುತ್ತಿದ್ದೀರಿ. ಈ ಸ್ಕೌಟ್ ಕಾರ್ಯಕ್ರಮದಲ್ಲಿ ನಿಮ್ಮ ಆಲೋಚನೆ ದೂರದೃಷ್ಟಿಯಾಗಿರಬೇಕು. ನಿಮ್ಮ ಮೇಲೆ ಸಾಕಷ್ಟು ನಿರೀಕ್ಷೆಗಳಿವೆ ಎಂದು ತಿಳಿಸಿದರು.

ನಮ್ಮ ಸರ್ಕಾರ ಹಾಗೂ ವಿವಿಗಳು ಈ ಕಾರ್ಯಕ್ರಮ ವಿಸ್ತರಣೆ ಮಾಡಲು ಸಿದ್ಧವಿದೆ. ನಮ್ಮ ವಿದ್ಯಾರ್ಥಿಗಳಿಗೆ ಅವಕಾಶ ಸಿಗಬೇಕು. ಇಲ್ಲಿಂದ ಬ್ರಿಟನ್ ಗೆ ಹೋಗಿ ಅಲ್ಲೇ ನೆಲೆಸಬೇಡಿ, ಅಲ್ಲಿ ವ್ಯಾಸಂಗ ಮಾಡಿ ಭಾರತಕ್ಕೆ ಮರಳಿ, ಇಲ್ಲಿ ಕೆಲಸ ಮಾಡಿ. ಇಲ್ಲಿಗೆ ಬಂದು ನೀವು ನಿಮ್ಮ ಕ್ಷೇತ್ರದಲ್ಲಿ ಬೆಳೆಯಿರಿ. ವಿವಿಗಳ ಉಪಕುಲಪತಿಗಳು ಇನ್ನಷ್ಟು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ವಿದ್ಯಾರ್ಥಿಗಳ ಪ್ರತಿಭೆಗೆ ಅನುಗುಣವಾಗಿ ಅವರನ್ನು ಗುರುತಿಸಿ, ಅವರಿಗೆ ಅವಕಾಶ ಕಲ್ಪಿಸಬೇಕು. ಕಳೆದ ವರ್ಷ ಗ್ರಾಮೀಣ ಭಾಗದ ಮಕ್ಕಳು ಉತ್ತಮ ಸಾಧನೆ ಮಾಡಿದ್ದನ್ನು ನೋಡಿದ್ದೇವೆ ಎಂದು ಹೇಳಿದರು.

ಉದ್ಯೋಗಿಗಳಾಗುವುದಕ್ಕಿಂತ ಉದ್ಯೋಗದಾತರಾಗುವುದು ನಿಮ್ಮ ಗುರಿಯಾಗಲಿ

ಇದು ಕೇವಲ ಪದವಿ ಪಡೆಯುವ ಕಾರ್ಯಕ್ರಮವಲ್ಲ. ಯುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿ ಅವರ ಕ್ಷೇತ್ರಗಳಲ್ಲಿ ಅವರನ್ನು ನಾಯಕರನ್ನಾಗಿ ಬೆಳೆಸುವುದಾಗಿದೆ. ಈ ಅವಕಾಶ ಕೆಲವರಿಗೆ ಮಾತ್ರ ಸಿಗುತ್ತದೆ. ನೀವು ಕನಸು ಕಾಣಬೇಕು, ಆ ಕನಸು ನನಸಾಗಿಸಿಕೊಳ್ಳಲು ಹಂಬಲಿಸಬೇಕು. ಅದಕ್ಕಾಗಿ ಬದ್ಧರಾಗಿರಬೇಕು, ಶಿಸ್ತಿನ ಪರಿಶ್ರಮ ಹಾಕಬೇಕು. ನೀವು ನಿಮ್ಮ ಜೀವನದಲ್ಲಿ ಯಾವುದೇ ಹಂತಕ್ಕೆ ಹೋದರೂ ನಿಮ್ಮ ಮೂಲವನ್ನು ಮಾತ್ರ ಮರೆಯಬಾರದು. ನೀವು ನಿಮ್ಮ ಮೂಲವನ್ನು ಮರೆತರೆ ಯಶಸ್ಸು ಸಾಧಿಸಲು ಸಾಧ್ಯವಿಲ್ಲ. ಉದ್ಯೋಗಿಗಳಾಗುವುದಕ್ಕಿಂತ ಉದ್ಯೋಗದಾತರಾಗುವುದು ನಿಮ್ಮ ಗುರಿಯಾಗಲಿ ಎಂದು ಸಲಹೆ ನೀಡಿದರು.

ಅಧಿವೇಶನದಲ್ಲಿ ಚರ್ಚೆ ಮಾಡಲಿ: ಸಿಎಂ

ಬಿಡದಿ ಟೌನ್ ಶಿಪ್ ವಿಚಾರವಾಗಿ ಎಚ್ ಡಿ ಕುಮಾರಸ್ವಾಮಿ ಪರವಾಗಿ ಜೆಡಿಎಸ್ ನವರು ಅಧಿವೇಶನದಲ್ಲಿ ಚರ್ಚೆ ಮಾಡಲಿ, ಉತ್ತರ ಕೊಡೋಣ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ವಿಧಾನಸೌಧದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಸೋಮವಾರ ಪ್ರತಿಕ್ರಿಯೆ ನೀಡಿದರು. ಸಿಎಂ ಡಿ ಕೆ ಶಿವಕುಮಾರ್ ಅವರು ಬೈರಮಂಗಲಕ್ಕೆ ಚರ್ಚೆಗೆ ಬರಲಿ ಎಂದು ಕುಮಾರಸ್ವಾಮಿ ಅವರು ಸವಾಲು ಹಾಕಿದ್ದಾರಲ್ಲಾ ಎಂದು ಕೇಳಿದಾಗ, ನಾನು ಈಗ ಏನನ್ನೂ ಮಾತನಾಡುವುದಿಲ್ಲ. ಹಿಂದೆಯೇ ಚರ್ಚೆಗೆ ಕರೆದಿದ್ದೆ. ಆದರೆ ಬರಲಿಲ್ಲ. ಮುಂದಿನ ಅಧಿವೇಶನದಲ್ಲಿ ಅವರ ಪಕ್ಷದ, ಇತರ ಅನುಭವಿ ರಾಜಕಾರಣಿಗಳ ಮೂಲಕ ಚರ್ಚೆ ಮಾಡಿಸಲಿ" ಎಂದರು.

ಕುಮಾರಸ್ವಾಮಿ ಅವರು ದಾಖಲೆ ಬಿಡುಗಡೆ ಮಾಡಿದ್ದಾರೆ ಎಂದು ಕೇಳಿದಾಗ, ಅವರಿಗೆ ಶುಭವಾಗಲಿ ಎಂದು ಪ್ರತಿಕ್ರಿಯಿಸಿದರು.

ಸಾಮಾಜಿಕ ಮಾಧ್ಯಮಗಳ ಮೂಲಕ ಶ್ರೀಮಂತರಿಗೆ ಬಲೆ

ಲಕ್ಷಾಂತರ ರೂ. ಪಡೆದು ವಂಚಿಸುತ್ತಿದ್ದ ಕಿರುತೆರೆ ನಟಿಯ ಬಂಧನ



ಬೆಂಗಳೂರು: ಸಾಮಾಜಿಕ ಮಾಧ್ಯಮಗಳ ಮೂಲಕ ಶ್ರೀಮಂತರನ್ನು ಪರಿಚಯ ಮಾಡಿಕೊಂಡು, ಸ್ನೇಹದ ನಾಟಕವಾಡಿ ಬಳಿಕ ಲಕ್ಷಾಂತರ ರೂಪಾಯಿ ಹಣ ಪಡೆದು ವಂಚಿಸುತ್ತಿದ್ದ ಕಿರುತೆರೆ ನಟಿ ವನಿತಾ ಅವರನ್ನು ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಬಂಧಿತ ನಟಿ ವನಿತಾ ಮೊದಲು ಸಾಮಾಜಿಕ ಮಾಧ್ಯಮಗಳಲ್ಲಿ ತನ್ನನ್ನು ತಾನು ಕಿರುತೆರೆ ನಟಿ ಎಂದು ಪರಿಚಯ ಮಾಡಿಕೊಳ್ಳುತ್ತಿದ್ದಳು. ನಂತರ ಶ್ರೀಮಂತರನ್ನು ಟಾರ್ಗೆಟ್ ಮಾಡಿ ಅವರೊಂದಿಗೆ ಸಲುಗೆ ಬೆಳೆಸಿಕೊಳ್ಳುತ್ತಿದ್ದಳು. ನಿರಂತರವಾಗಿ ಮಾತನಾಡಿ ನಂಬಿಕೆ ಗಳಿಸುತ್ತಿದ್ದಳು ಎಂದು ಆರೋಪಿಸಲಾಗಿದೆ.

ಸಾಮಾಜಿಕ ಮಾಧ್ಯಮಗಳ ಮೂಲಕ ಪರಿಚಯವಾದ ಸ್ನೇಹಿತರ ಬಳಿ ತಾನು ತೀವ್ರ ಕಷ್ಟದಲ್ಲಿದ್ದೇನೆ ಎಂದು ನಂಬಿಸುತ್ತಿದ್ದ ನಟಿ ವನಿತಾ, ನನ್ನ ಚಿನ್ನದ ಆಭರಣಗಳನ್ನು ಅಡವಿಟ್ಟಿದ್ದೇನೆ, ಅದನ್ನು ಬಿಡಿಸಿಕೊಳ್ಳಲು ತುರ್ತಾಗಿ ಹಣ ಬೇಕಾಗಿದೆ ಎರಡರಿಂದ ಮೂರು ದಿನಗಳಲ್ಲಿ ಸಾಲದ ಹಣವನ್ನು ವಾಪಸ್ ನೀಡುತ್ತೇನೆ ಎಂದು ನಂಬಿಸಿ ಹಣ ಪಡೆಯುತ್ತಿದ್ದಳು. ಅತ್ಯಂತ ಚಾಲಾಕಿಯಾಗಿದ್ದ ಈಕೆ, ಸಿಸಿಟಿವಿ ಕ್ಯಾಮರಾಗಳು ಇಲ್ಲದ ಜಾಗಗಳನ್ನು ಹುಡುಕಿ ಅಲ್ಲಿಗೆ ಹಣ ನೀಡುವವರನ್ನು ಕರೆಸಿಕೊಂಡು ನಗದು ಪಡೆದು ಪರಾರಿಯಾಗುತ್ತಿದ್ದಳು ಎಂದು ಆರೋಪಿಸಲಾಗಿದೆ.

ಒಮ್ಮೆ ಕೈಗೆ ಹಣ ಸಿಗುತ್ತಿದ್ದಂತೆ ನಟಿ ವನಿತಾ ತನ್ನ ಅಸಲಿ ರೂಪ ತೋರಿಸುತ್ತಿದ್ದಳು. ಹಣ ಕೊಟ್ಟವರು ಕರೆ ಮಾಡಿದರೆ ಸ್ವೀಕರಿಸುತ್ತಿರಲಿಲ್ಲ. ಕರೆ ಸ್ವೀಕರಿಸುತ್ತಿಲ್ಲವೆಂದು ಮೆಸೇಜ್ ಮಾಡಿದರೂ ಯಾವುದೇ ಪ್ರತಿಕ್ರಿಯೆ ನೀಡದೆ ವಂಚಿಸುತ್ತಿದ್ದಳು ಎನ್ನಲಾಗಿದೆ.

'ಇದೇ ರೀತಿ ಈ ನಟಿಯನ್ನು ನಂಬಿ ಹಣ ಕಳೆದುಕೊಂಡ ಯುವಕನೊಬ್ಬ ಮಹಾಲಕ್ಷ್ಮೀ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈಕೆಯ ವಂಚನೆ ಜಾಲ ಕೇವಲ ಒಂದು ಠಾಣೆಗೆ ಸೀಮಿತವಾಗಿರಲಿಲ್ಲ. ಗೋವಿಂದರಾಜ ನಗರ ಹಾಗೂ ಜ್ಞಾನಭಾರತಿ ಪೊಲೀಸ್ ಠಾಣೆಗಳಲ್ಲೂ ಈಕೆಯ ವಿರುದ್ಧ ಈ ಹಿಂದೆ ಹಲವು ದೂರುಗಳು ದಾಖಲಾಗಿದ್ದವು.

ಸದ್ಯ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಮಹಾಲಕ್ಷ್ಮೀ ಲೇಔಟ್ ಠಾಣೆ ಪೊಲೀಸರು ತನಿಖೆ ನಡೆಸಿ, ವಂಚಕಿ ಕಿರುತೆರೆ ನಟಿ ವನಿತಾಳನ್ನು ಜೈಲಿಗಟ್ಟಿದ್ದಾರೆ. ಈಕೆಯ ಜಾಲಕ್ಕೆ ಬಿದ್ದಿರುವ ಇನ್ನೂ ಹಲವು ಸಂತ್ರಸ್ತರ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.

ಶಿಂಧೆ ಸಮ್ಮುಖದಲ್ಲಿ ಶಿವಸೇನೆ ಸೇರಿದ ಉದ್ಧವ್ ಸೇನೆಯ ಆರು ಸಂಸದರು

ವಿಭಜನೆ ಅಧಿಕೃತ!

ಮುಂಬೈ: ಮಹಾರಾಷ್ಟ್ರ ರಾಜಕೀಯದಲ್ಲಿ ಭಾರೀ ಸದ್ದು ಮಾಡಿದ 'ಆಪರೇಷನ್ ಟೈಗರ್' ಸೋಮವಾರ ಕೊನೆಗೂ ಸಕ್ಸಸ್ ಆಗಿದ್ದು, ಶಿವಸೇನೆಯ(ಯುಬಿಟಿ) ಆರು ಬಂಡಾಯ ಸಂಸದರು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಆಡಳಿತಾರೂಢ ಶಿವಸೇನೆಗೆ ಸೇರ್ಪಡೆಯಾದರು. ಇದು ಉದ್ಧವ್ ಠಾಕ್ರೆ ನೇತೃತ್ವದ ಪಕ್ಷದೊಳಗಿನ ಬಿಕ್ಕಟ್ಟನ್ನು ಇನ್ನಷ್ಟು ಹೆಚ್ಚಿಸಿದೆ ಮತ್ತು ಅದರ ಸಂಸದೀಯ ಪಕ್ಷ ಅಧಿಕೃತವಾಗಿ ವಿಭಜನೆಯಾಗಿದೆ.

ನವದೆಹಲಿಯಲ್ಲಿ ನಡೆದ ಪ್ರಮುಖ ಶಿವಸೇನೆ(ಯುಬಿಟಿ) ಸಂಸದೀಯ ಪಕ್ಷದ ಸಭೆಗೆ ಗೈರು ಆದ ಐದು ದಿನಗಳ ನಂತರ ಇಂದು ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಸೇನಾ ಯುಬಿಟಿ ಸಂಸದರು ಶಿಂಧೆ ಸಮ್ಮುಖದಲ್ಲಿ ಅವರ ಪಕ್ಷವನ್ನು ಸೇರಿದರು. ಈ ಮೂಲಕ ಶಿವಸೇನೆ (ಯುಬಿಟಿ) ಪಕ್ಷದ ಒಂಬತ್ತು ಲೋಕಸಭಾ ಸಂಸದರಲ್ಲಿ ಆರು ಸಂಸದರು ಶಿಂಧೆ ಬಣ ಸೇರಿದ್ದು, ಈಗ ಕೇವಲ ಮೂವರು ಮಾತ್ರ ಉಳಿದಿದ್ದಾರೆ.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಿಂಧೆ, ಈ ಕ್ರಮವನ್ನು 2022 ರಲ್ಲಿ ಉದ್ಧವ್ ಠಾಕ್ರೆ ವಿರುದ್ಧದ ತಮ್ಮ ದಂಗೆಯ ಮುಂದುವರಿಕೆ ಎಂದು ಬಣ್ಣಿಸಿದರು. 2022ರಲ್ಲಿ ಶಿಂಧೆ ಶಿವಸೇನೆಯನ್ನು ವಿಭಜಿಸಿ ಅಂತಿಮವಾಗಿ ಮುಖ್ಯಮಂತ್ರಿಯಾಗಿದ್ದರು.

ಈ ಲೋಕಸಭಾ ಸದಸ್ಯರು ದಿವಂಗತ ಬಾಳಾಸಾಹೇಬ್ ಠಾಕ್ರೆ ಅವರ ತತ್ವ ಸಿದ್ಧಾಂತಗಳನ್ನು ಅನುಸರಿಸುವ ಮೂಲ ಶಿವಸೇನೆಗೆ ಸೇರಿದ್ದಾರೆ. ನಾಲ್ಕು ವರ್ಷಗಳ ಹಿಂದೆಯೇ ನಾನು ಬಲವಾದ ಹೆಜ್ಜೆ ಇಟ್ಟಿದ್ದೇನೆ ಮತ್ತು ಈಗ ನಾನು ಸಿಕ್ಸರ್ ಹೊಡೆದಿದ್ದೇನೆ (ನಿಷ್ಠೆಯನ್ನು ಬದಲಾಯಿಸಿದ ಸಂಸದರ ಸಂಖ್ಯೆಯನ್ನು ಉಲ್ಲೇಖಿಸುತ್ತಾ) ಎಂದು ಅವರು ಹೇಳಿದರು.

'ಆಪರೇಷನ್ ಟೈಗರ್' ಈಗ ಪೂರ್ಣಗೊಂಡಿದೆ ಮತ್ತು ಯಶಸ್ವಿಯಾಗಿದೆ ಎಂದು ಉಪಮುಖ್ಯಮಂತ್ರಿ ಘೋಷಿಸಿದರು.

ಪಕ್ಷಾಂತರಗೊಂಡ ಆರು ಸಂಸದರು ಯವತ್ಮಾಲ್‌ನ ಸಂಜಯ್ ದೇಶಮುಖ್, ಪರ್ಭಾನಿಯ ಸಂಜಯ್ ಜಾಧವ್, ಮುಂಬೈ ಈಶಾನ್ಯ ಸಂಸದ ಸಂಜಯ್ ದಿನಾ ಪಾಟೀಲ್, ಹಿಂಗೋಲಿಯ ನಾಗೇಶ್ ಪಾಟೀಲ್-ಅಶ್ತಿಕರ್, ಧಾರಾಶಿವ್‌ನ ಓಂಪ್ರಕಾಶ್ ರಾಜೇ ನಿಂಬಾಳ್ಕರ್ ಮತ್ತು ಶಿರಡಿಯ ಭೌಸಾಹೇಬ್ ವಾಕ್ಚೌರೆ. ಈ ಆರು ಸಂಸದರೂ 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿಂಧೆ ನೇತೃತ್ವದ ಶಿವಸೇನೆಯ ಅಭ್ಯರ್ಥಿಗಳನ್ನು ಸೋಲಿಸಿದ್ದರು.

ಬಾಂಗ್ಲಾ ದೇಶದ ಅಕ್ರಮ ವಲಸಿಗರು ಪತ್ತೆಯಾಗಿಲ್ಲ; ರೈಲ್ವೆ ಇಲಾಖೆ ಸ್ಪಷ್ಟನೆ



ಜಿಆರ್‌ಪಿ ಹಾಗೂ ಆರ್‌ಪಿಎಫ್ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿರುವುದು.

ಮೈಸೂರು,ಜೂ.22(ಪಿಎಂ)- ಸರ್ಕಾರಿ ರೈಲ್ವೆ ಪೊಲೀಸ್ (ಜಿಆರ್‌ಪಿ) ಹಾಗೂ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಅಧಿಕಾರಿಗಳ ಪರಿಶೀಲನೆಯಲ್ಲಿ ಶಂಕಿಸಲಾಗಿದ್ದ 34 ವ್ಯಕ್ತಿಗಳು ಬಾಂಗ್ಲಾ ದೇಶದ ಅಕ್ರಮ ವಲಸಿಗರು ಅಲ್ಲವೆಂದು ದೃಢಪಟ್ಟಿದೆ ಎಂದು ರೈಲ್ವೆ ಇಲಾಖೆ ಪ್ರಕಟಣೆ ತಿಳಿಸಿದೆ.

ಮೈಸೂರು ರೈಲು ನಿಲ್ದಾಣದಲ್ಲಿ ಜಿಆರ್‌ಪಿ ಹಾಗೂ ಆರ್‌ಪಿಎಫ್ ವತಿಯಿಂದ ಜಂಟಿ ಪರಿಶೀಲನೆ ವೇಳೆ ಅಕ್ರಮ ವಲಸಿಗರು ಇಲ್ಲವೆಂಬುದು ದೃಢಪಟ್ಟಿದೆ. ಜೂ.21ರ ಭಾನುವಾರ ಬೆಳಗ್ಗೆ ಸುಮಾರು 10.30ಕ್ಕೆ ರೈಲು ಸಂಖ್ಯೆ 22817 (ಹೌರಾ-ಮೈಸೂರು ಎಕ್ಸ್‌ಪ್ರೆಸ್) ಮೂಲಕ ಕೆಲವು ಶಂಕಿತ ವ್ಯಕ್ತಿಗಳು ಪ್ರಯಾಣಿಸುತ್ತಿರುವ ಕುರಿತು ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಮೈಸೂರು ಸರ್ಕಾರಿ ರೈಲ್ವೆ ಪೊಲೀಸ್ ಹಾಗೂ ರೈಲ್ವೆ ರಕ್ಷಣಾ ಪಡೆ ಅಧಿಕಾರಿಗಳು ರೈಲಿನಲ್ಲಿ ಪರಿಶೀಲನೆ ನಡೆಸಿದರು.

ಈ ವೇಳೆ ಹಿಂದೂ ಜಾಗರಣ ವೇದಿಕೆಯ ಕೆಲ ಕಾರ್ಯಕರ್ತರು ರೈಲ್ವೆ ಆವರಣಕ್ಕೆ ಪ್ರವೇಶಿಸಿ ನಡೆಯುತ್ತಿದ್ದ ಪರಿಶೀಲನಾ ಕಾರ್ಯದಲ್ಲಿ ಮಧ್ಯಪ್ರವೇಶ ಮಾಡಿದರು. ಬಳಿಕ ಅವರು ಬಾಂಗ್ಲಾದೇಶದ ಅಕ್ರಮ ವಲಸಿಗರು ಎಂದು ಶಂಕಿಸಿದ 34 ಮಂದಿಯನ್ನು ಹೆಚ್ಚಿನ ಪರಿಶೀಲನೆಗಾಗಿ ಮೈಸೂರು ಜಿಆರ್‌ಪಿ ಪೊಲೀಸ್ ಠಾಣೆಗೆ ಕರೆತರಲಾಯಿತು.

ಮೈಸೂರು ಸರ್ಕಾರಿ ರೈಲ್ವೆ ಪೊಲೀಸರು ಆ 34 ಮಂದಿಯ ಗುರುತು ಹಾಗೂ ದಾಖಲೆಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು. ಪರಿಶೀಲನೆ ವೇಳೆ ಅವರ ವಿರುದ್ಧದ ಆರೋಪ ಸುಳ್ಳು ಎಂಬುದು ಸಾಬೀತಾದ ಹಿನ್ನೆಲೆಯಲ್ಲಿ ಎಲ್ಲಾ 34 ಮಂದಿಯನ್ನು ಬಿಡುಗಡೆ ಮಾಡಲಾಯಿತು.

ಈ ಸಂಬಂಧ ಮೈಸೂರು ಸರ್ಕಾರಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಆರು ಮಂದಿಯ ವಿರುದ್ಧ ಅಪರಾಧ ಸಂಖ್ಯೆ 12/2026ರಡಿ ಭಾರತೀಯ ನ್ಯಾಯ ಸಂಹಿತೆಯ ಸಂಬಂಧಿತ ವಿಧಿಗಳ ಅಡಿಯಲ್ಲಿ ಪ್ರಕರಣ ದಾಖಲಿಸಿದೆ. ಪ್ರಕರಣದ ತನಿಖೆಯನ್ನು ಸರ್ಕಾರಿ ರೈಲ್ವೆ ಪೊಲೀಸರು ಕೈಗೊಂಡಿದ್ದಾರೆ. ಭಾರತ ಸರ್ಕಾರದ ರೈಲ್ವೆ ಸಚಿವಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುವ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಈ ಘಟನೆಗೆ ಸಂಬಂಧ ಯಾವುದೇ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿಲ್ಲ. ತನಿಖೆಯ ಅವಶ್ಯಕತೆಗೆ ಅನುಗುಣವಾಗಿ ಸರ್ಕಾರಿ ರೈಲ್ವೆ ಪೊಲೀಸರಿಗೆ ಆರ್‌ಪಿಎಫ್ ಅಗತ್ಯವಿರುವ ಎಲ್ಲಾ ಸಹಕಾರವನ್ನು ನೀಡುತ್ತಿದೆ.

ಅಧಿಕೃತ ಸಂಸ್ಥೆಗಳು ಕೈಗೊಳ್ಳುವ ಪರಿಶೀಲನೆ ಹಾಗೂ ತನಿಖಾ ಪ್ರಕ್ರಿಯೆಗಳಲ್ಲಿ ಸಾರ್ವಜನಿಕರು ಅನಗತ್ಯವಾಗಿ ಹಸ್ತಕ್ಷೇಪ ಮಾಡದೆ, ಕಾನೂನು ಸುವ್ಯವಸ್ಥೆ, ಸುರಕ್ಷತೆ ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಲು ಅಧಿಕಾರಿಗಳೊಂದಿಗೆ ಸಹಕರಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಭೀಮಾತೀರದಲ್ಲಿ 6 ಮಂದಿ ಹತ್ಯೆ ಕೇಸ್: ಕಿಂಗ್‌ಪಿನ್ ಕಾಲಿಗೆ ಗುಂಡು




ಮಹೇಶ್

ವಿಜಯಪುರ: ಭೀಮಾತೀರದಲ್ಲಿ 6 ಮಂದಿ ಹತ್ಯೆ ಪ್ರಕರಣದ ಕಿಂಗ್‌ಪಿನ್ ಪರಾರಿಯಾಗಲು ಯತ್ನಿಸಿದ್ದು ಪೊಲೀಸರು ಆರೋಪಿಯ ಕಾಲಿಗೆ ಗುಂಡಿಕ್ಕಿದ್ದಾರೆ. ಪೊಲೀಸ್ ತಂಡದ ಮೇಲೆ ಕಲ್ಲು ತೂರಾಟ ಮತ್ತು ಅಧಿಕಾರಿಗಳಿಗೆ ಚಾಕುವಿನಿಂದ ಬೆದರಿಕೆ ಹಾಕಿ ದಾಳಿ ಮಾಡಿ ಪರಾರಿಯಾಗಲು ಯತ್ನಿಸಿದ ಆರೋಪಿ ಮಹೇಶ್ ತಳವಾರ್ ಮೇಲೆ ಗುಂಡು ಹಾರಿಸಿ ಬಂಧಿಸಲಾಗಿದೆ.

ಮೇ 29 ರಂದು ಭೂ ವಿವಾದಕ್ಕೆ ಸಂಬಂಧಿಸಿದಂತೆ ವಿಜಯಪುರ ಜಿಲ್ಲೆಯ ಗೋವಿಂದಪುರ ಗ್ರಾಮದಲ್ಲಿ ಆರು ಜನರನ್ನು ಹತ್ಯೆ ಮಾಡಲಾಗಿತ್ತು. ಇದೀಗ ಪ್ರಕರಣದ ಕಿಂಗ್‌ಪಿನ್ ಮೇಲೆ ಗುಂಡು ಹಾರಿಸಲಾಗಿದೆ. ಸದ್ಯ ಆರೋಪಿಯ ಸ್ಥಿತಿ ಸ್ಥಿರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಚಡಚಣ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದ್ದು ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿತ್ತು. ಇದುವರೆಗೆ 38 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ್ ನಿಂಬರಗಿ ತಿಳಿಸಿದ್ದಾರೆ.

ವಾಟ್ಸಾಪ್ ಮುಖ್ಯಸ್ಥ ಸ್ಥಾನಕ್ಕೆ ವಿಲ್ ಕ್ಯಾತ್ಕಾರ್ಟ್ ರಾಜೀನಾಮೆ:

ಉತ್ತರಾಧಿಕಾರಿಯಾಗಿ ಭಾರತೀಯ ಉದ್ಯಮಿ ಕುನಾಲ್ ಶಾ ನೇಮಕ!



ಕುನಾಲ್ ಶಾ

ನವದೆಹಲಿ: ಪ್ರಮುಖ ನಾಯಕತ್ವ ಬದಲಾವಣೆಯೊಂದರಲ್ಲಿ ವಾಟ್ಸಾಪ್ ಮುಖ್ಯಸ್ಥ ಸ್ಥಾನಕ್ಕೆ ವಿಲ್ ಕ್ಯಾತ್ಕಾರ್ಟ್ ರಾಜೀನಾಮೆ ನೀಡಿದ್ದಾರೆ.

ಸುಮಾರು ಏಳು ವರ್ಷಗಳ ಕಾಲ ಅಧಿಕಾರ ನಡೆಸಿದ ನಂತರ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಘೋಷಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಅವರು ಪೋಸ್ಟ್ ಮಾಡಿದ್ದು, ಮೆಸೇಜಿಂಗ್ ವೇದಿಕೆ ಇದುವರೆಗೆ ಪ್ರಬಲ ಸ್ಥಾನದಲ್ಲಿದೆ ಎಂದು ಹೇಳಿದ್ದಾರೆ.

ತಮ್ಮ ಅಧಿಕಾರಾವಧಿಯಲ್ಲಿನ ಸಾಧನೆಗಳನ್ನು ಅವರು ವಿವರಿಸಿದ್ದು, ವಿಶ್ವಾದ್ಯಂತ ಮೂರು ಶತಕೋಟಿಗೂ ಹೆಚ್ಚು ಬಳಕೆದಾರರಿಗೆ ಎಂಡ್-ಟು-ಎಂಡ್ ಎನ್‌ಕ್ರಿಪ್ಟ್ ಮಾಡಿದ ಸಂದೇಶ ಕಳುಹಿಸುವಿಕೆಯ ವಿಸ್ತರಣೆ ಮತ್ತು ಗುಂಪು ಚಾಟ್‌ಗಳು, ಕಂಪ್ಯಾನಿಯನ್ ಸಾಧನಗಳು ಮತ್ತು ಹೊಸ ಪ್ಲಾಟ್‌ಫಾರ್ಮ್‌ಗಳಲ್ಲಿ ಗೌಪ್ಯತೆ-ಕೇಂದ್ರಿತ ವೈಶಿಷ್ಟ್ಯಗಳನ್ನು ತಂದಿರುವುದಾಗಿ ಅವರು ತಿಳಿಸಿದ್ದಾರೆ.

ನಿರ್ಗಮಿತ ನಾಯಕ ಭಾರತೀಯ ಉದ್ಯಮಿ ಕುನಾಲ್ ಶಾ ಅವರನ್ನು ತಮ್ಮ ಉತ್ತರಾಧಿಕಾರಿಯಾಗಿ ಹೆಸರಿಸಿದ್ದಾರೆ. ಕ್ರೆಡ್ ಅನ್ನು ನಿರ್ಮಿಸುವಲ್ಲಿ ಅವರ ದಾಖಲೆಯನ್ನು ಮತ್ತು ಬಳಕೆದಾರರಿಗೆ ಸೇವೆ ಸಲ್ಲಿಸುವ ಅವರ ಬದ್ಧತೆಯನ್ನು ಶ್ಲಾಘಿಸಿದ್ದಾರೆ.

ಜೂ.28ಕ್ಕೆ 'ಲಿಂಗಾಂಬುದಿ ಕೆರೆ ಪ್ರಕೃತಿ ಜಾಗೃತಿ ಹಬ್ಬ'

ಮೈಸೂರು, ಜೂ.22(ಎಸ್‌ಪಿಎನ್)- ಮೈಸೂರಿನ ಲಿಂಗಾಂಬುದಿ, ಶ್ರೀರಾಂಪುರ, ರಾಮಕೃಷ್ಣನಗರ ಹಾಗೂ ದಟ್ಟಗಳ್ಳಿ ವಸತಿ ಪ್ರದೇಶಗಳ ಮಧ್ಯೆ ಇರುವ ಲಿಂಗಾಂಬುದಿ ಕೆರೆ ಮತ್ತು ಅದರ ಪರಿಸರ ಸೊಬಗನ್ನು ಪರಿಚಯಿಸಲು 'ಲಿಂಗಾಂಬುದಿ ಕೆರೆ ಪ್ರಕೃತಿ ಜಾಗೃತಿ ಹಬ್ಬ' ಶೀರ್ಷಿಕೆಯಡಿ ವಿವಿಧ ಕಾರ್ಯಕ್ರಮಗಳನ್ನು ಅರಣ್ಯ ಇಲಾಖೆಯ ಮೈಸೂರು ವಿಭಾಗ, ಸ್ಪಂದನ ರಾಮೇಶ್ವರ್ ಆರ್ಟ್ ಗ್ಯಾಲರಿ ಹಾಗೂ ಇನಿ-ದನಿ ಮಣ್ಣ ಮಕ್ಕಳ ಹೊನ್ನಪದಗಳ ಬಳಗದ ಸಹಯೋಗದೊಂದಿಗೆ ಜೂ.28ರಂದು ಆಯೋಜಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಜೂ.28ರಂದು ಬೆಳಗ್ಗೆ 6ರಿಂದ 9ರವರೆಗೆ ಲಿಂಗಾಂಬುದಿ ಜೀವವೈವಿಧ್ಯ ಬಗ್ಗೆ ಫೋಟೋಗ್ರಫಿ ಸ್ಪರ್ಧೆ, ಬೆಳಗ್ಗೆ 10ಕ್ಕೆ ಲಿಂಗಾಂಬುದಿ ಕೆರೆ ಆವರಣದಲ್ಲಿ 'ಲಿಂಗಾಂಬುದಿ ಕೆರೆ ಪ್ರಕೃತಿ ಜಾಗೃತಿ ಹಬ್ಬ' ಉದ್ಘಾಟನೆ. ಮಧ್ಯಾಹ್ನ 12ರಿಂದ 1.30 ಲಿಂಗಾಂಬುದಿ ಅರಣ್ಯ ಮತ್ತು ಪರಿಸರ ವೀಕ್ಷಣೆ ಕಾರ್ಯಕ್ರಮ. ಮಧ್ಯಾಹ್ನ 2.30ರಿಂದ 4.30ಕ್ಕೆ ಲಿಂಗಾಂಬುದಿ ಕೆರೆ ಜೀವ ವೈವಿಧ್ಯತೆ ಬಗ್ಗೆ ವೀಕ್ಷಣೆ. ಸಂಜೆ 5ಕ್ಕೆ 'ಲಿಂಗಾಂಬುದಿ ಕೆರೆ ಪ್ರಕೃತಿ ಜಾಗೃತಿ ಹಬ್ಬ'ದ ಸಮಾರೋಪ ಸಮಾರಂಭ ಜರುಗಲಿದೆ.

ಈ ಕಾರ್ಯಕ್ರಮಕ್ಕೆ ಸೀಮಿತ ಸಂಖ್ಯೆಯ ನೋಂದಾಯಿತ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿದ್ದು, ಜೂ.27ರಂದು ಸಂಜೆ 5ಗಂಟೆಯೊಳಗೆ ನೋಂದಾಯಿಸಿಕೊಳ್ಳಬೇಕು ಎಂದು ಡಾ.ಕಾ.ರಾಮೇಶ್ವರಪ್ಪ ಸ್ಪಂದನ ರಾಮೇಶ್ವರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ಮೊ:961116-53667 ಮತ್ತು 73381-58733 ಅನ್ನು ಸಂಪರ್ಕಿಸಬಹುದು.

ಸೈಬರ್ ವಿಭಾಗದ ಡಿವೈಎಸ್‌ಪಿ ಯಶವಂತಕುಮಾರರಿಗೆ 'ಡಿಜಿ ಮತ್ತು ಐಜಿಪಿ ಪ್ರಶಂಸಾ ಡಿಸ್ಕ್' ಪ್ರಶಸ್ತಿ



ಮೈಸೂರು,ಜೂ.22(ಪಿಎಂ)- ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ವತಿಯಿಂದ ಪ್ರತಿವರ್ಷ ಗಣನೀಯ ಸಾಧನೆಗೈದ ಪೊಲೀಸ್ ಅಧಿಕಾರಿಗಳಿಗೆ ಇಲಾಖೆ ಮುಖ್ಯಸ್ಥರು ಗುರುತಿಸಿ ಕೊಡಮಾಡುವ 'ಡಿಜಿ ಮತ್ತು ಐಜಿಪಿ ಪ್ರಶಂಸಾ ಡಿಸ್ಕ್' ಪ್ರಶಸ್ತಿಗೆ 2025-26ನೇ ಸಾಲಿನಲ್ಲಿ 200 ಅಧಿಕಾರಿ ಮತ್ತು ಸಿಬ್ಬಂದಿ ಆಯ್ಕೆ ಮಾಡಲಾಗಿದೆ.

ಈ ಬಾರಿಯ ಪ್ರಶಸ್ತಿಗೆ ಸಿಐಡಿ ವಿಶೇಷ ತನಿಖಾ ತಂಡ ಮತ್ತು ಸೈಬರ್ ಅಪರಾಧ ವಿಭಾಗದ ಡಿವೈಎಸ್‌ಪಿ ಕೆ.ಎನ್.ಯಶವಂತ ಕುಮಾರ್ (ಈ ಹಿಂದೆ ಮೈಸೂರು ನಗರದಲ್ಲಿ ಸೇವೆ ಸಲ್ಲಿಸಿದ್ದರು) ಸೇರಿದಂತೆ ಮೈಸೂರು ನಗರದ ಸೈಬರ್ ಅಪರಾಧ ಪೊಲೀಸ್ ಠಾಣೆಯ ಪಿಐ ಸಿ.ನಂದೀಶ್ ಕುಮಾರ್, ಅರಮನೆ ಭದ್ರತಾ ವಿಭಾಗದ ಆರ್‌ಪಿಐ ಕೆ.ಎಂ.ಮೂರ್ತಿ, ನಗರ ವಿಶೇಷ ವಿಭಾಗದ ಎಎಸ್‌ಐ ಟಿ.ಎಸ್.ಶ್ರೀಧರ, ನಗರ ನಿಸ್ತಂತು ಕೊಠಡಿಯ ಎಎಸ್‌ಐ ಸಿ.ಎನ್.ನಂದಕುಮಾರ್, ಹೆಚ್‌ಸಿ ಕೆ.ಗುರುರಾಜ್, ಸಿಎಆರ್‌ನ ಎಆರ್‌ಎಸ್‌ಐ ಟಿ.ಎಂ.ನಾಗರಾಜ್ ಭಾಜನರಾಗಿದ್ದಾರೆ. ಈ ಪ್ರಶಸ್ತಿಯನ್ನು ಕಳೆದ ಸಾಲಿನಿಂದ ಪ್ರಾರಂಭಿಸಲಾಗಿದ್ದು, ಇಲಾಖೆಯ ಮುಖ್ಯಸ್ಥರು ಸರ್ವೋತ್ತಮ ಕರ್ತವ್ಯ ನಿರ್ವಹಿಸಿ ದವರಿಗೆ ಆಯ್ಕೆ ಮಾಡಿ ಪ್ರದಾನ ಮಾಡುತ್ತಾರೆ. ರಾಜ್ಯ ಪೊಲೀಸ್ ಇಲಾಖೆಯ ಮುಖ್ಯಸ್ಥರಾದ ಡಿಜಿ ಮತ್ತು ಐಜಿಪಿ ಡಾ.ಎಂ.ಎ. ಸಲೀಂ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

2028ರಲ್ಲಿ ನಾನೂ ಮಂತ್ರಿಯಾಗುತ್ತೇನೆ

ಶೇ. 7.5ರಷ್ಟು ಮೀಸಲಾತಿ ನೀಡದಿದ್ದರೆ ರಾಜೀನಾಮೆ: ರಮೇಶ್ ಜಾರಕಿಹೊಳಿ



ಬಳ್ಳಾರಿ: 2028ರ ವಿಧಾನಸಭಾ ಚುನಾವಣೆ ಬಳಿಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ. ಆ ಸರ್ಕಾರದಲ್ಲಿ ನಾನೂ ಕೂಡ ಸಚಿವನಾಗುತ್ತೇನೆ. ಆದರೆ ನಮ್ಮ ಸಮಾಜಕ್ಕೆ(ಎಸ್‌ಟಿ) ಶೇ. 7.5 ರಷ್ಟು ಮೀಸಲಾತಿ ನೀಡದಿದ್ದರೆ ನಾನು ನನ್ನ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬರಲು ಸಿದ್ಧ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರು ಸೋಮವಾರ ಹೇಳಿದ್ದಾರೆ.

ಇಂದು ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಬಿಜೆಪಿ ಆಯೋಜಿಸಿದ್ದ ಸಾಮಾಜಿಕ ನ್ಯಾಯಕ್ಕಾಗಿ ಜಾಗೃತಿ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ರಮೇಶ್ ಜಾರಕಿಹೊಳಿ, ಕಾಂಗ್ರೆಸ್ ನಾಯಕರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ಯಾವ ಪಕ್ಷವೇ ಇರಲಿ, ಅದನ್ನು ಅಧಿಕಾರಕ್ಕೆ ತರುವ ಅಥವಾ ಗದ್ದುಗೆಯಿಂದ ಕೆಳಗಿಳಿಸುವ ರಾಜಕೀಯ ಶಕ್ತಿಯನ್ನು ದೇವರು ನಮ್ಮ ಸಮಾಜಕ್ಕೆ ಕೊಟ್ಟಿದ್ದಾನೆ. 1970ರ ದಶಕದಲ್ಲೇ ನಾವು ಕೇವಲ ಮೂರ್ನಾಲ್ಕು ಸೀಟುಗಳನ್ನು ಗೆದ್ದು, ಇಡೀ ಅಧಿಕಾರದ ಚುಕ್ಕಾಣಿಯನ್ನು ನಮ್ಮ ಕೈಯಲ್ಲಿ ಹಿಡಿದುಕೊಳ್ಳುತ್ತಿದ್ದೆವು. ನಾವು ಈಗ ಮತ್ತಷ್ಟು ಪ್ರಬಲವಾಗಿ ಸಂಘಟನೆ ಮಾಡಬೇಕಿದೆ. ಕೇವಲ ನಮ್ಮದೇ ಸಮಾಜವಲ್ಲದೆ, ರಾಜ್ಯದಲ್ಲಿರುವ ಇತರರೆಲ್ಲಾ ಸಣ್ಣಪುಟ್ಟ ಸಮುದಾಯಗಳನ್ನು ಜೊತೆಗೆ ಕರೆದುಕೊಂಡು ಹೋದಾಗ ಮಾತ್ರ ನಮಗೆ ನಿಜವಾದ ರಾಜಕೀಯ ಶಕ್ತಿ ಬರಲು ಸಾಧ್ಯ ಎಂದರು.

ಇದೇ ವೇಳೆ ತಮ್ಮ ಸಹೋದರ ಹಾಗೂ ಸಚಿವ ಸತೀಶ್ ಜಾರಕಿಹೊಳಿ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದ ರಮೇಶ್ ಜಾರಕಿಹೊಳಿ, ಇವತ್ತು ಸಮಾಜದ ಹಿತದೃಷ್ಟಿಯಿಂದ ಮಾತನಾಡಲು ಕೆಲವರಿಗೆ ಧೈರ್ಯವಿಲ್ಲ. ಒಂದು ವೇಳೆ ಸತೀಶ್ ಜಾರಕಿಹೊಳಿ ಇರುವ ಸ್ಥಾನದಲ್ಲಿ ನಾನೇನಾದರೂ ಇದ್ದಿದ್ದರೆ, ಇಷ್ಟೊತ್ತಿಗಾಗಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬರುತ್ತಿದ್ದೆ. ಆದರೆ ಅಧಿಕಾರ ತ್ಯಾಗ ಮಾಡುವ ಆ ಶಕ್ತಿ ಮತ್ತು ಧೈರ್ಯ ಸತೀಶ್‌ಗೆ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಲೋಕ ಕಲ್ಯಾಣಾರ್ಥ ಎರಡು ದಿನಗಳ ಶ್ರೀ ದುರ್ಗಾ ಸಪ್ತಶತೀ ಪಾರಾಯಣ; ಚಂಡಿಕಾ ಮಹಾಯಾಗ



ಎರಡು ದಿನಗಳ ಶ್ರೀ ದುರ್ಗಾ ಸಪ್ತಶತೀ ಪಾರಾಯಣ ಹಾಗೂ ಚಂಡಿಕಾ ಮಹಾಯಾಗ ಧಾರ್ಮಿಕ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶಾಸಕ ಕೆ.ಹರೀಶ್‌ಗೌಡ ದಂಪತಿ

ಮೈಸೂರು, ಜೂ.22(ಎಸ್‌ಪಿಎನ್)- ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಆವರಣದಲ್ಲಿ ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಲೋಕ ಕಲ್ಯಾಣಾರ್ಥ ಏರ್ಪಡಿಸಿರುವ ಎರಡು ದಿನಗಳ ಶ್ರೀ ದುರ್ಗಾ ಸಪ್ತಶತೀ ಪಾರಾಯಣ ಹಾಗೂ ಚಂಡಿಕಾ ಮಹಾಯಾಗ ಧಾರ್ಮಿಕ ವಿಧಿ-ವಿಧಾನಗಳು ಸೋಮವಾರ ಆರಂಭಗೊಂಡಿತು.

ಲೋಕ ಕಲ್ಯಾಣಾರ್ಥ ದೇವತಾ ಪ್ರಾರ್ಥನೆ, ಗಣಪತಿ ಪೂಜೆ, ಪುಣ್ಯಾಹ ವಾಚನ, ಋತ್ವಿಗ್ವರ್ಣನ ಕಲಶ ಸ್ಥಾಪನೆ, ಶ್ರೀ ದುರ್ಗಾ ಸಪ್ತಶತೀ ಪಾರಾಯಣ, ಕಲಶ ಪೂಜೆ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ಧಾರ್ಮಿಕ ಕಾರ್ಯಗಳು ಜರುಗಿದವು.

ವಿವಿಧ ಭಾಗದಿಂದ ಆಗಮಿಸಿದ್ದ 20ಕ್ಕೂ ಹೆಚ್ಚು ಪುರೋಹಿತರು, ಚಂಡಿಮಹಾಯಾಗ, ಶ್ರೀ ದುರ್ಗಾ ಸಪ್ತಶತೀ ಪಾರಾಯಣ ಹಾಗೂ ಚಂಡಿಕಾ ಮಹಾಯಾಗ ದಲ್ಲಿ ಪಾಲ್ಗೊಂಡು ಶಾಸಕ ಕೆ.ಹರೀಶ್ ಗೌಡ ಮತ್ತು ಪತ್ನಿ ಗೌರಿ ಅವರಿಗೆ ಲೋಕ ಕಲ್ಯಾಣಕ್ಕಾಗಿ ವಿವಿಧ ಪೂಜೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಿನ ವಿವಿಧ ಬಡಾವಣೆಗಳಿಂದ ಆಗಮಿಸಿದ್ದ ಭಜನಾ ಮಂಡಳಿ ಸದಸ್ಯರಿಂದ ದುರ್ಗಾಮಾತೆಯ ಭಕ್ತಿಗೀತೆಗಳನ್ನು ಹಾಡಿ, ಪ್ರೇಕ್ಷಕರ ಮನಸೆಳೆದರು. ಮಹಾಯಾಗಕ್ಕಾಗಿ ಆಕರ್ಷಣೀಯವಾದ ಮಂಟಪ ರಚನೆ, ಯಜ್ಞಕುಂಡದಿಂದ ಹೊರ ಹೊಮ್ಮುವ ಹೊಗೆ ವ್ಯವಸ್ಥಿತವಾಗಿ ಹೊರಹೋಗಲು ಎಕ್ಸಿಸ್ಟ್ ಫ್ಯಾನ್ ವ್ಯವಸ್ಥೆ ಮಾಡಲಾಗಿತ್ತು. ಪೂಜೆಯಲ್ಲಿ ತುರ್ತು ಅವಘಡಗಳು ಸಂಭವಿಸಿದರೆ ಆಂಬುಲೆನ್ಸ್ ಸೇವೆ ವ್ಯವಸ್ಥೆ ಮಾಡಲಾಗಿತ್ತು. ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮತ್ತು ಹೊರಗಡೆಯಿಂದ ಬಂದ ಭಕ್ತಾಧಿಕಾರಿಗಳಿಗೆ ವಿಶ್ರಾಂತಿ ಪಡೆಯಲು ವ್ಯವಸ್ಥೆ ಕಲ್ಪಿಸಲಾಗಿತ್ತು.

ಜೂ.23ರಂದು ಬೆಳಗ್ಗೆ 7 ಗಂಟೆಗೆ ಲೋಕಕಲ್ಯಾಣಾರ್ಥ ನವಗ್ರಹ ಪುರಸ್ಸರ ಮಹಾಗಣಪತಿ ಹೋಮ ಪೂರ್ವಕ ಚಂಡಿಕಾಯಾಗ ಆರಂಭ, ಕುಂಕುಮಾರ್ಚನೆ, ಮಹಿಳಾ ಭಜನಾಮಂಡಳಿಗಳಿಂದ ಶ್ರೀ ದುರ್ಗಾ ಸಪ್ತಶತೀ ಪಾರಾಯಣ ಹಾಗೂ ಕಲಶ ಪೂಜೆ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ಸೇರಿದಂತೆ ಇತರೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಹಾಗೂ ಚಂಡಿಕಾ ಮಹಾಯಾಗದಲ್ಲಿ ಆದಿಚುಂಚನಗಿರಿ ಮಠದ ಶ್ರೀ ಸೋಮನಾಥ ಸ್ವಾಮೀಜಿ, ರಾಮಕೃಷ್ಣ ಮಿಷನ್ ಆಡಳಿತ ಮಂಡಳಿಯ ಶ್ರೀ ಸ್ವಾಮಿ ಮುಕ್ತಿದಾನಂದ ಜೀ ಮಹಾರಾಜ್ ಪಾಲ್ಗೊಳ್ಳಲಿದ್ದಾರೆ.

ಈ ವೇಳೆ ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಟಿ.ಬಿ. ಚಿಕ್ಕಣ್ಣ, ಜಿಪಂ ಮಾಜಿ ಅಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಹೆಚ್.ವಿ.ರಾಜೀವ್, ಕರ್ನಾಟಕ ಸಹಕಾರ ಮಹಾಮಂಡಲದ ಅಧ್ಯಕ್ಷ ಚಂದ್ರಶೇಖರ್, ಮಂಜುನಾಥ್, ಕಾಂಗ್ರೆಸ್ ಮೈಸೂರು ನಗರ ಹಿಂದುಳಿದ ವರ್ಗಗಳ ಅಧ್ಯಕ್ಷ ಎನ್.ಆರ್.ನಾಗೇಶ್, ಎಸ್‌ಸಿ ವಿಭಾಗದ ಅಧ್ಯಕ್ಷ ರಮೇಶ್, ನಗರಪಾಲಿಕ ಮಾಜಿ ಸದಸ್ಯರಾದ ನಾಗಭೂಷಣ್, ಪುಷ್ಪವಲ್ಲಿ, ಜೆ.ಗೋಪಿ, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದಿನೇಶ್, ವಾರ್ಡ್ ಅಧ್ಯಕ್ಷರು, ಯೂತ್ ಕಾಂಗ್ರೆಸ್ ಸದಸ್ಯರು, ಉಪ ಸಮಿತಿ ನಿರ್ದೇಶಕರು, ಪದಾಧಿಕಾರಿಗಳು ಸೇರಿದಂತೆ ಇತರೆ ಗಣ್ಯರು ಮಹಾಯಾಗದಲ್ಲಿ ಪಾಲ್ಗೊಂಡು ದೇವಿ ಕೃಪೆಗೆ ಪಾತ್ರರಾದರು.

> ಚಂಡಿಕಾ ಸ್ತೋತ್ರವು ದುರ್ಗಾ ದೇವಿಗೆ ಸಮರ್ಪಿತವಾದ ಸ್ತೋತ್ರ ಈ ಚಂಡಿಕಾ ಸ್ತೋತ್ರವನ್ನು ಪಠಿಸುವುದರಿಂದ ಜೀವನದಲ್ಲಿ ಸಂಭವಿಸುವ ಅಡೆತಡೆಗಳು ನಿವಾರಣೆಯಾಗುತ್ತವೆ. ಯೋಗಕ್ಷೇಮ ಕಾಯ್ದುಕೊಳ್ಳಲು, ಮಾನಸಿಕ, ಆಧ್ಯಾತ್ಮಿಕ ಬೆಳವಣಿಗೆಯನ್ನು ಸಾಧಿಸಲು ಪಠಿಸುತ್ತಾರೆ. ಶ್ರೀ ಚಂಡಿಕಾ ಸ್ತೋತ್ರವನ್ನು ಪ್ರತಿದಿನವೂ ಪಠಿಸಬಹುದು ಅಥವಾ ಮಂಗಳವಾರದ ದಿನದಂದು ಪಠಿಸಬಹುದು. ಇದರ ನಿಯಮಿತ ಪಠಣವು ಶಾಶ್ವತ ಶುಭವನ್ನು ತರುವುದು. ತಮ್ಮ ಮನಸ್ಸಿನ ಇಷ್ಟಾರ್ಥ ಸಂಕಲ್ಪ ಸುಲಲಿತವಾಗಿ ನೆರವೇರಲಿವೆ.
>
> -ಡಾ ಭಾಷ್ಯಂ ಸ್ವಾಮೀಜಿ, ಶ್ರೀ ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರು

ಇಂದಿನಿಂದ ಶ್ರೀಕಂಠೇಶ್ವರಸ್ವಾಮಿ ಗಿರಿಜಾ ಕಲ್ಯಾಣ

● ಮಹೋತ್ಸವಕ್ಕೆ ಸಕಲ ಸಿದ್ಧತೆ ● ಜೂ.30ರವರೆಗೆ ವಿಶೇಷ ಪೂಜೆ
● ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ: ಸಾವಿರಾರು ಮಂದಿ ಭಾಗಿ ನಿರೀಕ್ಷೆ

ನಂಜನಗೂಡು, ಜೂ.22– ದಕ್ಷಿಣ ಕಾಶಿ ನಂಜನಗೂಡಿನಲ್ಲಿ ಪುರಾಣ ಪ್ರಸಿದ್ಧ ಶ್ರೀಕಂಠೇಶ್ವರಸ್ವಾಮಿ ಮತ್ತು ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವ ಜೂ.23ರಿಂದ ಜೂ.30ರವರೆಗೆ ನಡೆಯಲಿದ್ದು, ಇದಕ್ಕಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ಗಿರಿಜಾ ಕಲ್ಯಾಣ ಮಹೋತ್ಸವ ಅಂಗವಾಗಿ ದೇವಾಲಯದ ಆವರಣದಲ್ಲಿ ತಳಿರು ತೋರಣ, ಚಪ್ಪರ ಹಾಕಲಾಗಿದೆ. ದೇವಾಲಯದ ಶಾಸ್ತ್ರ ಮಂಟಪವನ್ನು ವಿವಿಧ ಹೂಗಳಿಂದ ಅಲಂಕರಿಸಲಾಗಿದೆ. ಅಲ್ಲದೇ ದೇವಾಲಯದ ಸುತ್ತಮುತ್ತ ವಿದ್ಯುತ್ ದೀಪದಿಂದ ಅಲಂಕಾರಗೊಳಿಸಲಾಗಿದೆ. ಅಲ್ಲದೇ ವಿವಾಹ ಮಹೋತ್ಸವದ ಪ್ರಮುಖ ಆಕರ್ಷಣೆ ಶ್ರೀಕಂಠೇಶ್ವರಸ್ವಾಮಿಯವರ ಕಾಶಿಯಾತ್ರೆಗೆ ರಾಜ್ಯ ಹಾಗೂ ಹೊರ ರಾಜ್ಯಗಳಿಂದ 20ಕ್ಕೂ ಹೆಚ್ಚು ಕಲಾ ತಂಡಗಳು ಆಗಮಿಸುವ ನಿರೀಕ್ಷೆ ಇದ್ದು, ಉಳಿದಂತೆ ಕಲ್ಯಾಣೋತ್ಸವ ಜರುಗುವ 8 ದಿನಗಳ ಕಾಲ ದೇವಾಲಯದ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.


ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಗಿರಿಜಾ ಕಲ್ಯಾಣಕ್ಕೆ ಸಿದ್ಧತೆ ಕೈಗೊಂಡಿರುವುದು.

ಗಿರಿಜಾ ಕಲ್ಯಾಣ ಮಹೋತ್ಸವದ ಪ್ರತಿ ದಿನ ಪ್ರಧಾನ ಅರ್ಚಕ ನೀಲಕಂಠ ದೀಕ್ಷಿತ್ ನೇತೃತ್ವದಲ್ಲಿ ಬಗೆಯ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆಯಲಿದೆ. ಜೂ.23ರಂದು ಸಂಜೆ 5 ರಿಂದ ರಾತ್ರಿ 8 ಗಂಟೆವರೆಗೆ ವರಪೂಜಾ ಮಹೋತ್ಸವ ನಡೆಯಲಿದೆ. ಜೂ.24ರಂದು ಬೆಳಗ್ಗೆ 9 ಗಂಟೆಗೆ ಅನುಷ್ಠಾಪೂರ್ವಕ ಕನ್ನಡಿ, ಕಳಸ, ಅಂಕುರಾರ್ಪಣ ಪೂರ್ವಕ ಮಂಗಳಸ್ನಾನ, ಮಧ್ಯಾಹ್ನ 12 ಗಂಟೆಗೆ ನಾಂದಿ ಗ್ರಹಯಜ್ಞ, ಸಂಜೆ 5ಗಂಟೆಗೆ ಕಾಶಿಯಾತ್ರೆ ಮಹೋತ್ಸವ ಜರುಗಲಿದೆ. ರಾತ್ರಿ 6.45ರಿಂದ 7.15ರೊಳಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಸಂಬಂಧ ಮಾಲಾ ನಿರೀಕ್ಷಣಾ ಪೂರ್ವಕವಾಗಿ ಕಲ್ಯಾಣ ಮಂಟಪ ಪ್ರವೇಶ ನಡೆಯಲಿದೆ. ನಂತರ ಪಾರ್ವತಿ ಮತ್ತು ಶ್ರೀಕಂಠೇಶ್ವರಸ್ವಾಮಿಯವರ ಗಿರಿಜಾ ಕಲ್ಯಾಣ ಮಹೋತ್ಸವದ ಧಾರಾ ಮಹೋತ್ಸವ ಹಾಗೂ ಅಕ್ಷತಾರೋಹಣದ ನಂತರ ಮದುವೆಯಲ್ಲಿ ಭಾಗಿಯಾದ ಭಕ್ತರಿಗೆ ದಾಸೋಹ ನಡೆಯಲಿದೆ.

ಜೂ.25 ಮತ್ತು 26ರಂದು ಉರುಟಣೆ, ಉಯ್ಯಾಲೋತ್ಸವ, ಪಾಕಿನಿ ಉತ್ಸವ ನಡೆಯಲಿದ್ದು, ಜೂ.27ರಂದು ರಾತ್ರಿ 7 ಗಂಟೆಗೆ ನಾಕಬಲಿ, ಹೊಳಲು ಸುತ್ತುವುದು, ಶೇಷ ಹೋಮ, ಗಜಾರೋಹಣ, ಗೃಹಪ್ರವೇಶ ಮಹೋತ್ಸವ ನಡೆಯಲಿದೆ. ಜೂ.28, 29, 30 ರಂದು ಕ್ರಮವಾಗಿ 3 ದಿನಗಳ ಕಾಲ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ಜರುಗಲಿದೆ. ಜೂ.30ರ ತೆಪ್ಪೋತ್ಸವದ ನಂತರ ಶಯನೋತ್ಸವ ಕಾರ್ಯಕ್ರಮದ ಮೂಲಕ ಗಿರಿಜಾ ಕಲ್ಯಾಣ ಮಹೋತ್ಸವ ಸಂಪನ್ನಗೊಳ್ಳಲಿದೆ.

ಗಿರಿಜಾ ಕಲ್ಯಾಣ ಪ್ರಯುಕ್ತ ದೇವಾಲಯದ ಒಳಾವರಣದಲ್ಲಿ ಪ್ರತಿದಿನ ಬೆಳಗ್ಗೆ ಹಾಗೂ ಸಂಜೆ ದೇವರನಾಮ, ಭಕ್ತಿಗೀತೆ, ತತ್ವಪದ ಹಾಗೂ ಸುಗಮ ಸಂಗೀತ ಗಾಯನ ಕಾರ್ಯಕ್ರಮ ನಡೆಯಲಿದೆ. ಮದುವೆ ಸಂಪ್ರದಾಯ ಮರೆತಿರುವ ಇತ್ತೀಚಿನ ದಿನಗಳಲ್ಲಿ ಜನರಿಗೆ ಶಾಸ್ತ್ರೋಕ್ತವಾಗಿ, ಸಂಪ್ರದಾಯ ಬದ್ಧವಾಗಿ ನಡೆಯುವ ಶಿವ ಮತ್ತು ಗಿರಿಜೆಯರ ಮದುವೆಯು ಹಿಂದಿನ ಸಂಪ್ರದಾಯ ನೆನಪು ಮಾಡಲಿದ್ದು, ಗಿರಿಜಾ ಮಹೋತ್ಸವದಲ್ಲಿ ಸಾವಿರಾರು ಭಕ್ತಾರು ಭಾಗಿಯಾಗುವ ನಿರೀಕ್ಷೆ ಇದೆ.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

ತಿ.ನರಸೀಪುರ, ಜೂ. 22– ವಿದ್ಯುತ್ ಖಾಸಗೀಕರಣ ವಿರೋಧಿಸಿ ತಾಲೂಕಿನ ಬನ್ನೂರು ಪಟ್ಟಣದ ಸೆಸ್ಕ್ ಉಪ ವಿಭಾಗ ಕಚೇರಿ ಎದುರು ರಾಜ್ಯ ಕಬ್ಬು ಬೆಳೆಗಾರರ ಸಂಘದ ಬನ್ನೂರು ಹೋಬಳಿ ಗ್ರಾಮಾಂತರ ಘಟಕದ ಕಾರ್ಯಕರ್ತರು, ಮುಖಂಡರು ಪ್ರತಿಭಟನೆ ನಡೆಸಿ, ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಿದರು.


ವಿದ್ಯುತ್ ಖಾಸಗೀಕರಣ ವಿರೋಧಿಸಿ ರೈತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಸೆಸ್ಕ್ ಉಪ ವಿಭಾಗ ಕಚೇರಿ ಆವರಣದಲ್ಲಿ ಜಮಾಯಿಸಿದ್ದ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಸಾರ್ವಜನಿಕ ವಿದ್ಯುತ್ ವಿತರಣಾ ಕಂಪನಿಯ 19 ಕಂದಾಯ ಜಿಲ್ಲೆಗಳಲ್ಲಿ ವಿದ್ಯುತ್ ಪರವಾನಗಿ ಕೋರಿ ಟಾಟಾ ಪವರ್ ಖಾಸಗಿ ಕಂಪನಿ ಸಲ್ಲಿಸಿರುವ ಅರ್ಜಿ ತಿರಸ್ಕರಿಸುವಂತೆ ಆಗ್ರಹಿಸಿ ಧರಣಿ ಕುಳಿತರು.

ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ಮಾತನಾಡಿ, ರಾಜ್ಯದಲ್ಲಿ ಸರ್ಕಾರಿ ವಿದ್ಯುತ್ ಸರಬರಾಜು ಸಂಸ್ಥೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದರೂ, ಖಾಸಗಿ ಕಂಪನಿಗಳಿಗೆ ಲೈಸೆನ್ಸ್ ನೀಡುವ ಮೂಲಕ ವಿದ್ಯುತ್ ಕ್ಷೇತ್ರ ಖಾಸಗೀಕರಣಗೊಳಿಸಲು ಸರ್ಕಾರ ಮುಂದಾಗಿರುವುದು ಖಂಡನೀಯ ಎಂದರು.

ಟಾಟಾ ಹಾಗೂ ಇನ್ನಿತರೆ ಯಾವುದೇ ವಿದ್ಯುತ್ ಪವರ್ ಕಂಪನಿ ವಿದ್ಯುತ್ ಪರವಾನಗಿ ಪಡೆಯಲು ಅರ್ಜಿ ಸಲ್ಲಿಸುವುದಕ್ಕೆ ರೈತರು ಹಾಗೂ ಸಾರ್ವಜನಿಕರು ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತೇವೆ. ವಿದ್ಯುತ್ ಕ್ಷೇತ್ರದ ಖಾಸಗೀಕರಣದಿಂದ ವಿದ್ಯುತ್ ದರ ಹೆಚ್ಚಳವಾಗುವ ಸಾಧ್ಯತೆ ಇದ್ದು, ಗೃಹ ಜ್ಯೋತಿ ಯೋಜನೆ, ರೈತರ ಕೃಷಿ ಪಂಪ್ ಸೆಟ್‌ಗಳಿಗೆ ನೀಡಲಾಗುತ್ತಿರುವ ಉಚಿತ ವಿದ್ಯುತ್ ಹಾಗೂ ವಿವಿಧ ಸಹಾಯಧನಕ್ಕೆ ಪೆಟ್ಟು ಬೀಳುವ ಆತಂಕವಿದೆ. ಖಾಸಗೀಕರಣದಿಂದ ಗ್ರಾಮೀಣ ಜನರ ನಿರ್ಲಕ್ಷ್ಯ, ಉದ್ಯೋಗ ನೇಮಕಾತಿಗಳಲ್ಲಿ ಮೀಸಲಾತಿ ವ್ಯವಸ್ಥೆಗೆ ಹಿನ್ನಡೆಯಾಗುತ್ತದೆ. ಅಲ್ಲದೇ ಸರ್ಕಾರಿ ಉದ್ಯೋಗಗಳ ಭದ್ರತೆಗೆ ಅಪಾಯ ಉಂಟಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಲಾದ ಲಕ್ಷಾಂತರ ಕೋಟಿ ರೂ. ಮೌಲ್ಯದ ಆಸ್ತಿಗಳು ಖಾಸಗಿ ಕಂಪನಿಗಳ ಪಾಲಾಗುವ ಸಾಧ್ಯತೆ ಇದ್ದು, ಮೂಲಭೂತ ಸೇವೆಯೇ ವ್ಯಾಪಾರದ ವಸ್ತುವಾಗುವ ಭೀತಿ ಉಂಟಾಗಿದೆ. ಹೀಗಾಗಿ ರಾಜ್ಯದ ರೈತರ ಹಾಗೂ ಜನಸಾಮಾನ್ಯರ ಹಿತ ದೃಷ್ಟಿಯಿಂದ ಖಾಸಗಿ ಕಂಪನಿಯ ಅರ್ಜಿಗಳನ್ನು ತಿರಸ್ಕರಿಸಬೇಕು. ಇಲ್ಲದಿದ್ದರೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದೇ ವೇಳೆ ಆಕ್ಷೇಪಣೆ ಪತ್ರವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಂ.ಹರ್ಷನ್ ಅವರಿಗೆ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಅತ್ತಹಳ್ಳಿ ಸಿ.ಲಿಂಗಣ್ಣ, ಹೆಗ್ಗೂರು ರಂಗರಾಜು, ಅತ್ತಹಳ್ಳಿ ಅರುಣಕುಮಾರ್, ಕುಂತನಹಳ್ಳಿ ಕುಳ್ಳೇಗೌಡ, ಮೇಗಳಕೊಪ್ಪಲು ಕುಮಾರ್, ಎ.ಪಿ. ನವೀನ, ಬಿ.ಎನ್. ಶ್ರೀನಿವಾಸ, ಎ.ಎನ್. ಮಹೇಶ, ಎ.ಪಿ.ಚೇತನ್, ರಾಮ, ಸ್ವಾಮಿ ಕುಂತನಹಳ್ಳಿ, ಬನ್ನೂರು ರಮೇಶ, ಶಂಕರಿ, ಕರಗೇಗೌಡ, ಕೃಷ್ಣ ಕುಮಾರ್, ಶಿವಕುಮಾರ್ ಇದ್ದರು.

ಕೆ.ಆರ್.ನಗರ, ಸಾಲಿಗ್ರಾಮ ತಾಲೂಕಿನಲ್ಲಿ ವಾರದಲ್ಲಿ ಒಂದು ದಿನ

ಗ್ರಾಪಂ ಮಟ್ಟದಲ್ಲಿ ಪೊಲೀಸ್ ಸಾರ್ವಜನಿಕ ಸಭೆಗೆ ಕ್ರಮ

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಭರವಸೆ

ಕೆ.ಆರ್.ನಗರ, ಜೂ.22– ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ವಾರದಲ್ಲಿ ಒಂದು ದಿನ ಗ್ರಾಪಂ ಮಟ್ಟದಲ್ಲಿ ಪೊಲೀಸ್ ಸಾರ್ವಜನಿಕ ಸಭೆ ಮಾಡಲು ಕ್ರಮ ವಹಿಸುತ್ತೇನೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಭರವಸೆ ನೀಡಿದರು.

ಪಟ್ಟಣದ ಎಸ್‌ಆರ್‌ಎಂ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಪೊಲೀಸ್ ವತಿಯಿಂದ ಹಮ್ಮಿಕೊಂಡಿದ್ದ ಸಾರ್ವಜನಿಕರ ಕುಂದು ಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಅವಳಿ ತಾಲೂಕಿನಲ್ಲಿ ಅಕ್ರಮ ಮದ್ಯ ಮಾರಾಟದಿಂದ ಆಗುತ್ತಿರುವ ಬಗ್ಗೆ ಸಾರ್ವಜನಿಕರು ದೂರು ದಾಖಲಾಗಿದೆ. ಈ ಸಂಬಂಧ ಅಬಕಾರಿ ಡಿಸಿ ಅವರ ಗಮನಕ್ಕೆ ತರಲಾಗುವುದು. ಮುಂದಿನ ದಿನಗಳಲ್ಲಿ ಸಮಸ್ಯೆಗೆ ಪರಿಹಾರ ಕಲ್ಪಿಸಲಾಗುವುದು ಎಂದು ತಿಳಿಸಿದರು.


ಸಭೆಯಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿದರು.

ಮೈಕ್ರೋ ಫೈನಾನ್ಸ್‌ನವರು ಮನೆಗಳ ಬಳಿ ಹೋಗಿ ಸಾಲಗಾರರಿಗೆ ಅವಮಾನ ಮಾಡಿ ಹಣ ಕೇಳಿದರೆ ಅಂತಹ ಮೈಕ್ರೋ ಫೈನಾನ್ಸ್ ವಿರುದ್ಧ ಕೇಸು ದಾಖಲಿಸಲಾಗುವುದು. ಬೈಕ್ ಮತ್ತು ವಾಹನಗಳನ್ನು ಸೀಜ್ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಿಲ್ಲಾ ಪೊಲೀಸ್ ವತಿಯಿಂದ ಪ್ರತಿಯೊಂದು ತಾಲೂಕಿನ ಠಾಣೆಗಳಿಗೆ ಭೇಟಿ ನೀಡಿ ಸಾರ್ವಜನಿಕರ ಕುಂದು ಕೊರತೆ, ಅಹವಾಲು ಆಲಿಸಿ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ 2 ಠಾಣೆಗಳಿದ್ದು, ಗ್ರಾಮಾಂತರ ಠಾಣೆ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಪೊಲೀಸ್ ಇಲಾಖೆಯಿಂದ ಅಪರಾಧ ತಡೆಗಟ್ಟಲು ಸೂಕ್ತ ಕ್ರಮ ವಹಿಸುತ್ತೇನೆ ಎಂದು ಸಾರ್ವಜನಿಕರಿಗೆ ತಿಳಿಸಿದರು.

ಇದಕ್ಕೂ ಮುನ್ನಾ ಸಾರ್ವಜನಿಕರು, ವಿವಿಧ ರೈತ ಸಂಘಟನೆ ಹಾಗೂ ದಲಿತ ಮುಖಂಡರು ಮಾತನಾಡಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಮದ್ಯದ ಹಾವಳಿ ಹೆಚ್ಚಾಗಿದೆ. ರೈತರು ಜಮೀನಿನಲ್ಲಿ ಉಳುಮೆ ಮಾಡಲು ಸಾಧ್ಯವಾಗುತ್ತಿಲ್ಲ. ಹಳ್ಳಿಗಳಲ್ಲಿ ವೈನ್ಸ್ ಸ್ಟೋರ್, ಬಾರ್ ಆಗಿರುವುದರಿಂದ ಕುಡಿದು ಬಾಟಲ್‌ಗಳನ್ನು ರೈತರ ಗದ್ದೆ ಜಮೀನಿನಲ್ಲಿ ಹಾಕುತ್ತಿದ್ದಾರೆ. ಈ ಬಗ್ಗೆ ಅಬಕಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಹಾಗಾದರೆ ರೈತರು ಜಮೀನಿನ ಪಕ್ಕದಲ್ಲಿ ಮದ್ಯ ಮಾರಾಟಕ್ಕೆ ಅವಕಾಶ ಕೊಡಬೇಡಿ ಎಂದು ರೈತರು ದೂರಿದರು.

ಇದೇ ವೇಳೆ ಹೊಸ ಠಾಣೆ ಜೊತೆಗೆ ಸಂಚಾರ ಠಾಣೆ ಬೇಕು. ವಿ.ವಿ.ರಸ್ತೆ, ಸಿ.ಎಂ.ರಸ್ತೆ, ಬಜಾರ್ ರಸ್ತೆ, 7ನೇ ಕ್ರಾಸ್ ರಸ್ತೆಯಲ್ಲಿ ಸಂಚಾರ ವ್ಯವಸ್ಥೆ ಹದಗೆಟ್ಟಿದೆ. ಪಟ್ಟಣದ ಗರುಡಗಂಭ ವೃತ್ತದಿಂದ ಪುರಸಭೆ ವೃತ್ತದವರೆಗೂ ಪಾದಚಾರಿ ಸಂಚರಿಸುವ ಮಾರ್ಗದಲ್ಲಿ ವಾಹನಗಳ ಪಾರ್ಕಿಂಗ್ ಮಾಡುತ್ತಾರೆ. ಪಾದಚಾರಿಗಳು ಓಡಾಡಲು ಸಮಸ್ಯೆ ಆಗುತ್ತಿದೆ ಸರಿಪಡಿಸಿ ಎಂದು ಅಹವಾಲು ಸಲ್ಲಿಸಲಾಯಿತು.

ಸಭೆಯಲ್ಲಿ ಡಿವೈಎಸ್‌ಪಿ ಟಿ.ಬಿ. ರಾಜಣ್ಣ, ತಹಸೀಲ್ದಾರ್ ಜಿ.ಸುರೇಂದ್ರ ಮೂರ್ತಿ, ತಾಪಂ ಇಒ ಕುಲದೀಪ್, ಇನ್ಸ್‌ಪೆಕ್ಟರ್ ಶಿವಪ್ರಕಾಶ್, ಎಸ್ಐ ಸ್ವಾಮೀಗೌಡ, ಸಾಲಿಗ್ರಾಮ ಎಸ್ಐ ವಿಜಯರಾಜ್, ಎಎಸ್ಐ ಶ್ರೀನಿವಾಸ್, ಸಮಾಜ ಕಲ್ಯಾಣ ಇಲಾಖೆ ಡಿಇಓ ರವಿ, ಪುರಸಭೆ ಮುಖ್ಯಾಧಿಕಾರಿ ಜಿ.ಎಸ್.ರಮೇಶ್, ಹಿರಿಯ ಆರೋಗ್ಯ ಸಹಾಯಕ ರಾಜೇಂದ್ರ, ಪುರಸಭೆ ಮಾಜಿ ಅಧ್ಯಕ್ಷ ಕೆ.ಪಿ.ಪ್ರಕಾಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ರಾಜ್ಯ ರೈತ ಪರ್ವದ ಗೌರವಾಧ್ಯಕ್ಷ ಜೆ.ಎಂ. ಕುಮಾರ್, ಪುರಸಭೆ ಮಾಜಿ ಸದಸ್ಯ ಅಸ್ಲಾಂ ಪಾಷ, ದಸಂಸ ಸಂಚಾಲಕ ದಿವಾಕರ್, ಸಾಮಾಜಿಕ ಕಾರ್ಯಕರ್ತ ಬಿ.ಡಿ.ಕೃಷ್ಣ, ಹಿಂದೂ ಜಾಗೃತಿ ವೇದಿಕೆ ಮುಖಂಡ ಕೃಷ್ಣಭಟ್, ಭಜರಂಗದಳ ಮುಖಂಡ ನಂಜುಂಡ, ಪಾರುಪತ್ತೇದಾರ್ ಆರತಿ ಸೇರಿದಂತೆ ನೂರಾರು ಸಾರ್ವಜನಿಕರು ಭಾಗವಹಿಸಿದ್ದರು.

38ನೇ ಮಲೇಷಿಯನ್ ಅಂತಾರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್

ಡಿಸ್ಕಸ್ ಥ್ರೋನಲ್ಲಿ ಗಣಪತಿ ಪರಮಾತ್ಮ ಜಕಾತಿಗೆ ಚಿನ್ನ



ಹುಣಸೂರು, ಜೂ.22– ಮಲೇಷ್ಯಾದ ಸೆಲಂಗೋರ್‌ನ ಯುಪಿಎಂ ಕ್ರೀಡಾಂಗಣದಲ್ಲಿ ಜೂ.5ರಿಂದ 7ರವರೆಗೆ ನಡೆದ 38ನೇ ಮಲೇಷಿಯನ್ ಅಂತ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ತಾಲೂಕಿನ ಗಣಪತಿ ಪರಮಾತ್ಮ ಜಕಾತಿಯವರು ಗಮನಾರ್ಹ ಸಾಧನೆ ಮಾಡಿದ್ದಾರೆ.

ಡಿಸ್ಕಸ್ ಥ್ರೋ (ತಟ್ಟೆ ಎಸೆತ) ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಅವರು 28.76 ಮೀಟರ್ ದೂರ ಎಸೆದು ಪ್ರಥಮ ಸ್ಥಾನ ಪಡೆದು ಚಿನ್ನದ ಪದಕ ಹಾಗೂ ಪ್ರಶಸ್ತಿ ಪತ್ರಕ್ಕೆ ಭಾಜನರಾಗಿದ್ದಾರೆ.

ವಿವಿಧ ದೇಶಗಳ ಕ್ರೀಡಾ ಪಟುಗಳು ಭಾಗವಹಿಸಿದ್ದ ಈ ಕ್ರೀಡಾಕೂಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಗಣಪತಿ ಪರಮಾತ್ಮ ಜಕಾತಿ ಅವರು ಚಿನ್ನದ ಪದಕ ಗಳಿಸಿ ಜಿಲ್ಲೆಗೆ ಹಾಗೂ ತಾಲೂಕಿಗೆ ಕೀರ್ತಿ ತಂದಿದ್ದಾರೆ.

ಗಣಪತಿ ಪರಮಾತ್ಮ ಜಕಾತಿಯವರು ಪ್ರಸ್ತುತ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಒಳಪಡುವ ಬನ್ನಿಕುಪ್ಪೆ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ನಿಲಯ ಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ವೃತ್ತಿ ಜೊತೆಗೆ ಕ್ರೀಡಾ ಕ್ಷೇತ್ರದಲ್ಲಿಯೂ ನಿರಂತರ ಅಭ್ಯಾಸ ಹಾಗೂ ಪರಿಶ್ರಮದ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿರುವುದು ಯುವ ಕ್ರೀಡಾಪಟುಗಳಿಗೆ ಮಾದರಿಯಾಗಿದೆ. ಅವರ ಈ ಸಾಧನೆಗೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಸಹೋದ್ಯೋಗಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಅರಣ್ಯಾಧಿಕಾರಿಗಳ ನಿರ್ಲಕ್ಷ: ಅರಣ್ಯದ ತಪ್ಪಲು ಕಲುಷಿತ

ಬೈಲಕುಪ್ಪೆ, ಜೂ.22– ಇಲ್ಲಿಗೆ ಸಮೀಪದ ಅರಣ್ಯದಂಚಿನ ಪ್ರದೇಶವನ್ನು ದುಷ್ಕರ್ಮಿಗಳು ಜೂಜಾಟ, ಕುಡಿತ, ಮೋಜು ಮಸ್ತಿ ಸೇರಿದಂತೆ ಇನ್ನಿತರ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದು, ಇನ್ನು ಕೆಲವರು ಕಾಡು ಪ್ರಾಣಿಗಳ ಬೇಟೆಯಾಡಿ, ಅವುಗಳನ್ನು ಕ್ಲೀನ್ ಮಾಡುವುದಕ್ಕೆ ಬಳಸಿಕೊಂಡು ಬೇಡವಾದ ವಸ್ತುಗಳನ್ನು ಇಲ್ಲೇ ಬಿಸಾಡುತ್ತಿದ್ದಾರೆ. ಅಲ್ಲದೇ ದುಷ್ಕರ್ಮಿಗಳು ಹಂದಿ ಮಾಂಸ ತಿಂದು ಮೂಳೆಗಳನ್ನು ಇಲ್ಲೆ ಬೀಸಾಡಿರುವುದರಿಂದ ಚಿರತೆ ಈ ಭಾಗದಲ್ಲಿ ಸುತ್ತಾಡುತ್ತಿದ್ದರೂ, ಅರಣ್ಯ ಇಲಾಖೆ ನಿರ್ಲಕ್ಷ್ಯ ವಹಿಸಿದೆ ಎಂದು ಕುಶಾಲನಗರ ತಾಲೂಕು ಕರವೇ ಅಧ್ಯಕ್ಷ ದಿನೇಶ್ ಆರೋಪಿಸಿದರು.

ಇಷ್ಟೆಲ್ಲಾ ಘಟನೆ ನಡೆಯುತ್ತಿದ್ದರೂ ಅರಣ್ಯ ಇಲಾಖೆ ಅದಿಕಾರಿಗಳು ಈ ಕಡೆ ತಿರುಗಿಯೂ ನೋಡಿಲ್ಲ. ನಿತ್ಯ ಕಾಡಂಚಿನ ಭಾಗದಲ್ಲಿ ಎಲ್ಲಿ ನೋಡಿದರೂ ಮದ್ಯದ ಬಾಟಲ್‌ಗಳು,



ಇಸ್ಪೀಟ್ ಕಾರ್ಡುಗಳು ಮಾತ್ರ ರಾಶಿ ಗಟ್ಟಲೆ ಕಂಡು ಬರುತ್ತದೆ. ಅಲ್ಲದೇ ಅನೈತಿಕ ಚಟುವಟಿಕೆಗಳಿಗೆ ಅರಣ್ಯ ಇಲಾಖೆ ಅಧಿಕಾರಿಗಳೇ ದಾರಿ ಮಾಡಿಕೊಡುತ್ತಿದ್ದಾರೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡು ಎಲ್ಲಾ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು. ಇಲ್ಲದಿದ್ದರೇ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಕರ್ನಾಟಕ ರಕ್ಷಣಾ ವೇದಿಕೆ ಶಿವರಾಮೇಗೌಡ, ಜಿಲ್ಲಾಧ್ಯಕ್ಷ ದಿನೇಶ್ ಶೆಟ್ಟಿ, ನಾಗರಾಜ್ ಕಾವತ್, ಪುಟ್ಟಸ್ವಾಮಿ, ಪುಟ್ಟಮ್ಮ, ರಾಜೇಗೌಡರು, ಗಣೇಶ್, ಶಾಹಿದ್ ಖಾನ್ ಇದ್ದರು.

ಬಿಜೆಪಿ ಮಂಡಲ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ




ಹೆಚ್.ಡಿ.ಕೋಟೆ ತಾಲೂಕು ಬಿಜೆಪಿ ಮಂಡಲ ನೂತನ ಅಧ್ಯಕ್ಷರಾಗಿ ಟಿ.ವೆಂಕಟೇಶ್ ಅಧಿಕಾರ ಸ್ವೀಕರಿಸಿದರು. ಈ ವೇಳೆ ಬಿಜೆಪಿ ವಕ್ತಾರ ಭೀಮನಹಳ್ಳಿ ಸೋಮೇಶ್, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಪರೀಕ್ಷಿತರಾಜೇ ಅರಸ್, ಜಿಲ್ಲಾ ಘಟಕದ ಉಪಾಧ್ಯಕ್ಷ ಲಕ್ಷ್ಮಣ್, ನಿಕಟಪೂರ್ವ ಮಂಡಲ ಅಧ್ಯಕ್ಷ ಶಂಭೇಗೌಡ, ಮುಖಂಡರಾದ ಬಸವರಾಜು, ಮಂಜುನಾಥ್, ರಾಜು, ವೈ.ಟಿ. ಮಹೇಶ್, ಗುರುಸ್ವಾಮಿ, ಲೋಕೇಶ್, ಸೇರಿದಂತೆ ಇತರರಿದ್ದರು.

ವಚನ ವೈಭವ, ಯೋಗ ಜೀವನ ಕೃತಿ ಲೋಕಾರ್ಪಣೆ

ಜೀವನ ಸುಂದರತೆ ಕಲಿಯುವುದೇ ಯೋಗ: ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ನಂಜನಗೂಡು, ಜೂ.22– ಯಾವುದನ್ನೂ ಹೆಚ್ಚು ಅಂಟಿಸಿಕೊಳ್ಳದೇ ಮನುಷ್ಯ ಇರುವಷ್ಟು ದಿನ ಆನಂದದಿಂದ ಜೀವನ ಸಾಗಿಸಲು ಬೇಕಾದ ಮೌಲಿಕ ಮಾತುಗಳು 'ವಚನ ವೈಭವ' ಹಾಗೂ 'ಯೋಗ ಜೀವನ' ಕೃತಿಯಲ್ಲಿ ಅಡಕವಾಗಿವೆ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಯೋಗ ಮಹಾಮನೆಯಲ್ಲಿ ನಡೆದ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯ 18ನೇ ವಾರ್ಷಿಕೋತ್ಸವ ಅಂಗವಾಗಿ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಅವರು ಬರೆದಿರುವ 'ವಚನ ವೈಭವ' ಹಾಗೂ 'ಯೋಗ ಜೀವನ' ಭಾಗ–2 ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದರು.


ವಚನ ವೈಭವ ಹಾಗೂ ಯೋಗ ಜೀವನ ಭಾಗ–2 ಕೃತಿಯನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು.

ಕಳೆದ ವರ್ಷ ಬಿಡುಗಡೆಯಾಗಿದ್ದ ಪ್ರಕಾಶ್ ಅವರ ಯೋಗ ಜೀವನ ಕೃತಿಯ ಮುಂದುವರೆದ ಭಾಗವಾಗಿ ಮತ್ತೊಂದು ಸಂಪುಟ ಹೊರ ಬಂದಿದೆ. ಜೊತೆಗೆ ಶರಣರ ವಚನ ಸಾಹಿತ್ಯ ಕುರಿತ ಅನುಭವ ಕಟ್ಟಿಕೊಡುವ ವಚನ ವೈಭವ ಕೃತಿಯು ಕೂಡ ಅತ್ಯಂತ ಮೌಲಿಕವಾಗಿ ಮೂಡಿ ಬಂದಿದೆ. ಮನಸ್ಸು ಉತ್ತಮ ಭಾವನೆಗಳಲ್ಲಿ ಲೀನವಾದರೆ ಸಂತೋಷ ತಾನಾಗಿಯೇ ಮನೆ ಮಾಡುತ್ತದೆ. ಉತ್ತಮ ವ್ಯಕ್ತಿಯಾಗಲು ಈ ಕೃತಿಗಳು ಸಹಕಾರಿಯಾಗಲಿವೆ. ವಚನಗಳ ಬಗ್ಗೆ ಪ್ರಕಾಶ್ ಅವರು ತಮ್ಮದೇ ಆದ ಅನುಭವ ಹಾಗೂ ದೃಷ್ಟಾಂತಗಳ ಮೂಲಕ ಅರ್ಥ ಮಾಡಿಸುವ ಪ್ರಯತ್ನ ಮಾಡಿರು ವುದು ಸಾಮಾನ್ಯರನ್ನೂ ಮುಟ್ಟುವಂತಿದೆ ಎಂದರು.

ಓದು ಸಂಜೀವಿನಿ ಇದ್ದಂತೆ. ಚೈತನ್ಯ ನೀಡುವ ಶಕ್ತಿ ಹಾಗೂ ಸಕಾರಾತ್ಮಕ ಆಲೋಚನೆಗೆ ದಾರಿ ಮಾಡಿಕೊಡುವ ಶಕ್ತಿ ಓದಿಗಿದೆ. ಸಂತರು ತಮ್ಮ ಜ್ಞಾನದ ಬಲದಿಂದ ಏನೂ ಇಲ್ಲದಿದ್ದರೂ ಸಂತೋಷವಾಗಿರುತ್ತಿದ್ದರು. ಯಾವುದನ್ನೂ ಹೆಚ್ಚು ಅಂಟಿಸಿಕೊಳ್ಳದೇ, ಮನಸ್ಸಿಗೆ ಬೇಡವಾದನ್ನು ಹೊರ ಹಾಕಿ ಪರಿಪೂರ್ಣತೆಯೆಡೆಗೆ ಸಾಗಲು ಈ ಕೃತಿಗಳು ಪ್ರತಿಯೊಬ್ಬರನ್ನೂ ಓದುವಂತೆ ಪ್ರೇರೇಪಿಸುತ್ತವೆ. ಹರಿಯುವ ನೀರನ್ನು ಒಂದೆಡೆ ಟ್ಯಾಂಕ್‌ನಲ್ಲಿ ಶೇಖರಿಸಿ ಅಗತ್ಯ ಬಿದ್ದಾಗ ಬಳಸುವ ಹಾಗೇ ಓದಿನ ಜ್ಞಾನವನ್ನು ಜೀವನದ ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡು ಸುಂದರಗೊಳಿಸಲು ಈ ಕೃತಿಗಳು ಪ್ರತಿಯೊಬ್ಬರಿಗೂ ದಾರಿದೀಪವಾಗಲಿ ಎಂದು ಆಶಿಸಿದರು.

ಶರಣ ತತ್ವ ಚಿಂತಕ ಶಂಕರ್, ಹಿರಿಯ ಪತ್ರಕರ್ತ ಮುಳ್ಳೂರು ರಾಜು ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಕಾಶ್ ಜಿ. ಉಡಿಗಾಲ ಅವರು ಪ್ರಾಣ ಧ್ಯಾನದ ಮೂಲಕ ನೆರೆದಿದ್ದ ನೂರಾರು ಯೋಗ ಬಂಧುಗಳನ್ನು ಮಂತ್ರಮುಗ್ಧಗೊಳಿಸಿದರು. ನವಿಲೂರು ಚುಂಚನಹಳ್ಳಿ ಮಠಾಧ್ಯಕ್ಷ ಚೆನ್ನಬಸವ ಸ್ವಾಮೀಜಿ, ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ, ಕಾರ್ಯದರ್ಶಿ ಎನ್.ಆರ್.ಗಣೇಶ ಮೂರ್ತಿ, ನಂಜನಗೂಡು ಯೋಗ ಫೌಂಡೇಶನ್ ಗೌರವಾಧ್ಯಕ್ಷ ಎಚ್.ಎಸ್.ರಾಜು, ಅಧ್ಯಕ್ಷ ಡಿಗ್ಗೇನಹಳ್ಳಿ ಪ್ರಕಾಶ್ ಸೇರಿದಂತೆ ಇತರರಿದ್ದರು.

ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಹೋರಾಟಕ್ಕೆ ಫಲ

ಮಾದಿಗ ಸಮಾಜದ ಸ್ಮಶಾನದ ರಸ್ತೆ ಕಾಮಗಾರಿಗೆ ಭೂಮಿ ಪೂಜೆ

ತಿ.ನರಸೀಪುರ, ಜೂ.22– ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಸ್ಮಶಾನ ರಸ್ತೆ ಸಂಪರ್ಕಕ್ಕಾಗಿ ನಿರಂತರ ಹೋರಾಟ ನಡೆಸಿದ್ದ ಬನ್ನೂರಿನ ಮಾದಿಗ ಸಮಾಜದ ಜನರ ಕನಸು ಇದೀಗ ನನಸಾಗುವ ಹಂತ ತಲುಪಿದೆ.

ಬನ್ನೂರು ಪಟ್ಟಣ ಹೊರವಲಯದ ಕಾವೇರಿ ನದಿ ಸೇತುವೆ ಸಮೀಪದ ಮಾದಿಗ ಸಮಾಜದ ಸ್ಮಶಾನದ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಸೋಮವಾರ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಅವರು ಮಾದಿಗ ಸಮಾಜದ ಮುಖಂಡ ಹಾಗೂ ಬನ್ನೂರು ಪುರಸಭೆ ಮಾಜಿ ಸದಸ್ಯ ಶಿವಣ್ಣ ಅವರೊಂದಿಗೆ ಭೂಮಿ ಪೂಜೆ ನೆರವೇರಿಸಿದರು.


ಮಾದಿಗ ಸಮಾಜದ ಸ್ಮಶಾನಕ್ಕೆ ಕಾಂಕ್ರೀಟ್ ರಸ್ತೆ ನಿರ್ಮಿಸುವ ಕಾಮಗಾರಿಗೆ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಭೂಮಿ ಪೂಜೆ ನೆರವೇರಿಸಿದರು.

ಬನ್ನೂರಿನ ಹೊರವಲಯದಲ್ಲಿರುವ ಮಾದಿಗ ಸಮಾಜದ ಸ್ಮಶಾನಕ್ಕೆ ಸಮರ್ಪಕ ರಸ್ತೆ ಸಂಪರ್ಕ ಇಲ್ಲದ ಕಾರಣ ಸಮಾಜದವರು ಶವಗಳನ್ನು ಅಂತ್ಯಕ್ರಿಯೆಗೆ ಕೊಂಡೊಯ್ಯಲು ಕಷ್ಟ ಪಡುತ್ತಿದ್ದರು. ಮಳೆಗಾಲದ ವೇಳೆ ಪರಿಸ್ಥಿತಿ ಮತ್ತಷ್ಟು ದುಸ್ತರವಾಗುತ್ತಿತ್ತು. ಕೆಸರು ಮತ್ತು ನೀರಿನ ಮಧ್ಯೆ ಶವವನ್ನು ಹೊತ್ತು ಹೋಗಬೇಕಾದ ಅನಿವಾರ್ಯತೆ ಎದುರಾಗಿತ್ತು ಈ ಹಿನ್ನೆಲೆಯಲ್ಲಿ ರಸ್ತೆ ನಿರ್ಮಿಸಿಕೊಡು ವಂತೆ ಸಮಾಜದವರು ಕಳೆದ 50 ವರ್ಷಗಳಿಂದ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದರು.

ರಸ್ತೆ ನಿರ್ಮಾಣಕ್ಕೆ ಒತ್ತಾಯಿಸಿ ಪ್ರತಿಭಟನೆಗಳನ್ನು ನಡೆಸಲಾಗಿತ್ತು. ಮೈಸೂರು–ಬನ್ನೂರು ಮುಖ್ಯರಸ್ತೆ ತಡೆ ನಡೆಸಿ ಕಾವೇರಿ ವೃತ್ತದಲ್ಲಿ ಶವ ಇಟ್ಟು ಪ್ರತಿಭಟನೆ ನಡೆಸುವ ಮೂಲಕ ಅಧಿಕಾರಿಗಳ ಗಮನ ಸೆಳೆಯಲಾಗಿತ್ತು. ಅಲ್ಲದೇ ಕಾಮಗಾರಿ ಆರಂಭಿಸದಿದ್ದರೇ ತಾಲೂಕು ಕಚೇರಿ ಎದುರೇ ಶವಸಂಸ್ಕಾರ ನಡೆಸುವುದಾಗಿ ಎಚ್ಚರಿಕೆ ಕೂಡ ನೀಡಲಾಗಿತ್ತು. ಹಲವು ಬಾರಿ ಸ್ಥಳ ಪರಿಶೀಲಿಸಿದ್ದ ಅಧಿಕಾರಿಗಳು ರಸ್ತೆ ಅಭಿವೃದ್ಧಿಗೆ ಭರವಸೆ ನೀಡಿದ್ದರು. ಆದರೆ ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದ ಕಾಮಗಾರಿ ಆರಂಭವಾಗದೇ ವಿಳಂಬವಾಗುತ್ತಿತ್ತು. ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯ 30 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ನಿರ್ಮಿತಿ ಕೇಂದ್ರದ ಮೂಲಕ ಕಾಮಗಾರಿ ಅನುಷ್ಠಾನಗೊಳ್ಳಲಿದೆ.

ಪುರಸಭೆ ಮಾಜಿ ಸದಸ್ಯ ಶಿವಣ್ಣ ಮಾತನಾಡಿ, ರಸ್ತೆ ನಿರ್ಮಾಣಕ್ಕಾಗಿ ನಡೆದ ಹೋರಾಟದ ಹಿಂದಿನ ಘಟನೆಗಳನ್ನು ಸ್ಮರಿಸಿದರು. ಸಮಾಜದ ನಿಂಗರಾಜು ಎಂಬುವರು ನಾನು ಸತ್ತ ಬಳಿಕ ನನ್ನ ಶವ ಇಟ್ಟು ಪ್ರತಿಭಟನೆ ನಡೆಸಿ ರಸ್ತೆ ನಿರ್ಮಾಣ ಮಾಡಿಸಿಕೊಳ್ಳಿ ಎಂದು ಹೇಳಿದ್ದರು. ಅವರ ನಿಧನದ ಬಳಿಕ ಕುಟುಂಬದವರ ಒಪ್ಪಿಗೆ ಪಡೆದು ಶವದೊಂದಿಗೆ ಪ್ರತಿಭಟನೆ ನಡೆಸಲಾಗಿತ್ತು. ನಂತರ ಮರಿಯಣ್ಣ ಅವರ ಶವದೊಂದಿಗೆ ಮತ್ತೊಮ್ಮೆ ಪ್ರತಿಭಟನೆ ನಡೆಸಿದಾಗ ರಸ್ತೆ ನಿರ್ಮಾಣದ ವಿಚಾರದಲ್ಲಿ ಆಡಳಿತದಿಂದ ಸ್ಪಷ್ಟ ಭರವಸೆ ದೊರೆಯಿತು ಎಂದು ತಿಳಿಸಿದರು.

> “ಪ.ಜಾತಿ ಎಡಗೈ ಸಮಾಜದ ಸ್ಮಶಾನಕ್ಕೆ ರಸ್ತೆ ಕಲ್ಪಿಸಲು ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳುವುದು ಅನಿವಾರ್ಯವಾಗಿತ್ತು. ಸಾಮಾನ್ಯವಾಗಿ ಇಂತಹ ಪ್ರಕ್ರಿಯೆಗೆ ಎರಡರಿಂದ ಮೂರು ವರ್ಷ ಬೇಕಾಗುತ್ತದೆ. ಭೂ ಮಾಲೀಕರು ನೇರ ಖರೀದಿಗೆ ಒಪ್ಪಿದರೆ ಪ್ರಕ್ರಿಯೆ ಶೀಘ್ರ ಪೂರ್ಣಗೊಳ್ಳುತ್ತದೆ. ಆದರೆ ಈ ಪ್ರಕರಣದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಅನುಸರಿಸಬೇಕಾದ ಕಾರಣ ವಿಳಂಬವಾಗಿದೆ. ಆದರೂ ಸಾಧ್ಯವಾದಷ್ಟು ವೇಗವಾಗಿ ಪ್ರಕ್ರಿಯೆ ಪೂರ್ಣಗೊಳಿಸಿ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು ಅಗತ್ಯ ಅನುದಾನ ಒದಗಿಸಿದ್ದು, ನಿರ್ಮಿತಿ ಕೇಂದ್ರದ ಮೂಲಕ ಟೆಂಡರ್ ಪಡೆದ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು. – ಟಿ.ಜೆ.ಸುರೇಶಾಚಾರ್, ತಹಶೀಲ್ದಾರ್.

ಸ್ಮಶಾನದ ತಡೆಗೋಡೆ ಎತ್ತರಿಸದಿದ್ದರೆ ಹೋರಾಟ: ಸ್ಮಶಾನ ಅಭಿವೃದ್ಧಿಗೆ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ 25 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿದ್ದರು. ಆ ಅನುದಾನದಲ್ಲಿ ಬಹುತೇಕ ಕಾಮಗಾರಿ ಪೂರ್ಣಗೊಂಡಿದ್ದರೂ, ಜಿಪಂನಿಂದ ಕೈಗೊಳ್ಳಬೇಕಿದ್ದ ಶೇ.5ರಷ್ಟು ಕಾಮಗಾರಿ ಇನ್ನೂ ಬಾಕಿ ಉಳಿದಿದೆ. ಸ್ಮಶಾನದ ತಡೆ ಗೋಡೆಯನ್ನು 10 ಅಡಿ ಎತ್ತರಕ್ಕೆ ಹೆಚ್ಚಿಸಬೇಕೆಂದು ಮನವಿ ಮಾಡಿದಾಗ ಅನುದಾನದ ಕೊರತೆಯ ನೆಪ ಹೇಳಲಾಗುತ್ತಿದೆ. ಹೀಗಾಗಿ ಸ್ಮಶಾನ ಅಭಿವೃದ್ಧಿಗೆ ಮೀಸಲಾಗಿದ್ದ ಹಣದ ಬಳಕೆ ಕುರಿತು ಅನುಮಾನ ಮೂಡಿದೆ. ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳ್ಳುವ ವೇಳೆಗೆ ತಡೆಗೋಡೆ ಎತ್ತರಿಸುವ ಕೆಲಸ ಆಗಬೇಕು. ಇಲ್ಲವಾದಲ್ಲಿ ಜಿಪಂ ಎದುರು ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಹೋರಾಟದ ಸಂದರ್ಭ ಮೃತ ನಿಂಗಣ್ಣ ಹಾಗೂ ಮರಿಯಯ್ಯ ಅವರ ಶವಗಳನ್ನು ಪ್ರತಿಭಟನೆಗೆ ಬಳಸಲು ಸಹಕರಿಸಿದ್ದ ಅವರ ಕುಟುಂಬ ಸದಸ್ಯರಾದ ಹೇಮ ಮತ್ತು ನೀಲಮ್ಮ ಅವರನ್ನು ಸಮಾಜದಿಂದ ಸನ್ಮಾನಿಸಲಾಯಿತು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಸತೀಶ್, ಉಪ ತಹಸೀಲ್ದಾರ್ ರೂಪ, ರಾಜಸ್ವ ನಿರೀಕ್ಷಕ ಸಿದ್ದರಾಜು, ಗ್ರಾಮ ಲೆಕ್ಕಿಗ ಸಿದ್ದರಾಜು, ಪುರಸಭೆ ಮಾಜಿ ಸದಸ್ಯ ಮೂರ್ತಿ, ಗುತ್ತಿಗೆದಾರ ಉಮೇಶ್, ಯಜಮಾನರಾದ ಶ್ರೀಕಾಂತ್, ಮಹದೇವ, ಗಿರಿಯಪ್ಪ, ಚನ್ನಪ್ಪ, ರಂಗಪ್ಪ, ಚಿಕ್ಕಕಾಳಯ್ಯ, ಮುಖಂಡರಾದ ಚಾಮರಾಜು, ಉಮೇಶ್, ಕಾಂತ, ಸಿದ್ದು, ಬಿ.ವಿ.ರಮೇಶ್, ಜಯರಾಂ, ಬಿ.ಎಸ್.ರವಿ, ನಾಗೇಂದ್ರ, ಸ್ವಾಮಿ, ಶಿವಣ್ಣ, ಸೇರಿದಂತೆ ಇನ್ನಿತರರಿದ್ದರು.

ಮೈಸೂರು ಮಿತ್ರ

ಮಂಗಳವಾರ 23 ಜೂನ್ 2026

ಮೈಸೂರಿನ ಕುವೆಂಪುನಗರದಲ್ಲಿ ಡಾ.ಶಿವಕುಮಾರ ಸ್ವಾಮಿಗಳ ಪ್ರತಿಮೆ ಸ್ಥಾಪಿಸಿ

●ಅಖಿಲ ಭಾರತ ವೀರಶೈವ ಲಿಂಗಾಯತರ ಮಹಾಸಭಾದ ಮುಖಂಡರಿಂದ ಪ್ರಾದೇಶಿಕ ಆಯುಕ್ತರಿಗೆ ಮನವಿ ಸಲ್ಲಿಕೆ

●ಮೈಸೂರು ಮಹಾನಗರ ಪಾಲಿಕೆಯಿಂದ ಭೂಮಿ, ಟೆಂಡರ್ ಆಗಿದೆ, ಹಣವೂ ಬಿಡುಗಡೆಯಾಗಿದೆ, ಆದರೂ ವಿಳಂಬವೇಕೆ

ಮೈಸೂರು, ಜೂ.22(ಜಿಎ)–ಮೈಸೂರು ಕುವೆಂಪುನಗರದಲ್ಲಿ ಶ್ರೀ ಶಿವಕುಮಾರ ಸ್ವಾಮಿ ವೃತ್ತದಲ್ಲಿ ಪರಮಪೂಜ್ಯ ಡಾ.ಶಿವಕುಮಾರ ಸ್ವಾಮಿ ಅವರ ಪ್ರತಿಮೆಯನ್ನು ಶೀಘ್ರವಾಗಿ ಸ್ಥಾಪಿಸುವಂತೆ ಆಗ್ರಹಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮುಖಂಡರು ಪ್ರಾದೇಶಿಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಕುವೆಂಪುನಗರದಲ್ಲಿರುವ ಜಗದಾಂಬ ಪೆಟ್ರೋಲ್ ಬಂಕ್ ಮುಂಭಾಗದ ಶ್ರೀ ಶಿವಕುಮಾರ ಸ್ವಾಮಿ ವೃತ್ತದಲ್ಲಿ ಪರಮಪೂಜ್ಯ ಡಾ.ಶಿವಕುಮಾರ ಸ್ವಾಮಿಗಳವರ ಪ್ರತಿಮೆಯನ್ನು ಸ್ಥಾಪಿಸುವ ಕುರಿತು ಈ ಹಿಂದೆ ಮೈಸೂರು ಮಹಾನಗರ ಪಾಲಿಕೆಯಿಂದ ಕ್ರಮ ಕೈಗೊಳ್ಳಲಾಗಿತ್ತು. ಈ ಯೋಜನೆಗೆ ಸಂಬಂಧಿಸಿದಂತೆ ಅಂದಿನ ಮೇಯರ್ ಸುನಂದಾ ಪಾಲನೇತ್ರ ಅವರು ಭೂಮಿಪೂಜೆ ನೆರವೇರಿಸಿದ್ದರು. ಅಲ್ಲದೆ ಪ್ರತಿಮೆ ನಿರ್ಮಾಣಕ್ಕಾಗಿ ಟೆಂಡರ್ ಸಹ ಕರೆಯಲಾಗಿದೆ. ಹಣ ಕೂಡ ಬಿಡುಗಡೆಯಾಗಿದೆ ಎಂದು ಸಾರ್ವಜನಿಕರಿಗೆ ತಿಳಿಸಲಾಗಿತ್ತು. ಆದರೆ ಇದುವರೆಗೆ ಪ್ರತಿಮೆ ನಿರ್ಮಾಣ ಕಾರ್ಯ ಆರಂಭವಾಗದೇ ಇರುವುದರಿಂದ ಸಾರ್ವಜನಿಕರಲ್ಲಿ ಹಾಗೂ ಭಕ್ತರಲ್ಲಿ ತೀವ್ರ ನಿರಾಸೆ ಉಂಟಾಗಿದೆ ಎಂದು ಮುಖಂಡರು ತಿಳಿಸಿದರು.



ಮೈಸೂರಿನಲ್ಲಿ ಡಾ.ಶಿವಕುಮಾರ ಸ್ವಾಮಿ ಅವರ ಪ್ರತಿಮೆಯನ್ನು ಶೀಘ್ರವಾಗಿ ಸ್ಥಾಪಿಸುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮುಖಂಡರು ಪ್ರಾದೇಶಿಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಕಾಮಗಾರಿಗೆ ಸಂಬಂಧಿಸಿದಂತೆ ಶಾಸಕ ಟಿ.ಎಸ್. ಶ್ರೀವತ್ಸ ಹಾಗೂ ಸಂಘಟನೆಯ ಮುಖಂಡರು ಹಲವಾರು ಬಾರಿ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಇಂದು–ನಾಳೆ ಎಂಬ ಕಾರಣ ನೀಡಿ ಕಾರ್ಯವನ್ನು ಮುಂದೂಡಲಾಗುತ್ತಿದೆ. ಈ ಹಿಂದೆ ಕಾರ್ಯನಿರ್ವಹಿಸಿದ್ದ ನಗರ ಪಾಲಿಕೆಯ ಅಧಿಕಾರಿಗಳು ಪ್ರತಿಮೆ ನಿರ್ಮಾಣಕ್ಕಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ ಹಾಗೂ ಮುಂಗಡ ಹಣ ಸಹ ಪಾವತಿಸಲಾಗಿದೆ ಎಂದು ತಿಳಿಸಿದ್ದರು. ಆದರೆ ಅವರು ವರ್ಗಾವಣೆಯಾದ ನಂತರ ಯಾವುದೇ ಪ್ರಗತಿ ಕಂಡುಬಂದಿಲ್ಲ.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಈ ಕುರಿತು ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ ಎಂಬುದು ವಿಷಾದನೀಯ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಡಾ.ಶಿವಕುಮಾರ ಸ್ವಾಮಿಗಳು ರಾಷ್ಟ್ರ ಕಂಡ ಅಪರೂಪದ ಮಹನೀಯರಾಗಿದ್ದು, ಅನ್ನದಾಸೋಹ, ವಿದ್ಯಾದಾಸೋಹ ಮತ್ತು ವಸತಿ ದಾಸೋಹಗಳ ಮೂಲಕ ಲಕ್ಷಾಂತರ ಬಡ ಮತ್ತು ನಿರ್ಗತಿಕ ಮಕ್ಕಳಿಗೆ ಆಶ್ರಯ ಹಾಗೂ ಶಿಕ್ಷಣ ನೀಡಿ ಸಮಾಜಕ್ಕೆ ಗಣನೀಯ ಸೇವೆ ಸಲ್ಲಿಸಿರುವ ಸ್ಮರಣಾರ್ಥವಾಗಿ ಘೋಷಿಸಲ್ಪಟ್ಟಿರುವ ಪ್ರತಿಮೆ ನಿರ್ಮಾಣ ಕಾರ್ಯವನ್ನು ವಿಳಂಬ ಮಾಡುವುದು ಭಕ್ತರ ಭಾವನೆಗಳಿಗೆ ಧಕ್ಕೆ ಉಂಟು ಮಾಡುತ್ತಿದೆ. ಆದ್ದರಿಂದ ಸಮಸ್ಯೆ ಪರಿಶೀಲಿಸಿ, ಮೈಸೂರು ಕುವೆಂಪುನಗರದ ಶ್ರೀ ಶಿವಕುಮಾರ ಸ್ವಾಮಿ ವೃತ್ತದಲ್ಲಿ ಶ್ರೀ ಶಿವ ಕುಮಾರ ಸ್ವಾಮಿ ಅವರ ಪ್ರತಿಮೆಯನ್ನು ಆದಷ್ಟು ಶೀಘ್ರವಾಗಿ ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳಿ ಎಂದು ಮುಖಂಡರು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಘಟಕದ ನಿಕಟ ಪೂರ್ವ ಕೋಶಾಧ್ಯಕ್ಷ ವರುಣಾ ಮಹೇಶ್, ಮುಖಂಡರಾದ ಜಯಕುಮಾರ್, ಜಗದೀಶ್, ಮಾದಾಪುರ, ಬಸವರಾಜ್, ಆನಗಟ್ಟಿ ಮಹಾದೇವಸ್ವಾಮಿ, ಮನು ನಂಜನಾಯಕನಹಳ್ಳಿ, ಬಿ ಗುರುಸ್ವಾಮಿ, ನಂಜುಂಡಸ್ವಾಮಿ, ಮಧು, ಅಭಿ, ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಲಾಸಿ ಪಾಳ್ಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಬಾಲನ್ (ತ)	4 ಪ್ರದರ್ಶನಗಳು
ಸಂಗಂ	
ನೂರ್ ಸ್ವಾಮಿ	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಲಘಟ್ಟ (ಕ)	4 ಪ್ರದರ್ಶನಗಳು

ಗೌರವ ಸಮರ್ಪಣೆ



ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರನ್ನು, ಅವರ ಅರಮನೆ ನಿವಾಸದಲ್ಲಿ ಸೋಮವಾರ ವಿಧಾನಪರಿಷತ್ ನೂತನ ಸದಸ್ಯ ಆರ್. ರಘು ಕೌಟಿಲ್ಯ ಅವರು ಭೇಟಿಯಾಗಿ ಪುಷ್ಪಗುಚ್ಛ ನೀಡಿ ಗೌರವ ಸಲ್ಲಿಸಿದರು.

ಬಿಜೆಪಿಗೆ ಬಿಗ್ ಶಾಕ್ ನೀಡಿದ ಸದಾನಂದಗೌಡ 'ಪ್ರೆಸ್ಟೀಜ್ ಅಪಾರ್ಟ್‌ಮೆಂಟ್' ಸಭೆಯ ರಹಸ್ಯ ಬಯಲು

ಬೆಂಗಳೂರು: ಇತ್ತೀಚಿಗೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನದಿಂದ ಕಂಗೆಟ್ಟು, ಆಣೆ ಪ್ರಮಾಣದ ಮೊರೆ ಹೋಗಿರುವ ಬಿಜೆಪಿಗೆ ಮಾಜಿ ಮುಖ್ಯಮಂತ್ರಿ ಡಿವಿ ಸದಾನಂದಗೌಡ ಅವರು ಬಿಗ್ ಶಾಕ್ ನೀಡಿದ್ದಾರೆ.



ಸದಾನಂದಗೌಡ

ಪಕ್ಷದೊಳಗಿನ 'ವಿಶ್ವಾಸ ದ್ರೋಹಿ'ಗಳನ್ನು ಪತ್ತೆಹಚ್ಚುವ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಬಿಜೆಪಿಯಲ್ಲಿ ಆಂತರಿಕ ಭಿನ್ನಮತಕ್ಕೆ ಕಾರಣವಾಗಿದೆ. ಇದರ ಬೆನ್ನಲ್ಲೇ ಕ್ರಾಸ್ ವೋಟಿಂಗ್ ಗೆ ಸಂಬಂಧಿಸಿದಂತೆ 'ಅಪಾರ್ಟ್‌ಮೆಂಟ್‌ನಲ್ಲಿ ನಡೆದ ರಹಸ್ಯ ಸಭೆ'ಕುರಿತು ಸದಾನಂದಗೌಡ ಅವರು ಅತ್ಯಂತ ಸ್ಫೋಟಕ ಮಾಹಿತಿ ಬಹಿರಂಗಪಡಿಸಿದ್ದಾರೆ. ಅಲ್ಲದೆ ಪಕ್ಷದ ರಾಜ್ಯ ನಾಯಕರ ಉದಾಸೀನತೆಯೇ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಗೆಲುವಿಗೆ ಪ್ರಮುಖ ಕಾರಣ ಎಂದು ನೇರವಾಗಿ ಚಾಟಿ ಬೀಸಿದ್ದಾರೆ.

ಕಾಂಗ್ರೆಸ್ ಐದನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದಾಗಲೇ ನಾವು ಎಚ್ಚೆತ್ತುಕೊಳ್ಳಬೇಕಿತ್ತು ಎಂದು ಮಾತು ಆರಂಭಿಸಿದ ಸದಾನಂದ ಗೌಡ, ತೆರೆಮರೆಯಲ್ಲಿ ನಡೆದ ರಾಜಕೀಯ ಆಪರೇಷನ್‌ನ ಸಂಪೂರ್ಣ ವಿವರವನ್ನು ಬಿಚ್ಚಿಟ್ಟಿದ್ದಾರೆ.

ಜೂನ್ 13 ರಂದು ನನಗೆ ಹೆಬ್ಬಾಳದ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್‌ನಿಂದ ಒಂದು ಕರೆ ಬಂದಿತ್ತು. ಕಾಂಗ್ರೆಸ್‌ನ ನಾಲ್ಕು ಪ್ರಮುಖ ನಾಯಕರು ಮತ್ತು ಬಿಜೆಪಿಯ ಕೆಲ ಶಾಸಕರು ಅಲ್ಲಿ ರಹಸ್ಯ ಸಭೆ ನಡೆಸುತ್ತಿದ್ದಾರೆ ಎಂದು ಆ ವ್ಯಕ್ತಿ ಮಾಹಿತಿ ನೀಡಿದರು. ನಾನು ತಕ್ಷಣವೇ ಅಲರ್ಟ್ ಆಗಿ ನಮ್ಮ ಪಕ್ಷದ ರಾಜ್ಯಾಧ್ಯಕ್ಷರಿಗೆ ಮತ್ತು ಆರ್. ಅಶೋಕ್ ಅವರಿಗೆ ಕರೆ ಮಾಡಿದೆ. ಆದರೆ ಇಬ್ಬರೂ ಸಿಗಲಿಲ್ಲ. ತಕ್ಷಣವೇ ರಾಜ್ಯ ಪ್ರಧಾನ ಕಾರ್ಯದರ್ಶಿಯೊಬ್ಬರಿಗೆ ಕಾಲ್ ಮಾಡಿ ವಿಷಯ ತಿಳಿಸಿದೆ. ಅವರು 'ಸರಿ ನೋಡ್ತೇನೆ' ಎಂದರು. ಆದರೆ ಮರುದಿನವೇ ಅದೇ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಪಕ್ಕದ ಮತ್ತೊಂದು ಅಪಾರ್ಟ್‌ಮೆಂಟ್‌ನಲ್ಲಿ ಎರಡನೇ ಸಭೆಯೂ ನಡೆಯಿತು! ಆಗಲೂ ನಾನು ಅದೇ ಪ್ರಧಾನ ಕಾರ್ಯದರ್ಶಿಗೆ ಕರೆ ಮಾಡಿ ಎಚ್ಚರಿಸಿದೆ. ಆದರೆ ನಮ್ಮವರು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ಹೇಳಿದ್ದಾರೆ.

ವಿಪರ್ಯಾಸ ಎಂದರೆ, ಅಡ್ಡಮತದಾನ ನಡೆದು ಪಕ್ಷಕ್ಕೆ ಭಾರಿ ಮುಖಭಂಗವಾದ ಮೇಲೆ ಅದೇ ಪ್ರಧಾನ ಕಾರ್ಯದರ್ಶಿ ಡಿವಿಎಸ್ ಅವರಿಗೆ ಕರೆ ಮಾಡಿ, 'ಅಣ್ಣ ನೀವು ಹೇಳಿದ ಹಾಗೆಯೇ ಆಯ್ತಲ್ಲ!' ಎಂದಿದ್ದರು. ಅದಕ್ಕೆ ಸದಾನಂದ ಗೌಡರು, 'ಹೊಳೆ ದಾಟಿದ ಮೇಲೆ ಮತ್ತೇನು ಚರ್ಚೆ?' ಎಂದು ಬೇಸರದಿಂದಲೇ ಸುಮ್ಮನಾಗಿದ್ದಾರೆ.

ಇನ್ನು ಧರ್ಮಸ್ಥಳದಲ್ಲಿ ಆಣೆ–ಪ್ರಮಾಣ ವಿಚಾರಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಮಾಜಿ ಸಿಎಂ, 'ನಾನು ರಾಜ್ಯಾಧ್ಯಕ್ಷರಿಗೆ ಕರೆ ಮಾಡಿ ಸ್ಪಷ್ಟವಾಗಿ ಹೇಳಿದ್ದೇನೆ. ಯಾವುದೇ ಕಾರಣಕ್ಕೂ ಧರ್ಮದ ಕ್ಷೇತ್ರಕ್ಕೆ ರಾಜಕೀಯವನ್ನು ತೆಗೆದುಕೊಂಡು ಹೋಗಬೇಡಿ. ದೇವರ ಹತ್ತಿರವೂ ರಾಜಕೀಯ ಹೋಗುವುದಾದರೆ ಎಲ್ಲವನ್ನೂ ದೇವರಿಗೇ ಬಿಟ್ಟುಬಿಡಿ. ದೇವರೇ ರಾಜಕೀಯ ಮಾಡಲಿ! ನಮ್ಮಿಂದ ರಾಜಕೀಯ ಮಾಡಲು ಆಗದಿದ್ದರೆ ದೇವರಿಗೇ ಬಿಟ್ಟುಬಿಡಿ' ಎಂದು ಹೇಳಿರುವುದಾಗಿ ತಿಳಿಸಿದ್ದಾರೆ.

ಕುಂಬಾರರ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.22– ನಗರದ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ (ಅಪೋಲೊ ಆಸ್ಪತ್ರೆ ಎದುರು) ಕುಂಬಾರರ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ 2026–27ನೇ ಸಾಲಿನ ಉಚಿತ ವಸತಿ ಸೌಲಭ್ಯಕ್ಕಾಗಿ ಕುಂಬಾರ ಜನಾಂಗದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪದವಿ, ಸ್ನಾತಕೋತ್ತರ ಹಾಗೂ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಬಿ.ಎಸ್ಸಿ., ಎಂ.ಎಸ್ಸಿ., ಬಿ.ಇ., ಎಂ.ಟೆಕ್., ಎಂಬಿಬಿಎಸ್ ಸೇರಿದಂತೆ ವಿವಿಧ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಿಲಯದ ಸೌಲಭ್ಯ ಲಭ್ಯವಿರಲಿದೆ.

ಅರ್ಜಿದಾರರು ವಿದ್ಯಾರ್ಥಿ ನಿಲಯದಲ್ಲಿ ಅರ್ಜಿ ನಮೂನೆ ಪಡೆದು, ಕಾಲೇಜಿನ ವ್ಯಾಸಂಗ ದೃಢೀಕರಣ ಪತ್ರ, ಜಾತಿ ಪ್ರಮಾಣ ಪತ್ರ, ಕಾಲೇಜಿನ ಗುರುತಿನ ಚೀಟಿ, ಅಗತ್ಯ ದಾಖಲೆಗಳು ಹಾಗೂ ಎರಡು ಭಾವಚಿತ್ರಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಜೂನ್ 30, 2026 ಕೊನೆಯ ದಿನವಾಗಿದೆ.


ಕಳೆದ ಸಾಲಿನಲ್ಲಿ ವಿದ್ಯಾರ್ಥಿ ನಿಲಯದಲ್ಲಿ ವಾಸ್ತವ್ಯ ಪಡೆದಿದ್ದ ಹಳೆಯ ವಿದ್ಯಾರ್ಥಿಗಳು ಸಹ ಈ ಸಾಲಿನ ಪ್ರವೇಶಕ್ಕಾಗಿ ಕಡ್ಡಾಯವಾಗಿ ಅರ್ಜಿ ಸಲ್ಲಿಸಬೇಕೆಂದು ಟ್ರಸ್ಟ್‌ನ ಕಾರ್ಯದರ್ಶಿ ತಿಳಿಸಿದ್ದಾರೆ.

ಅರ್ಜಿ ನಮೂನೆಗಳು ವಿದ್ಯಾರ್ಥಿ ನಿಲಯದಲ್ಲಿ ಲಭ್ಯವಿದ್ದು, ಹೆಚ್ಚಿನ ಮಾಹಿತಿಗಾಗಿ ಟ್ರಸ್ಟ್‌ನ ಕಾರ್ಯದರ್ಶಿ ಟಿ.ರಾಜು 9611599514 ಅಥವಾ 9686180254 ನಂಬರಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದುಡ್ಡು ಕೊಟ್ಟು ಕರೆತಂದ ಕಾಂಗ್ರೆಸ್ ಶಾಸಕರಿಂದಲೇ ಬಿಜೆಪಿ ಹಾಳಾಯ್ತು

ಈಶ್ವರಪ್ಪ ಸ್ಫೋಟಕ ಹೇಳಿಕೆ

ಶಿವಮೊಗ್ಗ: ಈ ಹಿಂದೆ ದುಡ್ಡು ಕೊಟ್ಟು ಕರೆತಂದ 17 ಕಾಂಗ್ರೆಸ್ ಶಾಸಕರಿಂದಲೇ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿತ್ತು. ಆದರೆ ನಂತರ ಅವರಿಂದಲೇ ಪಕ್ಷ ಹಾಳಾಯ್ತು. ಕಾಂಗ್ರೆಸ್‌ಗೂ ಅದೇ ಪರಿಸ್ಥಿತಿ ಬರಲಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಸೋಮವಾರ ಸ್ಫೋಟಕ ಹೇಳಿಕೆ ನೀಡಿದ್ದಾರೆ.



ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಈಶ್ವರಪ್ಪ, ಇತ್ತೀಚಿಗೆ ಎಂಎಲ್‌ಸಿ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಎಂಎಲ್‌ಸಿಗಳನ್ನು ಖರೀದಿ ಮಾಡುವ ಕೆಲಸ ನಡೆದಿದೆ. ಇದರಲ್ಲಿ ಎಷ್ಟು ಭ್ರಷ್ಟಾಚಾರ ನಡೆದಿದೆ ಅಂತ ಬಹಿರಂಗವಾಗಬೇಕು ಎಂದು ಆಗ್ರಹಿಸಿದರು.

ಈ ಹಿಂದೆ 17 ಜನ ಕಾಂಗ್ರೆಸ್ ಶಾಸಕರನ್ನು ದುಡ್ಡು ಕೊಟ್ಟು ನಮ್ಮ ಪಕ್ಷಕ್ಕೆ ಕರೆದುಕೊಂಡಿದ್ದೆವು. ಅದರಿಂದ ಬಿಜೆಪಿ ಅಧಿಕಾರಕ್ಕೆ ಬಂತು. ನಂತರ ಪಕ್ಷ ಅವರಿಂದ ಹಾಳಾಗಿ ಹೋಯ್ತು. ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಅದು ಹೊರಗೆ ಬರಬೇಕು ಎಂದರು.

ಇನ್ನು ಧರ್ಮಸ್ಥಳದಲ್ಲಿ ಆಣೆ – ಪ್ರಮಾಣ ವಿಚಾರದ ಚರ್ಚೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆಡಳಿತ ಪಕ್ಷ, ವಿರೋಧ ಪಕ್ಷ ರಾಜ್ಯದ ಅಭಿವೃದ್ಧಿ ಬಗ್ಗೆ ಮಾತಾಡಬೇಕಿತ್ತು ಎಂದರು.

ಧರ್ಮಸ್ಥಳ ಪವಿತ್ರವಾದ ಸ್ಥಳ, ಅಲ್ಲಿ ಆಣೆ ಪ್ರಮಾಣ ಬೇಡ. ವಿಜಯೇಂದ್ರ ಅವರು ತಕ್ಷಣ ತಮ್ಮ ನಿಲುವನ್ನ ಹಿಂಪಡೆಯಬೇಕು. ಭಕ್ತಿಯನ್ನ ಒರೆ ಹಚ್ಚುವುದಲ್ಲ, ಹಾಗಾಗಿ ಈ ನಿರ್ಧಾರ ಕೈಬಿಡಬೇಕು. ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಮಾಡಿ ಅಣ್ಣಪ್ಪನ ಬಳಿ ಬಂದು ಕ್ಷಮೆ ಕೇಳ್ತಾರೆ. ಈ ಪದ್ಧತಿ ಒಳ್ಳೆಯದಲ್ಲ. ಇದು ನನ್ನ ಸಲಹೆ ಎಂದರು.

ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರು: ಯಾರೇ ಆದರೂ ಬೈಯುವ ಹಕ್ಕು ಅವರಿಗಿದೆ

ಬೆಂಗಳೂರು: ಮಲ್ಲಿಕಾರ್ಜುನ ಖರ್ಗೆಯವರು ಕರ್ನಾಟಕ ರಾಜಕಾರಣದಲ್ಲಿ ಅತ್ಯಂತ ಹಿರಿಯರು. ಅವರಿಗೆ ದಶಕಗಳ ರಾಜಕೀಯ ಅನುಭವ ಇದೆ. ವಯಸ್ಸೂ ಇದೆ. ಪಕ್ಷದಲ್ಲಿ ಯಾರನ್ನೇ ಆದರೂ ಶಿಸ್ತಿನ ಹಾದಿಯಲ್ಲಿ ನಡೆಸುವ ಸಂಪೂರ್ಣ ಅಧಿಕಾರ ಮತ್ತು ಅರ್ಹತೆ ಅವರಿಗಿದೆ. ಅದನ್ನು ಪ್ರಶ್ನಿಸುವ ಯೋಗ್ಯತೆ ಬಿಜೆಪಿಯವರಿಗೆ ಇಲ್ಲ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.



ಬೆಂಗಳೂರಿನಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಬಿಜೆಪಿಯವರಿಗೆ ತಮ್ಮ ಪಕ್ಷದ ಬಗ್ಗೆ ಇರುವ ಚಿಂತೆಗಿಂತ ಮಲ್ಲಿಕಾರ್ಜುನ ಖರ್ಗೆ ಏನು ಹೇಳುತ್ತಾರೆ ಎಂಬುದರ ಬಗ್ಗೆ ಹೆಚ್ಚು ಚಿಂತೆಯಿದೆ. ತಮ್ಮ ಶಾಸಕರು ಬಿಜೆಪಿಗೆ ನಿಷ್ಠರಾಗಿದ್ದಾರೆ ಎಂಬುದಕ್ಕೆ ಪ್ರಮಾಣ ಮಾಡಿಸಲು ಪಕ್ಷದ ಅಧ್ಯಕ್ಷರು ಎಲ್ಲರನ್ನೂ ದೇವಸ್ಥಾನಕ್ಕೆ ಕರೆದೊಯ್ಯಬೇಕಾದ ಪರಿಸ್ಥಿತಿ ಬಂದಿದ್ದೆ, ಅವರ ಆತ್ಮವಿಶ್ವಾಸದ ಮಟ್ಟವನ್ನು ಊಹಿಸಬಹುದು. ಆದರೆ ಒಂದು ಮಾತು ಹೇಳಬೇಕೆಂದರೆ, ರಾಮನ ಹೆಸರಿನಲ್ಲಿ ಲೂಟಿ ಮಾಡಿದವರು ಮಂಜುನಾಥ ಸ್ವಾಮಿಯ ಹೆಸರಿನಲ್ಲಿ ಸತ್ಯವನ್ನು ಹೇಳುತ್ತಾರೆಯೇ ಎಂದು ಪ್ರಶ್ನಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರು ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದಾರೆ. ಪಕ್ಷದ ಶಿಸ್ತು ಉಲ್ಲಂಘನೆ ಮಾಡಿದ ಯಾರನ್ನಾದರೂ ಅವರು ಮುಖ್ಯಮಂತ್ರಿ ಆಗಿರಲಿ, ಮಾಜಿ ಸಿಎಂ ಆಗಿರಲಿ, ಎನ್‌ಎಸ್‌ಯುಐ ಸದಸ್ಯರಾಗಿರಲಿ ಅಥವಾ ಯುವ ಕಾರ್ಯಕರ್ತರಾಗಿರಲಿ ತರಾಟೆಗೆ ತೆಗೆದುಕೊಳ್ಳುವ ಸಂಪೂರ್ಣ ಹಕ್ಕು ಅವರಿಗೆ ಇದೆ. ಇದರಲ್ಲಿ ಯಾವುದೇ ಬೇಧವಿಲ್ಲ. ಅವರ ಹಿರಿಯತೆ, ಸ್ಥಾನಮಾನಕ್ಕೆ ತಕ್ಕಂತೆ ಪಕ್ಷದಲ್ಲಿ ಶಿಸ್ತು ಕಾಪಾಡುವ ಅಧಿಕಾರ ಅವರಿಗೆ ಇದೆ. ಮತ್ತು ಅದರಿಂದ ಯಾರೂ ಬೇಸರ ಪಡುವುದಿಲ್ಲ. ನಮ್ಮ ಪಕ್ಷದವರೇ ಈ ವಿಷಯದ ಬಗ್ಗೆ ಚಿಂತಿಸದಿರುವಾಗ, ಬಿಜೆಪಿಗೆ ಏಕೆ ಚಿಂತೆ ಅವರು ತಮ್ಮದೇ ಪಕ್ಷದ ಬಗ್ಗೆ ಗಮನಹರಿಸಬೇಕು ಎಂದರು.

ಮೇಕೆದಾಟು ಅಣೆಕಟ್ಟು ನಿರ್ಮಿಸಲು ನಾವು ಬಿಡುವುದಿಲ್ಲ

ತಮಿಳುನಾಡು ಸಚಿವ ಎನ್. ಆನಂದ್

ಚೆನ್ನೈ: ನಮ್ಮ ಟಿವಿಕೆ ಸರ್ಕಾರವು ಕಾವೇರಿ ನೀರಿನ ವಿಷಯದಲ್ಲಿ ಯಾವುದೇ ರೀತಿಯ ರಾಜಿ ಮಾಡಿಕೊಳ್ಳುವುದಿಲ್ಲ. ಮೇಕೆದಾಟು ವಿಷಯ ಪ್ರಸ್ತಾಪವಾದ ತಕ್ಷಣವೇ ಮುಖ್ಯಮಂತ್ರಿ ಅವರು ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿದರು. ಅದರ ಮರುದಿನವೇ, ಮೇ 26ರಂದು, ಪತ್ರದ ಮೂಲಕವೂ ಹಾಗೂ ಪ್ರಧಾನಮಂತ್ರಿಯವರೊಂದಿಗೆ ನಡೆದ ವೈಯಕ್ತಿಕ ಭೇಟಿಯಲ್ಲಿಯೂ ಮೇಕೆದಾಟು ಯೋಜನೆಗೆ ಅನುಮತಿ ನೀಡಬಾರದು ಎಂದು ಮುಖ್ಯಮಂತ್ರಿ ಅವರು ಬಲವಾಗಿ ಒತ್ತಾಯಿಸಿದ್ದಾರೆ ಎಂದು ತಮಿಳು ನಾಡು ಸಚಿವ ಎನ್. ಆನಂದ್ ಹೇಳಿದ್ದಾರೆ.

ಇಂದು ವಿಧಾನಸಭೆಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಪ್ರಧಾನ ಪೀಠದ ಮುಂದೆ ಅರ್ಜಿಯನ್ನೂ ಸಲ್ಲಿಸಲಾಗಿದೆ ಎಂದರು.

ಮೇಕೆದಾಟು ಯೋಜನೆ ವಿಚಾರದಲ್ಲಿ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಪ್ರಧಾನಮಂತ್ರಿಯನ್ನು ನೇರವಾಗಿ ಭೇಟಿ ಮಾಡಿ ತಮ್ಮ ಮನವಿಯನ್ನು ಸಲ್ಲಿಸಿದ್ದಾರೆ. ಮೇಕೆದಾಟು ಅಣೆಕಟ್ಟು ವಿಚಾರಕ್ಕೆ ಹೊಸ ನ್ಯಾಯಮಂಡಳಿ ಅಗತ್ಯವಿಲ್ಲ ಎಂದು ಕೆಲವರು ಹೇಳುತ್ತಿದ್ದಾರೆ. ಮೇಕೆದಾಟು ಅಣೆಕಟ್ಟೆಗೆ ವಿರೋಧವಾಗಿ ವಿಧಾನಸಭೆಯಲ್ಲಿ ಅಂಗೀಕರಿಸಲಾದ ನಿರ್ಣಯವನ್ನು ಪ್ರಧಾನಮಂತ್ರಿಗೆ ಕಳುಹಿಸಲಾಗಿದೆ ಎಂದರು.

ಹೊಸ ನ್ಯಾಯಮಂಡಳಿ ರಚನೆಯಾದರೂ ತಮಿಳುನಾಡಿಗೆ ಯಾವುದೇ ಹಾನಿಯಾಗುವುದಿಲ್ಲ. ಮೇಕೆದಾಟು ಅಣೆಕಟ್ಟು ವಿಷಯದಲ್ಲಿ ಇರುವ ಅಪಾಯ ಇನ್ನೂ ದೂರವಾಗಿಲ್ಲ. ಕಾವೇರಿ ಪ್ರಾಧಿಕಾರವು ಕರ್ನಾಟಕದ ಸವಿಸ್ತಾರ ಯೋಜನಾ ವರದಿಯನ್ನು ತಿರಸ್ಕರಿಸಿದೆ ಎಂದು ಹೇಳುವುದು ತಪ್ಪು. ಕಾವೇರಿ ಪ್ರಾಧಿಕಾರವು ಕರ್ನಾಟಕದ ವರದಿಯನ್ನು ತಿರಸ್ಕರಿಸದೆ, ಅದನ್ನು ಹಾಗೆಯೇ ಜಲಸಂಪನ್ಮೂಲ ಇಲಾಖೆಯ ಪ್ರಾಧಿಕಾರಕ್ಕೆ ಕಳುಹಿಸಿದೆ ಎಂದು ಹೇಳಿದರು.

ಅಕ್ರಮ ವಜಾ ರದ್ದಿಗೆ ಆಗ್ರಹಿಸಿ ಎನ್‌ಐಇ ಕಾಲೇಜು ಮುಂದೆ ನೌಕರರ ಪ್ರತಿಭಟನೆ

ಪ್ರತಿಭಟನೆಗೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಸಾಥ್



ಎನ್‌ಐಇಐಟಿ ಕಾಯಂ ನೌಕರರ ಹಕ್ಕು ಹೋರಾಟ ಸಮಿತಿಯಿಂದ ಎನ್‌ಐಇ ಕಾಲೇಜು ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.22(ಜಿಎ)– ಮೈಸೂರಿನ ಎನ್‌ಐಇ ಸಂಸ್ಥೆಯೂ ಬಾಕಿ 12 ತಿಂಗಳುಗಳ ವೇತನ ಮತ್ತು ಸರ್ಕಾರದ ಆದೇಶದಂತೆ ಉದ್ಯೋಗ ಕೊಡುವಂತೆ ಆಗ್ರಹಿಸಿ ಎನ್‌ಐಇಐಟಿ ಕಾಯಂ ನೌಕರರ ಹಕ್ಕು ಹೋರಾಟ ಸಮಿತಿಯಿಂದ ಎನ್‌ಐಇ ಕಾಲೇಜು ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಎನ್‌ಐಇ ಕಾಲೇಜು ಮುಂಭಾಗ ಜಮಾವಣೆಗೊಂಡ ನೌಕರರು ಸಂಸ್ಥೆಯನ್ನು ಕಟ್ಟಿದ 76 ಸಿಬ್ಬಂದಿಗಳನ್ನು ನಿರ್ದಯವಾಗಿ ಬೀದಿಗೆ ತಳ್ಳಿದೆ ಎಂದು ನೌಕರರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪ್ರತಿಭಟನೆಗೆ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಸಾಥ್ ನೀಡಿದರು.

ಅಕ್ರಮ ವಜಾವನ್ನು ರದ್ದುಗೊಳಿಸುವಂತೆ ಉನ್ನತ ಶಿಕ್ಷಣ ಇಲಾಖೆ ಏ.27ರಲ್ಲಿ ಆದೇಶ ಮಾಡಿದೆ. ಸರ್ಕಾರದ ಆದೇಶವನ್ನು ವಿವೇಚನಾರಹಿತ ಎಂದು ಧಿಕ್ಕರಿಸಿದೆ. ವಿಟಿಯುಗೆ ವಿಲೀನಗೊಳಿಸುವಾಗ ಎಲ್ಲಾ ಖಾಯಂ ಸಿಬ್ಬಂದಿಗಳನ್ನು ರಕ್ಷಿಸಲಾಗುವುದು ಎಂದು ಲಿಖಿತವಾಗಿ ಮುಚ್ಚಳಿಕೆ ನೀಡಿ ಅನುಮತಿ ಸಿಕ್ಕ ಕೂಡಲೇ ದ್ರೋಹ ಬಗೆದಿದೆ ಎಂದು ನೌಕರರು ಆರೋಪಿಸಿದ್ದಾರೆ.

ಸಿವಿಲ್ ನ್ಯಾಯಾಲಯದ ಕಡ್ಡಾಯ ಪೂರ್ವಾನುಮತಿ ಪಡೆಯದೆ ಸಾರ್ವಜನಿಕ ಟ್ರಸ್ಟ್ 25 ಎಕರೆ ಕ್ಯಾಂಪಸ್ ಅನ್ನು ಎನ್‌ಐಇ ಸೊಸೈಟಿಗೆ ಕಾನೂನುಬಾಹಿರವಾಗಿ ವರ್ಗಾಯಿಸಿ ಆಸ್ತಿ ಕಬಳಿಸುತ್ತಿದೆ. ಲಾಭದ ದುರಾಸೆಗಾಗಿ ಅನುದಾನಿತ ಕೋರ್ಸ್‌ಗಳನ್ನು ಮುಚ್ಚಿ, ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕ ವಸೂಲಿ ಮಾಡುವ ಮೂಲಕ ಶಿಕ್ಷಣವನ್ನು ವ್ಯಾಪಾರೀಕರಣ ಮಾಡುತ್ತಿದೆ ಎಂದು ಆಪಾದಿಸಿದ್ದಾರೆ. ತಡೆ ಹಿಡಿದಿರುವ 12 ತಿಂಗಳ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದ್ದಾರೆ.

ಈ ವೇಳೆ ವಿಧಾನ ಪರಿಷತ್ ಸದಸ್ಯ ವಿವೇಕಾನಂದ ನೌಕರರ ಹೋರಾಟಕ್ಕೆ ಬೆಂಬಲ ಸೂಚಿಸಿ ಪ್ರತಿಭಟನೆಯಲ್ಲಿ ಭಾಗವಹಿಸಿ, ಸಂಸ್ಥೆಯ ಅಧ್ಯಕ್ಷರೊಂದಿಗೆ ನೌಕರರ ಸಮಸ್ಯೆ ಕುರಿತು ಚರ್ಚಿಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಎನ್‌ಐಇ ಸಂಸ್ಥೆಯ ಆಡಳಿತ ಮಂಡಳಿಯೂ ನೌಕರರ ವಿಚಾರವಾಗಿ ಬಹಳಷ್ಟು ಉದಾಸಿನವಾಗಿ ನಡೆದುಕೊಳ್ಳುತ್ತಿದೆ. ವಜಾಗೊಂಡಿರುವ ನೌಕರರು ಎನ್‌ಐಇಐಟಿ ಸಂಸ್ಥೆಗೆ ಸೇರಿದವರು ನಮಗೂ ಅವರಿಗೂ ಸಂಬಂಧ ಇಲ್ಲ. ಇದು ಸೊಸೈಟಿ ಎಂದು ಹೇಳುತ್ತಿದ್ದಾರೆ.

ಇತಿಹಾಸ ಇರುವ ಸಂಸ್ಥೆಯೂ ನ್ಯಾಯಾಲಯದ ಆದೇಶ, ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಎಲ್ಲರ ಆದೇಶವನ್ನು ಗಾಳಿಗೆ ತೂರಿದ್ದಾರೆ. ಜೊತೆಗೆ 76 ನೌಕರರಿಗೆ ನೋಟಿಸ್ ನೀಡಿದ್ದಾರೆ. ಈಗ ಮರು ನೇಮಕಾತಿ ನಡೆಸುತ್ತಿರುವುದರಿಂದ ವಜಾಗೊಂಡಿರುವವರಿಗೆ ಅವಕಾಶ ನೀಡಿ, ಇಲ್ಲವೇ ವಿಆರ್‌ಎಸ್ ನೀಡಿ ಎಂದು ಸಂಸ್ಥೆಯ ಅಧ್ಯಕ್ಷರೊಂದಿಗೆ ಮಾತನಾಡಿದರೆ, ಅವರಿಂದ ಸೂಕ್ತ ಉತ್ತರ ದೊರೆಯುತ್ತಿಲ್ಲ. ಸೊಸೈಟಿಯಲ್ಲಿ 300 ಮಂದಿ ಸದಸ್ಯರಿದ್ದಾರೆ. ಎಲ್ಲರೂ ಒಪ್ಪಿಕೊಂಡರೆ ಮರು ನೇಮಕ ಮಾಡಿಕೊಳ್ಳುತ್ತೇವೆ ಎಂದು ಉಡಾಫೆ ಉತ್ತರ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಮತ್ತೊಂದೆಡೆ ನಾನು ಶಿಕ್ಷಕರ ಪರವಾಗಿ ಈ ಸಮಸ್ಯೆ ಬಗ್ಗೆ ದನಿ ಎತ್ತಿದ್ದೇನೆ. ಅವರು ನೀವು ಏಕೆ ಇಲ್ಲಿಗೆ ಬರುತ್ತೀರ ಎಂದು ನನ್ನನ್ನೂ ಪ್ರಶ್ನಿಸುತ್ತಿದ್ದಾರೆ. ಈ ಆಡಳಿತ ಮಂಡಳಿ ಧೋರಣೆ ವಿರುದ್ಧ ಸರ್ಕಾರದ ಮುಖ್ಯಕಾರ್ಯದರ್ಶಿ, ವಿಟಿಯುಗೆ ಪತ್ರ ಬರೆದು ಇಲ್ಲಿನ ಸಮಸ್ಯೆ ಬಗ್ಗೆ ಮನವರಿಕೆ ಮಾಡಿಕೊಡುತ್ತೇನೆ ಎಂದರು.

ಈ ವೇಳೆ ಪ್ರತಿಭಟನೆಯಲ್ಲಿ ಡಾ.ಸಂದೀಪ್, ವೇಧಮೋಹನ್, ಪ್ರಭುಸ್ವಾಮಿ, ನಿತೀನ್, ರಾಮಚಂದ್ರ ಮತ್ತಿತರರು ಪಾಲ್ಗೊಂಡಿದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಮೈಸೂರಿನ ಚೆಸ್ಕಾಂ ಕಚೇರಿ ಎದುರು ರೈತರ ಪ್ರತಿಭಟನೆ

ವಿದ್ಯುತ್ ಸರಬರಾಜು ವ್ಯವಸ್ಥೆ ಟಾಟಾ ಕಂಪನಿಗೆ ಕೊಡುವುದು ಬೇಡ



ವಿದ್ಯುತ್ ಸರಬರಾಜು ಮಾಡಲು ಟಾಟಾ ಪವರ್ ಕಾರ್ಪೊರೇಷನ್‌ಗೆ ಪರವಾನಗಿ ಕೊಡಬಾರದೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವಿಜಯನಗರದಲ್ಲಿರುವ ಚೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.22(ಜಿಎ)–ವಿದ್ಯುತ್ ಸರಬರಾಜು ಮಾಡಲು ಟಾಟಾ ಪವರ್ ಕಾರ್ಪೊರೇಷನ್‌ಗೆ ಪರವಾನಗಿ ಕೊಡಬಾರದೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವಿಜಯನಗರದಲ್ಲಿರುವ ಚೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಜನ ಸಾಮಾನ್ಯರ ತೆರಿಗೆ ಹಣದಿಂದ ಸ್ಥಾಪನೆಯಾಗಿರುವ ಸರ್ಕಾರಿ ಸ್ವಾಮ್ಯದ ವಿದ್ಯುತ್ ಪ್ರಸರಣ ಮತ್ತು ವಿದ್ಯುತ್ ಉತ್ಪಾದನಾ ಇಲಾಖೆಗಳನ್ನು ಯಾವುದೇ ಕಾರಣಕ್ಕೂ ಖಾಸಗಿ ಒಡೆತನಕ್ಕೆ ಬಿಟ್ಟುಕೊಡಬಾರದು. ರಾಜ್ಯದ ಜನರು ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಮೂಲ ಮಾಲೀಕರಾಗಿರುತ್ತಾರೆ. ಮಾಲೀಕರು ಒಪ್ಪದ ಹೊರತು ಯಾವುದೇ ಸಂಸ್ಥೆಯನ್ನು ಖಾಸಗೀಕರಣಕ್ಕೆ ಹಸ್ತಾಂತರ ಮಾಡುವಂತಿಲ್ಲ. ಮೂಲ ಸೌಕರ್ಯ ವಲಯಗಳ ಖಾಸಗೀಕರಣ ಜನ ವಿರೋಧಿ ಹಾಗೂ ಬಂಡವಾಳ ಶಾಹಿಗಳ ಪರವಾದ ನಿಲುವಾಗಿರುತ್ತದೆ ಎಂದು ಪ್ರತಿಭಟನಾಕಾರರು ಆಕ್ಷೇಪಿಸಿದರು.

ಖಾಸಗಿ ಕಂಪನಿಗಳಿಗೆ ಲಾಭ ಮಾತ್ರ ಮೂಲ ಉದ್ದೇಶವಾಗಿರುತ್ತದೆಯೇ ಹೊರತು ರಾಜ್ಯದ ಸಾಮಾನ್ಯ ಜನರಿಗಾಗಲಿ ಅಥವಾ ಆ ಸಂಸ್ಥೆಗೆ ಕೆಲಸ ಮಾಡುವ ನೌಕರರಿಗಾಗಲಿ ಮಾನ್ಯತೆ ಇರುವುದಿಲ್ಲ. ಖಾಸಗೀಕರಣದಿಂದ ಜನಪರ ಸರ್ಕಾರಗಳು ಸಾಮಾಜಿಕ ಬದ್ಧತೆಯ ಕಾಳಜಿ ಇರದ ಯಾವ ಕಾರ್ಯಕ್ರಮವನ್ನೂ ಅನುಷ್ಠಾನ ಮಾಡುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ ದಿನದಂದೇ 2400 ಚದರ ಅಡಿ ಒಳಗಡೆ ಇರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಯಾವುದೇ ಕ್ಲಿಯರೆನ್ಸ್ ಬೇಕಾಗಿರುವುದಿಲ್ಲ ಎಂದು ಘೋಷಣೆ ಮಾಡಿದ್ದಾರೆ. ಆದರೆ, ಮೈಸೂರಿನ ನಗರ ಮತ್ತು ಕಂದಾಯ ಪ್ರದೇಶಗಳಲ್ಲಿ 2400 ಒಳಗಡೆ ಇರುವ ವಿಸ್ತೀರ್ಣದ ಮನೆಗಳಿಗೆ 50 ಸಾವಿರದಿಂದ 1 ಲಕ್ಷದವರೆಗೆ ಲಂಚದ ಬೇಡಿಕೆಯನ್ನು ಚೆಸ್ಕಾಂ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಇಡುತ್ತಾರೆ. ಇದರ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಅಧ್ಯಕ್ಷೀಯ ಮಂಡಳಿ ಸದಸ್ಯ ಹೊನ್ನೂರು ಪ್ರಕಾಶ್, ಮುಖಂಡರಾದ ಶಿರಮಳ್ಳಿ ಮಂಜುನಾಥ್, ಸಿದ್ದಲಿಂಗಪುರ ಮೋಹನ್ ಕುಮಾರ್, ಗಳಗರಹುಂಡಿ ವೆಂಕಟೇಶ್, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಪ್ರಮುಖರು ಭಾಗವಹಿಸಿದ್ದರು.

ಹಣಕಾಸು ಸಚಿವಾಲಯದಿಂದ ಕಸ್ಟಮ್ಸ್ ಅನುಮೋದನೆ

ಕಡಕೊಳದ ಮಲ್ಟಿ–ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್ ದೇಶ–ವಿದೇಶದೊಂದಿಗೆ ವಹಿವಾಟಿಗೆ ಸಿದ್ಧ

ಮೈಸೂರು, ಜೂ.22(ಎಜಿ, ಬಿಸಿಟಿ, ಎಂಕೆ)– ಮೈಸೂರಿನ ಕಡಕೊಳದಲ್ಲಿ(ತಾಂಡವಪುರ ಬಳಿ) ರುವ ಮಲ್ಟಿ–ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್ (ಎಂಎಂಎಲ್‌ಪಿ)ಗೆ ಕೇಂದ್ರ ಹಣಕಾಸು ಸಚಿವಾಲಯದಿಂದ ಕಸ್ಟಮ್ಸ್ ಅನುಮೋದನೆ ದೊರೆತಿದ್ದು, ಈ ಮೂಲಕ ದೇಶ–ವಿದೇಶಗಳ ನಡುವೆ ವ್ಯಾಪಾರ–ವಹಿವಾಟು ವಿಸ್ತರಣೆಗೆ ಸಜ್ಜಾಗಿದೆ.

ಮೈಸೂರು ಹಾಗೂ ಸುತ್ತಮುತ್ತಲಿನ ಕೈಗಾರಿಕೆಗಳಿಗೆ ರಫ್ತು–ಆಮದು ಪ್ರಕ್ರಿಯೆಗಳನ್ನು ವೇಗಗೊಳಿಸಲು ಸ್ಥಾಪಿಸಲಾದ ಅತ್ಯಾಧುನಿಕ ಮಲ್ಟಿ–ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್, ಮುಂದಿನ ದಿನಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಾಚರಣೆ ನಡೆಸಲು ಕಸ್ಟಮ್ಸ್ ಅನುಮೋದನೆ ಅನುಕೂಲಕರವಾಗಲಿದೆ.

ಮೈಸೂರು ನಗರದಿಂದ 18 ಕಿ.ಮೀ, ಮಂಡಕಳ್ಳಿ ವಿಮಾನ ನಿಲ್ದಾಣದಿಂದ 8 ಕಿ.ಮೀ ಮತ್ತು ನಂಜನಗೂಡು ಪಟ್ಟಣದಿಂದ 12 ಕಿ.ಮೀ ದೂರದಲ್ಲಿರುವ ಮಲ್ಟಿ–ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್ ಅನ್ನು ಭಾರತೀಯ ಕಂಟೈನರ್ ಕಾರ್ಪೋರೇಷನ್ (ಸಿಎಎನ್‌ಸಿಒಆರ್) ವತಿಯಿಂದ ನಿರ್ಮಿಸಲಾಗುತ್ತಿದ್ದು, ಕಸ್ಟಮ್ಸ್ ಕ್ಲಿಯರೆನ್ಸ್ ಕಚೇರಿ, ಗೋದಾಮುಗಳು, ಪೂರ್ಣ ಉದ್ದದ ರೈಲ್ವೆ ಹಳಿಗಳು ಮತ್ತು ವ್ಯಾಗನ್ ಪ್ಲಾಟ್‌ಫಾರ್ಮ್‌ಗಳನ್ನು ಒಳಗೊಂಡಿದೆ. ಸದ್ಯ ಕೇಂದ್ರ ಹಣಕಾಸು ಸಚಿವಾಲಯದಿಂದ ಕಸ್ಟಮ್ಸ್ ಅನುಮೋದನೆ ಪಡೆಯುವ ಮೂಲಕ ರಫ್ತುದಾರರಿಗೆ ಬಹುದೊಡ್ಡ ನಿರೀಕ್ಷೆಯನ್ನು ಹುಟ್ಟಿಸಿದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸಲ್ಲಿಸಿದ ಮನವಿಯ ಮೇರೆಗೆ ಕಡಕೋಳದಲ್ಲಿರುವ ಮಲ್ಟಿ–ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್‌ಗೆ ಕಸ್ಟಮ್ಸ್ ಕ್ಲಿಯರೆನ್ಸ್ ಸೌಲಭ್ಯವನ್ನು ಅನುಮೋದಿಸಲಾಗಿದೆ ಎಂದು ಹೇಳಿದರು.

ಕಡಕೊಳದಲ್ಲಿನ ಎಂಎಂಎಲ್‌ಪಿ ಮೂಲಕ ಆಮದು ಮತ್ತು ರಫ್ತು ಚಟುವಟಿಕೆಗಳಿಗೆ ಅಗತ್ಯವಾದ ಮೂಲಸೌಕರ್ಯ ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಅದರಂತೆ ಕಸ್ಟಮ್ಸ್ ಅನುಮೋದನೆ ದೊರೆತಿದ್ದು, 'ಇನ್ನು ಮುಂದೆ ರಫ್ತುದಾರರು ಕಸ್ಟಮ್ಸ್ ಸಂಬಂಧಿತ ರಫ್ತು ಕಾರ್ಯ ವಿಧಾನಗಳಿಗಾಗಿ ದೂರದ ಬಂದರುಗಳನ್ನು ಅವಲಂಬಿಸಬೇಕಾಗಿಲ್ಲ. ರಫ್ತುದಾರರು ಹೆಚ್ಚಿನ ಅನುಕೂಲಗಳನ್ನು ಪಡೆದುಕೊಳ್ಳಲಿದ್ದಾರೆ' ಎಂದು ತಿಳಿಸಿದರು.



ಮೈಸೂರಿನ ಕಡಕೋಳದಲ್ಲಿರುವ ಮಲ್ಟಿ–ಮೋಡಲ್ ಲಾಜಿಸ್ಟಿಕ್ ಪಾರ್ಕ್‌ನಲ್ಲಿ ಕಂಟೈನರ್‌ಗಳನ್ನು ಕಾಣಬಹುದು.

ಭಾರತೀಯ ಕಂಟೈನರ್ ಕಾರ್ಪೋರೇಷನ್ ಹಾಗೂ ಒಳನಾಡಿನ ಕಂಟೈನರ್ ಡಿಪೋ ಈ ವರ್ಷದ ಮೇ ತಿಂಗಳಲ್ಲಿ ಯಶಸ್ವಿಯಾಗಿ ಕಂಟೈನರ್‌ಗಳನ್ನು ರವಾನಿಸುವ ಮೂಲಕ ರೈಲ್ವೆ ಲಾಜಿಸ್ಟಿಕ್ಸ್ ವಲಯದಲ್ಲಿ ಹೊಸ ಅಧ್ಯಾಯವನ್ನು ಬರೆದಿದೆ. ರೈಲು ಮಾರ್ಗದ ಮೂಲಕ ಒಡಿಶಾಗೆ 2,200 ಟನ್ ಡ್ಯೂನೈಟ್ ಖನಿಜವನ್ನು ರವಾನಿಸಲಾಗಿದೆ. ಕಸ್ಟಮ್ಸ್ ಅನುಮೋದನೆ ದೊರೆತಿರುವುದರಿಂದ ಜೆಕೆ ಟೈರ್, ಟಿವಿಎಸ್, ನೆಸ್ಲೆ ಮತ್ತು ರಿಷಿ ಎಫ್‌ಐಬಿಸಿಯಂತಹ ಕೈಗಾರಿಕೆಗಳಿಗೆ ರಫ್ತು ಸಾಗಣೆಯನ್ನು ನಿರ್ವಹಿಸಲು ಸಿದ್ಧತೆ ನಡೆಸುತ್ತಿದೆ ಎಂದು ಮಲ್ಟಿ–ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್ ಹಾಗೂ ಭಾರತೀಯ ಕಂಟೈನರ್ ಕಾರ್ಪೋರೇಷನ್ ಜನರಲ್ ಮ್ಯಾನೇಜರ್ ಎಂ.ಪಿ.ವಿಜಯ್ ಕುಮಾರ್ ತಿಳಿಸಿದ್ದಾರೆ.

ಭಾರತದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಮೈಸೂರನ್ನು ಅಂತಾರಾಷ್ಟ್ರೀಯ ರಫ್ತು ಕೇಂದ್ರವನ್ನಾಗಿಸುವ ನಿಟ್ಟಿನಲ್ಲಿ ಮಲ್ಟಿ–ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್ ಮೂಲಕ ಬೇರೆ ಬೇರೆ ಕಡೆಗಳಿಗೆ ರಫ್ತು ಸಾಗಣೆ ಮಾಡಲು ಹೆಚ್ಚು ಒತ್ತು ನೀಡಲಾಗುತ್ತಿದೆ. ಕಾರ್ಯಾರಂಭವಾದಾಗಿನಿಂದ ಇದುವರೆಗೆ ಸ್ವೀಕರಿಸಿದ ಸರಕು ಚಲನೆ ಕಂಡಿದೆ ಮತ್ತು ಇಲ್ಲಿಯವರೆಗೆ ಒಟ್ಟು 660 ಕಂಟೈನರ್‌ಗಳ ಮೂಲಕ ನಿರ್ವಹಿಸಲಾಗಿದೆ. ಇವುಗಳಲ್ಲಿ ಡ್ಯೂನೈಟ್ ಖನಿಜವನ್ನು ಹೊತ್ತ ಇಪ್ಪತ್ತು ಅಡಿ ಕಂಟೇನರ್‌ಗಳನ್ನು ಮೈಸೂರಿನಿಂದ ಒಡಿಶಾಗೆ ಸಾಗಿಸಲಾಗಿದ್ದು, ನೆಸ್ಲೆ ಉತ್ಪನ್ನಗಳನ್ನು ತುಂಬಿದ ಇಪ್ಪತ್ತು ಅಡಿ ಎತ್ತರದ 80 ಕಂಟೈನರ್‌ಗಳನ್ನು ಕೋಲ್ಕತ್ತಾಗೆ ರವಾನಿಸಲಾಗಿದೆ ಎಂದು ಮಾಹಿತಿ ನೀಡಿದರು.

ರಫ್ತುದಾರರಿಗೆ ಅರಿವು: ಕಡಕೋಳದಲ್ಲಿನ ಎಂಎಂಎಲ್‌ಪಿ ಸೌಲಭ್ಯವು ದೇಶದ ವ್ಯಾಪಾರ ಕ್ಷೇತ್ರದಲ್ಲಿ ಕೊರತೆಯನ್ನು ನೀಗಿಸಲು ಮತ್ತು ವ್ಯವಹಾರವನ್ನು ಸುಲಭಗೊಳಿಸಲು ತನ್ನದೆ ಕೊಡುಗೆ ನೀಡುತ್ತಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿನ ವ್ಯಾಪಾರಕ್ಕೆ ಪ್ರವೇಶ ದ್ವಾರವಾಗಿದ್ದು, ಸ್ಥಳೀಯ ಕೈಗಾರಿಕೆಗಳು ಮತ್ತು ವ್ಯಾಪಾರಿಗಳಿಗೆ ಇಲ್ಲಿನ ಅನುಕೂಲತೆಗಳ ಬಗ್ಗೆ ಮಾಹಿತಿ ಪಡೆದು ಇತರೆ ರಫ್ತುದಾರರಿಗೂ ಅರಿವು ಮೂಡಿಸಬೇಕು. ಇದರಿಂದ ರಫ್ತು ಮತ್ತು ಆಮದು ಮಾಡಿಕೊಳ್ಳುವ ವ್ಯವಹಾರ ವಿಸ್ತರಣೆಯಾಗಲಿದೆ ಎಂದು ತಿಳಿಸಿದರು.

ದೈನಂದಿನ ಸಾಮರ್ಥ್ಯ: ಸದ್ಯಕ್ಕೆ ಮೂರು ಸರಕು ರೈಲುಗಳ ಮೂಲಕ 300 ಕಂಟೈನರ್‌ಗಳನ್ನು ನಿರ್ವಹಿಸಲಾಗುತ್ತಿದೆ. ಪೂರ್ಣ ಬಳಕೆಯ ನಂತರ 12 ಸಾವಿರ ಕಂಟೈನರ್‌ಗಳಿಗೆ ವಿಸ್ತರಣೆಯಾಗಲಿದೆ. ವಿಶಾಲವಾದ ಎರಡು ಗೋದಾಮುಗಳಿದ್ದು, 160 ಹೊರಹೋಗುವ ಕಂಟೈನರ್‌ಗಳು ಮತ್ತು 500 ಒಳಬರುವ ಕಂಟೈನರ್‌ಗಳು ಸೇರಿ ಕಂಟೈನರ್ ಸಂಚಾರವನ್ನು 660ಕ್ಕೆ ಹೆಚ್ಚಿಸಲಾಗಿದೆ ಎಂದು ವಿಜಯ್ ಕುಮಾರ್ ಹೇಳಿದರು.

ಹಲವು ಅಡೆತಡೆಗಳನ್ನು ದಾಟಿ ಯೋಜನೆ ತರಲಾಗಿದೆ...

ಮೈಸೂರಿಗೆ ಹಲವಾರು ಯೋಜನೆಗಳನ್ನು ತರಲಾಗಿದ್ದರೂ, ಸ್ಥಳೀಯ ಉದ್ಯೋಗ ಸೃಷ್ಟಿಯು ಕೈಗಾರಿಕಾ ಕ್ಷೇತ್ರದ ಬೆಳವಣಿಗೆಯ ಮೇಲೆ ಅವಲಂಬಿತವಾಗಿದೆ. ಈ ನಿಟ್ಟಿನಲ್ಲಿ ಸರಕು ಸಾಗಣೆಯನ್ನು ಸುಲಭಗೊಳಿಸಲು, ಮೈಸೂರು ಹಾಗೂ ಸುತ್ತಮುತ್ತಲಿನ ಕೈಗಾರಿಕೆಗಳಿಗೆ ರಫ್ತು–ಆಮದು ಪ್ರಕ್ರಿಯೆಗಳನ್ನು ವೇಗಗೊಳಿಸಲು 102 ಕೋಟಿ ರೂ.ವೆಚ್ಚದಲ್ಲಿ ಅತ್ಯಾಧುನಿಕ ಮಲ್ಟಿ–ಮೋಡಲ್ ಲಾಜಿಸ್ಟಿಕ್ ಪಾರ್ಕ್ ಸ್ಥಾಪಿಸಲಾಯಿತು. ಆರಂಭದಲ್ಲಿ ಗುತ್ತಿಗೆದಾರರ ಕೆಲಸವನ್ನು ಅರ್ಧದಲ್ಲಿಯೇ ಕೈಬಿಟ್ಟನು. ನಂತರ ಮರು–ಟೆಂಡರ್ ಕರೆದು ಪೂರ್ಣಗೊಳಿಸಲಾಯಿತು. ಲೋಕಸಭಾ ಚುನಾವಣೆಗೆ ಮೊದಲು, ಭೂ–ಸಂಬಂಧಿತ ಸಮಸ್ಯೆಗಳು ಮತ್ತು ಆಡಳಿತಾತ್ಮಕ ಅಡಚಣೆಗಳನ್ನು ಬಗೆಹರಿಸಿದೆ ಎಂದು ಖಚಿತಪಡಿಸಿಕೊಂಡ ನಂತರ ಉದ್ಘಾಟಿಸಲಾಯಿತು. ಈಗ ಕಸ್ಟಮ್ಸ್ ಅನುಮೋದನೆ ದೊರೆತಿರುವುದರಿಂದ ಕೈಗಾರಿಕಾ ಚಟುವಟಿಕೆಗಳು ಹೆಚ್ಚಾಗಿ ಮೈಸೂರು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಜನರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

– ಪ್ರತಾಪ್‌ಸಿಂಹ, ಮಾಜಿ ಸಂಸದ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ

ಯೋಗ ಪ್ರದರ್ಶನದಲ್ಲಿ ವಿಕಲಚೇತನರ ಉತ್ಸಾಹ

ಮೈಸೂರು, ಜೂ.22(ವಿವಿಹೆಚ್)–ಇಲ್ಲಿನ ಐತಿಹಾಸಿಕ ಅರಮನೆ ಆವರಣದಲ್ಲಿ ಭಾನುವಾರ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಎರಡನೇ ಆವೃತ್ತಿಯು ವಿಕಲಚೇತನರ ಸಬಲೀಕರಣ ಹಾಗೂ ಒಳಗೊಳ್ಳುವಿಕೆಗೆ ಸಾಕ್ಷಿಯಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ 28 ಅಂಧ ಮಕ್ಕಳು ತಮ್ಮ ಉತ್ಸಾಹಭರಿತ ಯೋಗ ಪ್ರದರ್ಶನದ ಮೂಲಕ ಇಡೀ ಪ್ರೇಕ್ಷಕ ಸಮೂಹವನ್ನು ಮಂತ್ರಮುಗ್ಧಗೊಳಿಸಿದರು.

ಕೇಂದ್ರ ಆಯುಷ್ ಸಚಿವಾಲಯ ಹಾಗೂ ಮೈರಾ ಬಿಸಿನೆಸ್ ಸ್ಕೂಲ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಈ ವಿಶೇಷ ಯೋಗಾಚರಣೆಯು, ವಿಕಲಚೇತನರಲ್ಲಿ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ವೃದ್ಧಿಸುವಲ್ಲಿ ಯೋಗದ ಪಾತ್ರ ಎಷ್ಟು ಮುಖ್ಯ ಎಂಬುದನ್ನು ಸಾಬೀತುಪಡಿಸಿತು. ಅಂಧ ಮಕ್ಕಳು ಸರಣಿ ಯೋಗಾಸನಗಳನ್ನು ಅತ್ಯಂತ ಆತ್ಮವಿಶ್ವಾಸ, ಶಿಸ್ತು ಹಾಗೂ ಅದ್ಭುತ ಸಮನ್ವಯತೆಯೊಂದಿಗೆ ಪ್ರದರ್ಶಿಸಿ ಎಲ್ಲರ ಗಮನ ಸೆಳೆದರು.

ಇದೇ ವೇಳೆ, ಅಂಧ ಯೋಗಾಸಕ್ತರಿಗೆ ತರಬೇತಿ ನೀಡುವ ಶಿಕ್ಷಕರಿಗಾಗಿ ಸಿದ್ಧಪಡಿಸಲಾದ ವಿಶೇಷ ಕೈಪಿಡಿಯನ್ನು (Training Manual for Yoga Instructors Working with Individuals with Visual Impairment) ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿ, ಅಂಧರಿಗೆ ಹೆಚ್ಚು ಪರಿಣಾಮಕಾರಿಯಾಗಿ ಹಾಗೂ ಸುರಕ್ಷಿತವಾಗಿ ಯೋಗ ತರಬೇತಿ ನೀಡಲು ಅಗತ್ಯವಿರುವ ತಂತ್ರಗಳು ಮತ್ತು ಪ್ರಾಯೋಗಿಕ ಮಾರ್ಗದರ್ಶನಗಳನ್ನು ಈ ಕೈಪಿಡಿ ಒಳಗೊಂಡಿದೆ. ಇದು ಒಳಗೊಳ್ಳುವ ಯೋಗಾಭ್ಯಾಸದ ನಿಟ್ಟಿನಲ್ಲಿ ಮಹತ್ವದ ಮೈಲಿಗಲ್ಲಾಗಿದ್ದು, ಯೋಗದ ಲಾಭಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು ಎಂಬ ಬದ್ಧತೆಯನ್ನು ಎತ್ತಿ ಹಿಡಿಯುತ್ತದೆ. ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರಿಗೆ ಮತ್ತು ಸಂಸ್ಥೆಗಳಿಗೆ ಈ ಕೈಪಿಡಿ ಅತ್ಯಂತ ಉಪಯುಕ್ತ ಸಂಪನ್ಮೂಲವಾಗಲಿದೆ ಎಂದು ಹೇಳಿದರು.


ಅಂಧ ಯೋಗಾಸಕ್ತರಿಗೆ ತರಬೇತಿ ನೀಡುವ ಶಿಕ್ಷಕರಿಗಾಗಿ ಸಿದ್ಧಪಡಿಸಲಾದ ವಿಶೇಷ ಕೈಪಿಡಿಯನ್ನು ಸಂಸದ ಯದುವೀರ್ ಬಿಡುಗಡೆ ಮಾಡಿದರು.

ಫಿಫಾ ಫುಟ್‌ಬಾಲ್ ವಿಶ್ವಕಪ್-2026

92 ವರ್ಷದ ಬಳಿಕ ಈಜಿಪ್ಟ್‌ಗೆ ಮೊದಲ ಗೆಲುವು

ವ್ಯಾಂಕೋವರ್, ಜೂ.22– ಮೊಹಮ್ಮದ್ ಸಲಾಹ್ ನೇತೃತ್ವದ ಈಜಿಪ್ಟ್ ತಂಡ ನ್ಯೂಜಿಲೆಂಡ್ ಅನ್ನು 3–1 ಅಂತರದ ಗೋಲುಗಳಿಂದ ಸೋಲಿಸುವ ಮೂಲಕ ಇತಿಹಾಸ ನಿರ್ಮಿಸಿದೆ.

1934ರಲ್ಲಿ ವಿಶ್ವಕಪ್‌ಗೆ ಪಾದಾರ್ಪಣೆ ಮಾಡಿದ ಈಜಿಪ್ಟ್ 92 ವರ್ಷಗಳ ಬಳಿಕ ಮೊದಲ ಗೆಲುವು ದಾಖಲಿಸಿತು. ಇದರೊಂದಿಗೆ ಈಜಿಪ್ಟ್ ಜಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ನಾಕೌಟ್ ಆಸೆಯನ್ನು ಬಲಪಡಿಸಿಕೊಂಡಿದೆ.

ವ್ಯಾಂಕೋವರ್‌ನಲ್ಲಿ ನಡೆದ ಪಂದ್ಯದಲ್ಲಿ ಫಿನ್ ಸರ್ಮನ್ (15ನೇ ನಿಮಿಷ) ಅವರ ಗೋಲಿನಿಂದ ನ್ಯೂಜಿಲೆಂಡ್ ಆರಂಭಿಕ ಮುನ್ನಡೆ ಸಾಧಿಸಿತು. ಆದರೆ ದ್ವಿತೀಯಾರ್ಧದಲ್ಲಿ ಈಜಿಪ್ಟ್ ಬಲಿಷ್ಠ ಪುನರಾಗಮನ ಮಾಡಿತು.



52ನೇ ನಿಮಿಷದಲ್ಲಿ ಮುಸ್ತಫಾ ಜಿಕೊ ಗೋಲು ಗಳಿಸುತ್ತಿದ್ದಂತೆ ಈಜಿಪ್ಟ್ ಸಮಬಲ ಸಾಧಿಸಿತು. ಇದರ ಬೆನ್ನಲ್ಲೆ ನಾಯಕ ಮೊಹಮ್ಮದ್ ಸಲಾಹ್ 62ನೇ ನಿಮಿಷದಲ್ಲಿ ಜಿಕೊ ಅವರೊಂದಿಗೆ ಅತ್ಯುತ್ತಮ ಸಮನ್ವಯ ಸಾಧಿಸಿ, ಅದ್ಭುತ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ಒದಗಿಸಿದರು. ಅಂತಿಮವಾಗಿ 82ನೇ ನಿಮಿಷದಲ್ಲಿ ಟ್ರೆಜೆಗುಟ್ ಮೂರನೇ ಗೋಲು ಗಳಿಸಿ ತಂಡದ ಗೆಲುವು ಖಚಿತ ಪಡಿಸಿದರು.

ಡ್ರಾ ಆದರೆ 32ನೇ ಸುತ್ತಿಗೆ ಈಜಿಪ್ಟ್: ಈ ಗೆಲುವಿನೊಂದಿಗೆ ಈಜಿಪ್ಟ್ ಜಿ ಗುಂಪಿನಲ್ಲಿ ಅಗ್ರಸ್ಥಾನಕ್ಕೆ ತಲುಪಿದೆ. ಆದರೆ ನಾಕೌಟ್ ಇನ್ನೂ ದೃಢಪಟ್ಟಿಲ್ಲ. ಈಜಿಪ್ಟ್ ಶುಕ್ರವಾರ ಸಿಯಾಟಲ್‌ನಲ್ಲಿ ಇರಾನ್ ವಿರುದ್ಧ ನಿರ್ಣಾಯಕ ಪಂದ್ಯ ಆಡಲಿದ್ದು, ಮುಂದಿನ ಹಂತಕ್ಕೆ ಮುನ್ನಡೆಯಲು ಈ ಪಂದ್ಯದಲ್ಲಿ ಕನಿಷ್ಠ ಡ್ರಾ ಆದರೂ ಮಾಡಿಕೊಳ್ಳಬೇಕಾಗಿದೆ. ಉಳಿದಂತೆ ಇರಾನ್ ಮತ್ತು ಬೆಲ್ಜಿಯಂ ತಲಾ 2 ಅಂಕಗಳೊಂದಿಗೆ ಜಿ ಗುಂಪಿನಲ್ಲಿ ಕ್ರಮವಾಗಿ 2 ಮತ್ತು 3ನೇ ಸ್ಥಾನಗಳಲ್ಲಿದ್ದು, ನ್ಯೂಜಿಲೆಂಡ್ ಒಂದು ಅಂಕದೊಂದಿಗೆ ನಾಲ್ಕನೇ ಸ್ಥಾನಕ್ಕೆ ಕುಸಿದಿದೆ.

ಬಲಿಷ್ಠ ಬೆಲ್ಜಿಯಂಗೆ ಶಾಕ್ ನೀಡಿದ ಇರಾನ್

ಲಾಸ್ ಏಂಜಲೀಸ್, ಜೂ.22– ಫಿಫಾ ವಿಶ್ವಕಪ್‌ನ ಗ್ರೂಪ್ ಜಿ ಗುಂಪಿನ ಪಂದ್ಯದಲ್ಲಿ ಬೆಲ್ಜಿಯಂ ಮತ್ತು ಇರಾನ್ ನಡುವಿನ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು.

ಲಾಸ್ ಏಂಜಲೀಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎರಡೂ ತಂಡಗಳಿಗೆ ಹಲವಾರು ಅವಕಾಶ ಸಿಕ್ಕಿದರಾದರೂ ಗೋಲು ಗಳಿಸಲು ಸಾಧ್ಯವಾಗಲಿಲ್ಲ. 66ನೇ ನಿಮಿಷದಲ್ಲಿ ನಾಥನ್ ನ್ಗೋಯ್ ಕೆಂಪು ಕಾರ್ಡ್ ಪಡೆದಾಗ ಬೆಲ್ಜಿಯಂ ದೊಡ್ಡ ಹಿನ್ನಡೆ ಅನುಭವಿಸಿತು. ಇದರಿಂದಾಗಿ ತಂಡವು ಉಳಿದ ಪಂದ್ಯವನ್ನು 10 ಜನರೊಂದಿಗೆ ಆಡಬೇಕಾಯಿತು. ಇದರ ಹೊರತಾಗಿಯೂ ಇರಾನ್ ಮುನ್ನಡೆ ಸಾಧಿಸಲು ಸಾಧ್ಯವಾಗಲಿಲ್ಲ ಮತ್ತು ಎರಡೂ ತಂಡಗಳು ತಲಾ ಒಂದು ಪಾಯಿಂಟ್‌ಗೆ ತೃಪ್ತಿಪಡಬೇಕಾಯಿತು.



ಉರುಗ್ವೆ–ಕೇಪ್ ವರ್ಡೆ ಪಂದ್ಯ ಡ್ರಾನಲ್ಲಿ ಅಂತ್ಯ



ಮಿಯಾಮಿ: ಫಿಫಾ ವಿಶ್ವಕಪ್‌ನಲ್ಲಿ ಕೇಪ್ ವರ್ಡೆ ತಂಡ ಅಚ್ಚರಿ ಮೂಡಿಸುತ್ತಲೇ ಇದೆ. ಮೊದಲ ಬಾರಿಗೆ ವಿಶ್ವಕಪ್‌ಗೆ ಪ್ರವೇಶ ಪಡೆದಿರುವ ಈ ತಂಡ ದೊಡ್ಡ ವೇದಿಕೆಯಲ್ಲಿ ಅದ್ಭುತ ಪ್ರದರ್ಶನ ನೀಡುತ್ತಿದೆ.

ತನ್ನ ಮೊದಲ ಪಂದ್ಯದಲ್ಲಿ ಸ್ಪೇನ್ ವಿರುದ್ಧ ಡ್ರಾ ಮಾಡಿಕೊಂಡಿದ್ದ ಕೇಪ್ ವರ್ಡೆ ಇದೀಗ 2 ಬಾರಿಯ ವಿಶ್ವ ಚಾಂಪಿಯನ್ ಉರುಗ್ವೆಗೂ ಶಾಕ್ ನೀಡಿದೆ. ಇಂದು ನಡೆದ ಉಭಯ ತಂಡಗಳ ನಡುವಿನ ರೋಚಕ ಪಂದ್ಯ 2–2 ಡ್ರಾದಲ್ಲಿ ಕೊನೆಗೊಂಡಿತು. ಈ ಫಲಿತಾಂಶ ಕೇಪ್ ವರ್ಡೆಗೆ 2 ಅಂಕ ತಂದು ಕೊಟ್ಟಿದ್ದಲ್ಲದೇ ಮುಂದಿನ ಸುತ್ತಿಗೆ ಮುನ್ನಡೆಯುವ ಅವಕಾಶ ಜೀವಂತವಾಗಿರಿಸಿದೆ.

ಪಂದ್ಯದ ಆರಂಭದಿಂದಲೂ ಕೇಪ್ ವರ್ಡೆ ಆತ್ಮವಿಶ್ವಾಸ ಪ್ರದರ್ಶಿಸಿತು. 21ನೇ ನಿಮಿಷದಲ್ಲಿ ಫಿನಾ ಅದ್ಭುತ ಫ್ರೀ ಕಿಕ್ ಮೂಲಕ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಇದು ಫಿಫಾ ವಿಶ್ವಕಪ್‌ನಲ್ಲಿ ಕೇಪ್ ವರ್ಡೆಯ ಮೊದಲ ಗೋಲಾಗಿತ್ತು. ಗಮನಾರ್ಹವಾಗಿ ತಂಡವು ತನ್ನ ಮೊದಲ ವಿಶ್ವಕಪ್ ಗೋಲನ್ನು ನೇರವಾಗಿ ಫ್ರೀ ಕಿಕ್‌ನಿಂದ ಗಳಿಸಿತು. ವಿಶ್ವಕಪ್ ಇತಿಹಾಸದಲ್ಲಿ 60 ವರ್ಷಗಳ ಬಳಿಕ ತಂಡವೊಂದು ಫ್ರೀ ಕಿಕ್‌ನಿಂದ ತನ್ನ ಗೋಲು ಗಳಿಸಿದ್ದು ಇದು ಮೊದಲ ಬಾರಿ.

ಆದಾಗ್ಯೂ ಪಂದ್ಯದ ಮೊದಲಾರ್ಧದಲ್ಲಿ ಉರುಗ್ವೆ ಮತ್ತೆ ಚೇತರಿಸಿಕೊಂಡು, ಸತತ 2 ಗೋಲುಗಳನ್ನು ಗಳಿಸಿ 2–1 ಗೋಲುಗಳಿಂದ ಮುನ್ನಡೆ ಸಾಧಿಸಿತು. ಒಂದು ಹಂತದಲ್ಲಿ ಉರುಗ್ವೆ ಪಂದ್ಯದ ಮೇಲೆ ನಿಯಂತ್ರಣ ಸಾಧಿಸಿದಂತೆ ತೋರಿತ್ತು. ಆದರೆ ಕೇಪ್ ವರ್ಡೆ ಕೆಲವೇ ನಿಮಿಷಗಳಲ್ಲಿ ಎದುರಾಳಿ ತಂಡದ ಸಂಭ್ರಮವನ್ನು ಕೊನೆಗೊಳಿಸಿತು. ಪಂದ್ಯದ 57ನೇ ನಿಮಿಷದಲ್ಲಿ ಹೆಲಿಯೊ ವರೆಲಾ ಅವರನ್ನು ಬದಲಿ ಆಟಗಾರನಾಗಿ ತಂಡಕ್ಕೆ ಸೇರಿಸಲಾಯ್ತು. ಅವರು ಪಂದ್ಯಕ್ಕಿಳಿದ ಕೇವಲ 136 ಸೆಕೆಂಡುಗಳ ನಂತರ ಗೋಲು ಗಳಿಸುವ ಮೂಲಕ ಸ್ಕೋರ್ ಅನ್ನು 2–2 ಸಮಬಲಗೊಳಿಸಿದರು. ಇದು ಅವರ ಮೊದಲ ಅಂತರರಾಷ್ಟ್ರೀಯ ಗೋಲು ಕೂಡ ಆಗಿತ್ತು. ಈ ಗೋಲು ಪಂದ್ಯದ ಫಲಿತಾಂಶವನ್ನು ಬದಲಾಯಿಸಿದ್ದಲ್ಲದೆ, ಕೇಪ್ ವರ್ಡೆಗೆ ಮತ್ತೊಂದು ಐತಿಹಾಸಿಕ ಫಲಿತಾಂಶ ನೀಡಿತು.

ಸಾರ್ವಜನಿಕ ನೋಟೀಸು

ಅದಾಗಿ ನನ್ನ ಕಕ್ಷಿದಾರರಾದ ಶ್ರೀ ಆರ್. ವೆತ್ತಾಯಿಗಮ್ ಬಿನ್ ಲೇಟ್ ಎಂ. ರತಿನಾಮ್ ವಾಸ–ಮನೆ ನಂ: 366, 7ನೇ ಮೇನ್, ಹೆಬ್ಬಾಳು 1ನೇ ಹಂತ, ಮೈಸೂರು ಇವರ ಆದೇಶದ ಮೇರೆಗೆ ಈ ನೋಟಿಸನ್ನು ತಮಗೆ ನೀಡುತ್ತಿದ್ದು, ಸದರಿಯವರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಸ್ವತ್ತಿನ ಮಾಲೀಕರಾದ ಮೈಸೂರು ನಗರ–570 001, ಮಂಡಿ ಮೊಹಲ್ಲಾ, ರತನ್ ಸಿಂಗ್ ಲೇನ್, 3ನೇ ಕ್ರಾಸ್, ಮನೆ ನಂ: 1831, ಎಂ–10ಎ ರಲ್ಲಿ ವಾಸವಾಗಿರುವ ಶ್ರೀಮತಿ ಪ್ರಭಾವತಮ್ಮ ಕೋಂ ಲೇಟ್ ಈಶ್ವರ್ ರಾವ್ ರವರಿಂದ ಖರೀದಿಸಲು ಬಯಸಿರುವುದು ಸರಿಯಷ್ಟೆ. ಈ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ವ್ಯಕ್ತಿ ಹಕ್ಕುಬಾಧ್ಯತೆ, ಆಸಕ್ತಿ, ಇತ್ಯಾದಿ ಹೊಂದಿದ್ದಲ್ಲಿ, ಅಥವಾ ಸದರಿ ಷೆಡ್ಯೂಲ್ ಸ್ವತ್ತಿನ ಒಂದು ಭಾಗವನ್ನು ಕ್ರಯ ದಾನ, ಬಾಡಿಗೆಗೆ, ಭೋಗ್ಯ ಮಾಡಿದ್ದಲ್ಲಿ, ಪಿತ್ರಾರ್ಜಿತವಾಗಿದ್ದಲ್ಲಿ, ಬದಲಾವಣೆ ಕೋರಿದ್ದಲ್ಲಿ, ಕೋರ್ಟ್ ಅಟ್ಯಾಚ್ ಮೆಂಟ್ ಇದ್ದಲ್ಲಿ, ಟ್ರಸ್ಟಿಗೆ ಸೇರಿದ್ದಲ್ಲಿ, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ತಮ್ಮಲ್ಲಿರುವ ಮೂಲ ದಾಖಲಾತಿಗಳ ಸಮೇತವಾಗಿ ಈ ನೋಟೀಸು ಜಾರಿಗೊಳಿಸಿದ ದಿನಾಂಕದಿಂದ 15 ದಿನಗಳ ಒಳಗೆ ವಕೀಲರ ಕಛೇರಿಗೆ ತಂದು ತಲುಪಿಸುವುದು. ತಪ್ಪಿದಲ್ಲಿ ಈ ಸ್ವತ್ತಿನ ವಿಚಾರವಾಗಿ ಯಾವುದೇ ತಕರಾರು ಇರುವುದಿಲ್ಲ ಎಂದು ಪರಿಗಣಿಸಿ ಕ್ರಯ ನೋಂದಣಿ ಪೂರ್ಣಗೊಳಿಸಲಾಗುವುದು. ಸ್ವತ್ತು ಕ್ರಯ ನೋಂದಣಿಯಾದ ನಂತರ ಯಾರೇ ಬಂದು ಪರಿಹಾರ ಕೋರಿದಲ್ಲಿ ಅದು ಊರ್ಜಿತವಾಗುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಕರಿಗಳ ಗ್ರಾಮಕ್ಕೆ ಸೇರಿದ ಸರ್ವೆ ನಂ.301 ರಲ್ಲಿರುವ 1ಎಕರೆ 31ಗುಂಟೆ (ಒಂದು ಎಕರೆ ಮೂವತ್ತೊಂದು ಗುಂಟೆ) ಸ್ವತ್ತು ಈ ನೋಟೀಸಿನ ಸ್ವತ್ತಾಗಿದ್ದು, ಇದಕ್ಕೆ ಚಕ್ಕುಬಂದಿ ಈ ಕೆಳಕಂಡಂತೆ ಇರುತ್ತದೆ. ಪೂರ್ವಕ್ಕೆ: ಶ್ರೀ ರಾಮಣ್ಣ ಮತ್ತು ಶ್ರೀ ಭೋಗಪ್ಪ ಇವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ: ಹೆಬ್ಬಾಳ್ಳ, ಉತ್ತರಕ್ಕೆ: ಶ್ರೀ ಭೋಗಮಲ್ಲಯ್ಯ ರವರಿಗೆ ಸೇರಿದ ಜಮೀನು ದಕ್ಷಿಣಕ್ಕೆ : ಮೈಸೂರು–ಮಾನಂದವಾಡಿ ರಸ್ತೆ

ಸಹಿ/– ಅಭಿನಂದನ್ .ಹೆಚ್
ವಕೀಲರು
ನಂ. # 990, ಮೊದಲನೇ ಮಹಡಿ, ಇ&ಎಫ್ ಬ್ಲಾಕ್, ಪಂಚಮಂತ್ರ ರಸ್ತೆ, ಕುವೆಂಪುನಗರ, ಮೈಸೂರು–23. ಮೊ: 9964426903
ದಿನಾಂಕ:22.06.2026

PUBLIC NOTICE

This Public Notice is issued on behalf of my clients **(1) Sri Vijayabhaskar.C,** S/o Chandrashekarachar and **(2) Sri G. Dharanesh,** S/o. Gangadhar who are jointly intending to enter in to lease of the Schedule Properties mentioned hereunder. In case any of the any third parties have any objections to the same, they may contact the undersigned within **15 days** from publication of this notice with specific documents and nature of their objections. In case no objections are received within a period of 15 days it will be considered as there are no objections from any one and my clients will proceed to enter in to the Lease.

Item No. 1: All that piece and parcel of the Agricultural Property situated at Sy. No.102/2, Kalahalli Village, Jayapura Hobli, Mysore Taluk & District measuring 1 Acre and 08 Guntas of land bounded on: East by : Sy. No. 102 Land, West by : Road, North by : Road and South by : Road.

Item No. 2: All that piece and parcel of the Agricultural Property situated at Sy. No. 119/2, Kalahalli Village, Jayapura Hobli, Mysore Taluk & District measuring 2 Acres and 0-24-0.8 Guntas of land bounded on: East by: Sy. No. 102 Land, West by: Road, North by: Block-1 and, South by: L Sy. No. 101.

Sd/- **M.S. SATISH,** B.A. LLB.,
Advocate & Notary Public, Govt. of India,
5/1, SLN Mahal, 2nd Floor, 3rd Cross,
Malleshwaram, Bengaluru-560003,
Mob : 94483 06826.
Date : 19-06-2026, Place: Mysuru.

ಪುರಸಭೆ ಕಾರ್ಯಾಲಯ, ವಿರಾಜಪೇಟೆ
ಕೊಡಗು ಜಿಲ್ಲೆ – 571218
ದೂರವಾಣಿ ಸಂಖ್ಯೆ :– 08274–257332
ಇ–ಮೇಲ್: : itstaff_ulb_virajpet@yahoo.com
ವೆಬ್‌ಸೈಟ್ : www.virajpettown.mrc.gov.in
ಸುಂದರ ವಿರಾಜಪೇಟೆ ಸ್ವಚ್ಛ ಪಟ್ಟಣ

ಕ್ರ.ಸಂ.ನಂ.ಪು.ವಿ/ಎಸ್.ಡಿ.ಎಂ.ಎಫ್/ಟೆ–03/2026–27 ದಿನಾಂಕ: 22–06–2026

"ಟೆಂಡರ್ ಪ್ರಕಟಣೆ"
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ ರಾಜ್ಯ ಉಪಶಮನ ನಿಧಿ (SDMF) ಅಡಿ ಉಪಶಮನ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರಂತೆ ಲೋಕೋಪಯೋಗಿ ಇಲಾಖೆಯಲ್ಲಿ ಮೊದಲನೇ ದರ್ಜೆಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರುಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆ.ಡಬ್ಲ್ಯೂ 4ರ ನಿಯಮಗಳಿಗನುಸಾರ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್ ಸೈಟ್ ಮೂಲಕ ಪಡೆದು ಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಟೆಂಡರ್ ಪ್ರಕಟಣೆಯ ದಿನಾಂಕದಲ್ಲಿ ಬದಲಾವಣೆ ಇದ್ದಲ್ಲಿ ಮತ್ತು ಹೆಚ್ಚಿನ ಮಾಹಿತಿಯನ್ನು ಸದರಿ ಪೋರ್ಟಲ್ ಮುಖಾಂತರ ಪಡೆಯುವುದು.

1.	ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ	: 23/06/2026 ರಿಂದ 07/07/2026 ಸಂಜೆ 17:30 ಗಂಟೆಗೆ
2.	ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	: 29/06/2026 ಬೆಳಗ್ಗೆ 11.00 ಗಂಟೆಗೆ
3.	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	: 07/07/2026 ಸಂಜೆ 17:00 ಗಂಟೆವರೆಗೆ
4.	ಟೆಂಡರ್ ತೆರೆಯುವ ದಿನಾಂಕ	: 09/07/2026 ಬೆಳಗ್ಗೆ 11.30 ಗಂಟೆಯ ನಂತರ
5.	ಟೆಂಡರುಗಳನ್ನು ತೆರೆಯುವ ಸ್ಥಳ	: ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್: www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/– ಶ್ರೀ ನಿತಿನ್ ಚಕ್ಕಿ ಕೆ.ಎ.ಎಸ್
ಆಡಳಿತಾಧಿಕಾರಿ, ಪುರಸಭೆ, ವಿರಾಜಪೇಟೆ

ಸಹಿ/– (ಶ್ರೀ ನಾಚಪ್ಪ ಪಿ.ಕೆ)
ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.